ಮಾಲತೀ ಮಾಧವ

Rare b
ಶಿ. ಮಾಲತೀ ಮಾಧವ
ಪರಾಮರ್ಶನ ಗ್ರಂಥ
ಅಕ್ಷರ ಗ್ರಂಥಾಲಯ
09/1987
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ
1959
853.6
BHA



ಸಮಾಜ ಪುಸ್ತಕಾಲಯ
ಧಾರವಾಡ

ಪರಾಮರ್ಶೆಗಾಗಿ

ಕಾ ಹ 72

ಪದ್ಯಸಂಯುಕ್ತ [illegible]
[illegible]
[illegible]
30/6/59

ಪ್ರತಿಭಾ ಗ್ರಂಥಮಾಲೆ—ವರುಷ ೧೬, ಕಿರಣ ೫

ಮಾಲತೀ-ಮಾಧವ

(ಸಂಸ್ಕೃತ ನಾಟಕ ಕಥೆ)

ಲೇಖಕರು :

ಎನ್. ಭೀಮಭಟ್ಟ

ಸಮಾಜ ಪುಸ್ತಕಾಲಯ, ಧಾರವಾಡ

ಮುದ್ರಕರು : ಪ್ರಕಾಶಕರು
ಭಾಲಚಂದ್ರ ಘಾಣೇಕರ
ಪ್ರತಿಭಾ ಮುದ್ರಣ
ಸಮಾಜ ಪುಸ್ತಕಾಲಯ
ಧಾರವಾಡ

091987 Ⓡ

ಬೆಲೆ: ರೂ. ೧.೦೦

853.6
BHE m

ಪ್ರಥಮ ಮುದ್ರಣ
ಏಪ್ರಿಲ್ ೧೯೫೯

ಹಕ್ಕು ಗ್ರಂಥಕರ್ತರ
ಸ್ವಾಧೀನದಲ್ಲಿ

ಮುನ್ನುಡಿ

ಮಹಾಕವಿ ಭವಭೂತಿಯ ‘ಮಾಲತೀಮಾಧವ’ದ ಕಥೆಯನ್ನಿಲ್ಲಿ ಸಾಕಷ್ಟು ವಿಸ್ತಾರವಾಗಿ ಕನ್ನಡಕ್ಕಿಳಿಸಿದ್ದೇನೆ. ಈಗಾಗಲೇ ಈ ಕಥೆ ಕನ್ನಡದಲ್ಲಿ ಬೇರೆ ಬೇರೆ ರೂಪದಿಂದ ಬಂದರೂ, ನಾಟಕದ ಸಾಹಿತ್ಯಾಂಶವನ್ನೊಳಗೊಂಡು ಚಿತ್ರಿಸಲ್ಪಡಬೇಕೆಂದು ಈ ಸಾಹಸಕ್ಕೆಳಸಿದ್ದೇನೆ. ಹಲವಾರು ಶತಮಾನಗಳ ಹಿಂದಿನ ಸಾಮಾಜಿಕ ಚಿತ್ರವಿದು ಎಂಬುದನ್ನು ಗಮನಿಸಿದರೆ, ಹಾಗೂ ಇಂದಿನ ಕಾದಂಬರಿಗಳ ವಸ್ತುವನ್ನು ನೋಡಿದರೆ ಈ ಕಥೆಯ ಉತ್ತಮರ್ಣತೆಯು ಅಭಿವ್ಯಕ್ತವಾಗಬಹುದು.

ಕಥಾಪರಿಚಯದೊಂದಿಗೆ ಕವಿಕಾವ್ಯ ಪರಿಚಯವನ್ನು ಸೇರಿಸಿದ್ದೇನೆ. ಈ ಕೃತಿಯನ್ನು ಪ್ರಕಟಿಸುತ್ತಿರುವ ಶ್ರೀ ಭಾಲಚಂದ್ರ ಘಾಣೇಕರರಿಗೂ, ಅಂದವೂ ಶಾಸ್ತ್ರೀಯವೂ ಕಥೋಚಿತವೂ ಆದ ಮುಖಚಿತ್ರ ಬರೆದ ಗೆ। ಕಲಾವಿದ ಟಿ. ಕೃಷ್ಣರಾವ್ ಅವರಿಗೂ ಅಭಿನಂದನೆಗಳು.

೧೭—೩—’೫೯ ಎನ್. ಭೀಮಭಟ್ಟ

ಮಾಲತೀ–ಮಾಧವ

ಪ್ರಥಮ ದರ್ಶನ

ಅಂದು ನಗರದ ಮದನೋದ್ಯಾನಕ್ಕೆ ಎಲ್ಲಿಲ್ಲದ ಸೊಬಗು ! ವೃಂದಾರಕರ ನಂದನವನ್ನೇ ನಾಚಿಸುವಂಥ ಥಳಕು. ಅಂದಚೆಂದದ ಘಮಘಮಿಸುವ ಕುಸುಮಸಂಚಯಗಳು, ಉನ್ನತವೃಕ್ಷಗಳನ್ನು ಅವಲಂಬಿಸಿ ನಿಂತ ಲಲಿತ ಲತಾಕುಂಜಗಳು, ನಿರಂತರ ಝೇಂಕರಿಸುತ್ತಿರುವ ಭ್ರಮರಸಂದೋಹ, ಸರೋವರಗಳಲ್ಲಿ ವಿಹರಿಸುತ್ತಿರುವ ಹಂಸಸಂಕುಲಗಳು, ಮಂದಮಾರುತನ ಆನಂದಪ್ರದವಾದ ತೀಡುವಿಕೆ, ನಗರದ ನರನಾರಿಯರ ವೈಯಾರದ ಓಡಾಟಗಳು ಎಲ್ಲಾ ಉದ್ಯಾನದಲ್ಲಿಂದು ಎಂದಿಗಿಂತ ವಿಶಿಷ್ಟವಾಗಿ, ಸೌಂದರ್ಯವೇ ಹುಚ್ಚೆದ್ದು ಕುಣಿಯತೊಡಗಿದೆಯೆ ಎನ್ನುವಂತಾಗಿತ್ತು.

ಪುರಜನರ ಆನಂದವನ್ನು ಬಣ್ಣಿಸತೀರದು. ಯುವಕ–ಯುವತಿಯರ ಆಹ್ಲಾದವು ಪರಮಾವಧಿಯನ್ನೇ ಸೇರಿಬಿಟ್ಟಿತ್ತು. ಮಕ್ಕಳು ಮುದುಕರಿಗೂ ಎಲ್ಲಿಲ್ಲದ ಉತ್ಸಾಹ. ಇದಕ್ಕೆ ಮದನೋದ್ಯಾನದ ಉತ್ಸವವು ಕಾರಣವೊ, ಅಥವಾ ನಾಗರಿಕರ ಉತ್ಸಾಹವೇ ಉತ್ಸವದ ಈ ಸೌಭಾಗ್ಯಾತಿಶಯಕ್ಕೆ ಕಾರಣವೊ ಎಂಬುದನ್ನು ಮಾಧವನು ನಿರ್ಣಯಿಸಲಾರದಾದನು. ಜನ ಮರುಳೋ ಜಾತ್ರೆ ಮರುಳೋ ಎಂಬಂತಿತ್ತು, ಈ ಪ್ರಶ್ನೆ ಆತನ ಮುಂದೆ.

ಎಲ್ಲರಂತೆ ಮಾಧವನೂ ಉತ್ಸವವನ್ನು ನೋಡಬಂದವರಲ್ಲೊಬ್ಬನು. ಆತನಿಗೆ ಉತ್ಸವದ ವಿಚಾರ ಅವಲೋಕಿತೆಯಿಂದ ಮೊದಲೇ ತಿಳಿದಿತ್ತು. ವರ್ಷಕ್ಕೊಮ್ಮೆ ನಗರದಲ್ಲಿ ನಡೆಯುವ ಈ ಸಂಭ್ರಮದ ಉತ್ಸವದ ವರ್ಣನೆಯನ್ನು ಆಕೆ ಮಾಧವನ ಮುಂದೆ ಮಾಡಿದುದರಿಂದ 'ನೋಡಿಬಿಡಬೇಕು' ಎಂಬ ಕುತೂಹಲ ಆತನಲ್ಲಿ ಕೆರಳಿತ್ತು.

ಆತನಿನ್ನೂ ಪದ್ಮಾವತೀನಗರಕ್ಕೆ ಹೊಸಬ. ವಿದರ್ಭರಾಜನ ಅಮಾತ್ಯ ದೇವರಾತನ ಸುಕುಮಾರನವನು. ಕುಂಡಿನಪುರದಲ್ಲಿ ಬಾಲ್ಯಾಭ್ಯಾಸಗಳನ್ನೆಲ್ಲಾ ಮುಗಿಸಿಕೊಂಡು, ಎಲ್ಲಾ ಬಗೆಯ ಶಿಕ್ಷಣವನ್ನು ಅಲ್ಲೇ ಪಡೆದುಕೊಂಡರೂ ಆತನಿಗೆ ತೃಪ್ತಿಯಾಗಿರಲಿಲ್ಲ. ಆನ್ವೀಕ್ಷಿಕಿಯಲ್ಲಿ ವಿಶೇಷಾಧ್ಯಯನ ಮಾಡಬೇಕೆಂದು ಆತನ ಮನಸ್ಸು ಹಾತೊರೆಯುತ್ತಿತ್ತು. ತಂದೆಯೂ ಅದಕ್ಕೆ 'ಅಸ್ತು' ಎಂದಿದ್ದ. ಆ ಕಾಲದಲ್ಲಿ ಪದ್ಮಾವತೀ ನಗರವು ಆನ್ವೀಕ್ಷಿಕೀವಿದ್ಯೆಗೆ ವಿಶೇಷ ಹೆಸರಾಗಿತ್ತು. ದೇಶಾಂತರಗಳಿಂದ ಇಲ್ಲಿಗೆ ವಿದ್ಯಾಭ್ಯಾಸಕ್ಕಾಗಿ ಬರುತ್ತಿದ್ದರು. ಅಂತೆಯೇ ಮಾಧವನೂ ಬಂದಿದ್ದನು.

ಮಾಧವನಲ್ಲಿ ನವಯೌವನವು ತುಂಬಿ ಬರತೊಡಗಿತ್ತು. ಸುಂದರವೂ ಸುದೃಢವೂ ಆದ ಆತನ ಮೈಕಟ್ಟು ತಾರುಣ್ಯದ ಕಾಂತಿಯಿಂದ ಜಗಮಗಿಸುತ್ತಿತ್ತು. ಅಂಗಾಂಗಗಳಲ್ಲೂ ಲಾವಣ್ಯವು ಪುಟಿದೆದ್ದು ಕುಣಿಯುತ್ತಿತ್ತು.

ಮಾಧವನು ಎಷ್ಟೋ ಉದ್ಯಾನಗಳನ್ನು ಕಂಡವನು; ಎಷ್ಟೋ ಉತ್ಸವಗಳನ್ನು ನೋಡಿದವನು. ಸೌಂದರ್ಯ, ಪ್ರಕೃತಿ ಮಾಧುರ್ಯ, ವಸ್ತು-ವೈವಿಧ್ಯಗಳನ್ನು ಗುರುತಿಸುವುದರಲ್ಲಿ ಆತನು ನಿಪುಣನಾಗಿದ್ದನು. ಆತನಿಗೆ ಪದ್ಮಾವತೀನಗರದ ಮದನೋದ್ಯಾನದ ಸೊಬಗು ಆಸ್ವಾದನೀಯವೆಂದು ಕಂಡುಬಂದಿತು. ಈ ಊರಿನ ನಗರಶೃಂಗಾರ, ಉದ್ಯಾನ ನಿರ್ಮಾಣದ ವೈದಗ್ಧ್ಯವನ್ನೂ ವೈವಿಧ್ಯವನ್ನೂ ಆತನು ಮೆಚ್ಚಿಕೊಂಡನು. ಮೃಗಪಕ್ಷಿಗಳು, ತರುಲತೆಗಳು, ಕುಸುಮರಾಜಿಗಳು ಇವುಗಳನ್ನೆಲ್ಲಾ ನೋಡಿ ಆತನು ಕಣ್ಣುಗಳಿಗೆ ಹಬ್ಬ ಮಾಡಿಕೊಂಡನು. ನಾಗರಿಕರ ರಸಿಕತೆ ಆತನಿಗೆ ಬಹು ರುಚಿಕರವಾಗಿ ಕಂಡಿತು.

ಉದ್ಯಾನದ ಅಂದವನ್ನು ನೋಡಿದಷ್ಟೂ ಆತನ ಕಣ್ಣುಗಳಿಗೆ ತೃಪ್ತಿಯಿಲ್ಲ. ಆದರೆ ಕಣ್ಮನಗಳನ್ನು ತೃಪ್ತಿಪಡಿಸಹೊರಟರೆ ಕಾಲುಗಳು 'ಮುನ್ನಡೆಯಲಾರೆ' ವೆಂದು ಮುಷ್ಕರ ಹೂಡಲು ಸಿದ್ಧವಾಗಿದ್ದುವು. ಚೆಂದವಾದ ದೃಶ್ಯವನ್ನು ಆಸ್ವಾದಿಸಿಕೊಂಡು ಕುಳಿತಿರಬಹುದಾದರೆ ಅದೇ ಶ್ರೇಷ್ಠವೆಂದು ಮಾಧವನು ತೀರ್ಮಾನಿಸಿದನು. ಹುಡುಕಿ ಹುಡುಕಿ ಒಂದು ರೆಂಜೆಮರದ ಬುಡವನ್ನು ಬಂದು ಸೇರಿದನು. ಹೂಗಳ ಮಕರಂದವನ್ನು ಕುಡಿದು ತುಂಬಿಗಳು ಉನ್ಮತ್ತವಾಗಿ ಝೇಂಕರಿಸುವುದನ್ನು ಕೇಳುವುದೆಂದರೆ ಮಾಧವನಿಗೆ ಮಧುರ

ಸಂಗೀತವನ್ನು ಕೇಳಿದಷ್ಟೇ ಆನಂದ. ಹಾಗೆಯೇ ಆತನು ತಲ್ಲೀನತೆಯಿಂದ ಕೇಳುತ್ತ ಕುಳಿತುಕೊಂಡನು. ಹೂಗಳ ಪರಿಮಳವು ಆತನ ಸರ್ವೇಂದ್ರಿಯ ಗಳನ್ನು ಸುಗಂಧಮಯವನ್ನಾಗಿ ಮಾಡಿತ್ತು. ಇಂಥ ಸೊಗಸನ್ನು ಸವಿಯುತ್ತ ಮಾಧವನು ತುಸುಹೊತ್ತು ಹಾಗೆಯೇ ಕುಳಿತುಕೊಂಡನು.

ರೆಂಜೆಯ ಮರದಿಂದ ಹೂಗಳು ಧಾರಾಳವಾಗಿ ಕೆಳಗೆ ಬಿದ್ದುಕೊಂಡಿದ್ದುವು. ಇವುಗಳನ್ನು ಹೀಗೆಯೇ ಏತಕ್ಕೆ ಬಿಡಬೇಕು, ಎಂದಿತು ಮಾಧವನ ರಸಿಕ ಮನಸ್ಸು. ಹಾಗೆ ಒಂದೊಂದನ್ನೇ ಕೈಗೆತ್ತಿಕೊಂಡು ಆತನು ಮಾಲೆಯೊಂದನ್ನು ಪೋಣಿಸತೊಡಗಿದನು. ಮಾಧವನ ಮನಸ್ಸು ಪ್ರಕೃತಿ–ಶೃಂಗಾರ–ಸೌಂದರ್ಯಗಳ ವಿವೇಚನೆಯ ಕಡೆಗೆ ಲಕ್ಷ್ಯ ಹರಿಸಿತ್ತು. ಆತನು ಶಾಸ್ತ್ರದಗೊಡ್ಡು ಪಂಡಿತನಾಗಿರಲಿಲ್ಲ. ಆಕರ್ಷಕವಾದ ವ್ಯಕ್ತಿತ್ವ, ತೀಕ್ಷ್ಣವಾದ ಬುದ್ಧಿಶಕ್ತಿಗಳೊಂದಿಗೆ ರಸಿಕತೆಯೂ ಆತನಲ್ಲಿ ಅನನ್ಯವಾಗಿತ್ತು. ಸೌಂದರ್ಯಾಸ್ವಾದನೆಯಲ್ಲಿ ಆತನ ತರುಣ ಹೃದಯವು ಮುಗ್ಧವಾಗಿ ಹೋಗಿತ್ತು.

ಆತನು ಪ್ರಾರಂಭಿಸಿದ ಮಾಲೆಯಿನ್ನೂ ಪೂರ್ತಿಯಾಗಿರಲಿಲ್ಲ. ಮನಸ್ಸು ಸಮಗ್ರವಾಗಿ ಶೃಂಗಾರಪ್ರಕೃತಿಸೌಂದರ್ಯಗಳನ್ನು ಆಸ್ವಾದಿಸುತ್ತಲೇ ಇತ್ತು. ಅಷ್ಟರಲ್ಲಿ ಆತನ ಕಣ್ಣಿಗೆ ತಾನು ಆರಾಧಿಸುತ್ತಿರುವ ಸೌಂದರ್ಯ ದೇವತೆಯೇ ಪ್ರತ್ಯಕ್ಷಳಾದಳೆ? ಅಥವಾ ಮದನೋತ್ಸವದ ಸಲುವಾಗಿ ಹೊರಟ ಕಾಮನ ವಿಜಯ–ಪತಾಕೆಯೆ ಇತ್ತ ಬಂದಿತೆ? ಎಂಬ ಸಂಶಯವುಂಟಾಯಿತು. ಕ್ಷಣ ಹೊತ್ತು ಹಾಗೆಯೇ ನೋಡಿದನು. ಇದೊಂದು ಸಜೀವವಾದ ಸ್ತ್ರೀವ್ಯಕ್ತಿ ಎಂಬುದನ್ನು ಆತನು ಭಾವಸಮಾಧಿಯಿಂದಿಳಿದಾಗ ಕಂಡುಕೊಂಡನು. ಆದರೂ ಆತನ ಕಣ್ಣಿಗೆ ಇದೊಂದು ಹೊಸ ದೃಶ್ಯ. ಯಾರು? ಏನು? ಎಂಬುದು ಆತನಿಗೆ ಬಗೆಹರಿಯಲಿಲ್ಲ.

ಆಕೆಯ ಸೌಂದರ್ಯವು ವರ್ಣನಾತೀತವಾಗಿತ್ತು. ಉತ್ಕೃಷ್ಟವಾದ ಉಪಮೆ, ಉತ್ಪ್ರೇಕ್ಷೆಗಳನ್ನೆಲ್ಲಾ ಉಪಯೋಗಿಸಿಕೊಂಡು ಕೃತಿ ರಚಿಸಿ ಆಕೆಯನ್ನು ಬಣ್ಣಿಸಿ ಕವಿಗಳು ತೃಪ್ತಿಪಡೆಯಬಹುದು. ಆದರೆ ಮಾಧವನಂಥ ರಸಿಕನು ತನ್ನ ಎರಡು ಚರ್ಮಚಕ್ಷುಗಳಿಂದಲೂ, ಹೃದಯದಿಂದಲೂ ಆಕೆಯನ್ನು ನೋಡಿ ತೃಪ್ತಿಪಟ್ಟುಕೊಳ್ಳಬೇಕಾಗಿತ್ತಲ್ಲದೆ ಬೇರೇನನ್ನೂ ಮಾಡಲು ಸಾಧ್ಯವಿರಲಿಲ್ಲ. ಇಂದು ಮಾಧವನಿಗೆ ತನ್ನ ಕಣ್ಣಿನ ಸಾಫಲ್ಯದ ಅರಿ

ವಾಯಿತು. ಜೊತೆಗೇನೇ ಆತನು ಆಕೆಯ ರೂಪದ ಬಗ್ಗೆ ಕಲ್ಪನೆಗಳನ್ನು ತಾಳಲು ಮನಸ್ಸು ಹರಿಸಿದನು. ಈಕೆಯನ್ನು ವಿಧಿಯು ಮಾತ್ರವೇ ನಿರ್ಮಿಸಿದ್ದರೆ ಇಷ್ಟೊಂದು ಸೌಂದರ್ಯವು ಬರುತ್ತಿರಲಿಲ್ಲ. ಬಹುಶಃ ಮನ್ಮಥನೂ ವಿಧಿಯೂ ಜೊತೆಯಾಗಿದ್ದು ಅನನ್ಯವಾದ ಒಂದು ಸ್ತ್ರೀಯನ್ನು ಸೃಷ್ಟಿಸಿ ಲೋಕಕ್ಕೊಂದು ಅಮೂಲ್ಯ ಸೌಂದರ್ಯದ ಕೊಡುಗೆಯನ್ನೀಯಬೇಕೆಂದು ಮನ ಮಾಡಿ, ಈಕೆಯನ್ನು ಚಂದ್ರಕಲೆ, ತಾವರೆನಾಳ, ಹೂಗಳಂಥ ಮೃದು ವಸ್ತುಗಳಿಂದಲೇ ನಿರ್ಮಿಸಿರಬೇಕು ಎಂಬುದಾಗಿ ಮಾಧವನ ಹೃದಯವು ಸಾರಿತು. ಗೆಳತಿಯರ ಗಡಣದೊಂದಿಗೆ ಸಾಗುತ್ತಿದ್ದ ಆ ಯುವತಿ ಅವರೆಲ್ಲರನ್ನೂ ಮೀರಿಸಿ ಪ್ರೇಕ್ಷಕರ ಕಣ್ಣನ್ನೇ ಕುಕ್ಕುತ್ತಿದ್ದಳು.

ಮಾಧವನ ದೃಷ್ಟಿ ಆಕೆಯ ಮೇಲೆ ಕೇಂದ್ರಿತವಾಗಿಬಿಟ್ಟಿತು. ಆಕೆಯನ್ನು ಸೂಕ್ಷ್ಮವಾಗಿಯೂ ತುಂಬುಗಣ್ಣಿನಿಂದಲೂ ನೋಡಿ ಆತನು ಆ ನಿರತಿಶಯ ಸೌಂದರ್ಯವನ್ನು ಆಸ್ವಾದಿಸಿಕೊಂಡನು. ಇಷ್ಟು ಸುಂದರಿಯಾಗಿದ್ದರೂ ಅವುದೋ ಒಂದು ಬಗೆಯ ಬೇಸರ, ಖಿನ್ನತೆ ಆಕೆಯನ್ನು ಬಾಧಿಸುತ್ತಿರುವುದಾಗಿ ಆಕೆಯ ಮುಖಲಕ್ಷಣ ಶರೀರಾವಸ್ಥೆಗಳನ್ನು ಸೂಕ್ಷ್ಮವಾಗಿ ಗಮನಿಸಿದ ಮಾಧವನು ತತ್‌ಕ್ಷಣ ಅರಿತುಕೊಂಡನು.

ಆಕೆಯ ಅಂಗಗಳು ಬಾಡಿದ ತಾವರೆನಾಳಗಳಂತಿದ್ದುವು. ಮಾಂದ್ಯ, ಆಲಸ್ಯಗಳು ಆಕೆಯಲ್ಲಿ ತುಂಬಿಕೊಂಡಿದ್ದಂತೆ ಆತನಿಗೆ ಕಂಡಿತು. ಆನೆಯ ದಂತದಂತೆ ಧವಲವಾದ ಆಕೆಯ ಕಪೋಲವು ನಿಷ್ಕಲಂಕವಾದ ಚಂದ್ರನ ಕಾಂತಿಯಂತಿತ್ತು.

ಅಯಸ್ಕಾಂತದ ಶಲಾಕೆ ಲೋಹವನ್ನು ಸೆಳೆಯುವುದು ಮಾಧವನ ಅನುಭವಕ್ಕೆ ಬಂದಿತ್ತು ಆದರೆ ಸ್ತ್ರೀಸೌಂದರ್ಯವು ಮನಸ್ಸನ್ನು ಇಷ್ಟೊಂದು ಬಲವಾಗಿ ಸೆಳೆಯುತ್ತವೆ ಎನ್ನುವ ಅನುಭವವು ಆತನಿಗೆ ಇದೇ ಮೊದಲಾದುದು. ಪ್ರಕೃತಿಸೌಂದರ್ಯದ ಬಗ್ಗೆ ಆತನಿಗಿದ್ದ ಕಲ್ಪನೆಯೆಂದರೆ ಕೇವಲ ಆನಂದವೆಂಬುದು. ಆದರೆ ಇಷ್ಟೊಂದು ಪ್ರಬಲವಾದ ಆಕರ್ಷಣೆಯಿಂದ ಸ್ಥೈರ್ಯವನ್ನೇ ಕದಲಿಸಿಬಿಡುವ ರಮಣೀಲಾವಣ್ಯದ ಪ್ರಭಾವವು ಆತನಿಗೆ ಇಂದೇ ತಿಳಿದುಬಂದುದು. ಅಮೃತಧಾರೆಯೇ ಕಣ್ಣುಗಳೆಡೆಗೆ ಪ್ರವಹಿಸಿ ಬಂದಂತೆ ಮಾಧವನಿಗೆ ಭಾಸವಾಯಿತು.

ತನ್ನ ಮನಸ್ಸು ಇಷ್ಟೊಂದು ಹಠಾತ್ತಾಗಿ ಅನುರಾಗ ಪ್ರವೃತ್ತಿಗೆಳಸಲು ಕಾರಣವೇನೆಂದು ಮಾಧವನಿಗೆ ತಿಳಿಯಲಿಲ್ಲ. ಸೂರ್ಯೋದಯವಾದಾಗ ಕಮಲವು ಅರಳುತ್ತದೆ, ಚಂದ್ರನು ಉದಯಿಸಿದಾಗ ಚಂದ್ರಕಾಂತವು ದ್ರವಿಸುತ್ತದೆ. ಅವುಗಳೊಳಗೆ ಅದಾವ ಆಂತರಿಕ ಬಾಂಧವ್ಯವೋ ಮಾಧವನಿಗೆ ತಿಳಿಯದು, ಪ್ರೇಮವೆಂದರೆ ಬಾಹ್ಯ ಕಾರ್ಯಕಾರಣಗಳ ಅಪೇಕ್ಷೆಯಿಲ್ಲದ ಹೃದಯದ ರಸಾರ್ದ್ರಪ್ರವೃತ್ತಿ ಎಂಬುದು ಆತನಲ್ಲಿ ಹೊಸತಾಗಿ ಮೂಡಿದ ಸುಂದರ ಅನುಭವ !

ಮಾಧವನು ಹೀಗೆ ತನ್ನಷ್ಟಕ್ಕೆ ತಾನು ಕುಳಿತಂತಿದ್ದು ಈ ಬಗೆಯ ಚಿತ್ತ ಪ್ರವೃತ್ತಿಯಲ್ಲಿ ತಲ್ಲೀನನಾಗಿದ್ದನು. ಅತ್ತ ಆಕೆಯೊಂದಿಗೆ ಬಂದ ಇನ್ನಿತರ ಲಲನೆಯರು ಮಾಧವನ ಕಡೆಗೆ ಹುಬ್ಬು ಹಾರಿಸಿದರು. ಅವರ ಕುಡಿನೋಟವು ಮುಗುಳ್ನಗೆಯೊಂದಿಗೆ ಸೇರಿಕೊಂಡು ಮಾಧವನನ್ನೇ ಬಂದು ಸೇರುತ್ತಿತ್ತು. ಏಕಾಕಿಯಾದವನನ್ನು ಸುತ್ತಲೂ ನೆರೆದವರು ಬಾಣಗಳಿಂದ ಇರಿಯುವಂತೆ ಇವರೆಲ್ಲಾ ಚೂಪಾದ ಕುಡಿನೋಟಗಳಿಂದ ತನ್ನನ್ನು ತಿವಿಯುತ್ತಿರುವುದಾಗಿ ಮಾಧವನಿಗೆನಿಸಿತು. ಆದರೆ ಆತನಿಗೆ ಅವರ ಬಗ್ಗೆ ಅನಾದರವೆನಿಸಲಿಲ್ಲ. ಆ ಕುಡಿನೋಟಗಳಿಂದಲೂ ಒಂದು ಬಗೆಯ ತೃಪ್ತಿ ಆತನಿಗೆ ಬಂದಂತಾಯಿತು.

ಇವರೆಲ್ಲಾ ಚಿರಪರಿಚಿತನಂತೆ ತನ್ನನ್ನು ನೋಡುತ್ತಿರುವರಲ್ಲಾ ಎನಿಸಿತು ಮಾಧವನಿಗೆ. ಅವರು ತಮ್ಮೊಡತಿಯೊಂದಿಗೆ ಏನೋ ಪಿಸುಮಾತನಾಡಿದಂತೆ ಕಂಡಿತು. ಈತನ ಕಡೆ ಬೊಟ್ಟು ಮಾಡಿ 'ಇಲ್ಲಿ ಯಾರೋ ಒಬ್ಬನು ಯಾವಳೋ ಒಬ್ಬಳ ವಲ್ಲಭನಿದ್ದಾನೆ' ಎಂದು ನಗೆನುಡಿಯಾಡಿದುದೂ ಆತನ ಕಿವಿಗಳಿಗೆ ಕೇಳಿಸಿದಂತಾಯಿತು.

ಗೆಳತಿಯರ ಮಾತು ಆ ಯುವತಿಯಲ್ಲಿ ಪರಿಣಾಮ ಮಾಡಿದಂತೆ ಮಾಧವನು ಕಂಡುಕೊಂಡನು. ಆಕೆಯಲ್ಲಿ ಒಂದು ಬಗೆಯ ವೈಯಾರ, ಶೃಂಗಾರ ಭಾವಗಳು ಗೋಚರಿಸಿದುವು. ಆಕೆ ಈತನನ್ನೇ ಆನಂದದಿಂದ ನೆಟ್ಟ ನೋಟದಿಂದ ನೋಡಬಯಸುತ್ತಿದ್ದುದು ಕಣ್ಣುಗಳಿಂದ ವ್ಯಕ್ತವಾಗುತ್ತಿತ್ತು ಆದರೂ ನಾಚಿಕೆ ಆಕೆಯ ಕಣ್ಣುಗಳನ್ನು ತುಸು ಮುಚ್ಚಿಸುತ್ತಿತ್ತು. ಆದರೂ ಕಿರುನಗೆಗಳಲ್ಲಿ ಹೊರಟು ಬಂದ ಆಕೆಯ ಕಟಾಕ್ಷವು ಮಾಧವನ ಮೇಲೆ

ಬಲವಾಗಿ ನೆಟ್ಟುಹೋಗಿತ್ತು.

ಇದನ್ನೆಲ್ಲಾ ಮಾಧವನು ಲಕ್ಷ್ಯವಿಟ್ಟು ನೋಡಿದನು. ಆತನ ನೋಟವೂ ಆಕೆಯೆಡೆಗೆ ಧಾವಿಸಿದಾಗ ಆಕೆಯ ನೋಟವು ಈಕಡೆಗೆ ಹೊರ ಟುದು ಸಂಧಿಸಿ, ನಾಚಿಕೆಯಿಂದ ತುಸು ಮುಚ್ಚಿಕೊಂಡಿತು. ಆದರೂ ಕದ್ದು ಕದ್ದು ಆಕೆ ಮಧುರ ರಮ್ಯ ನೋಟದಿಂದ ಮಾಧವನನ್ನು ನೋಡುತ್ತಿದ್ದಳು. ಮಾಧವನ ಹೃದಯವನ್ನು ಆಕೆ ಪೂರ್ಣವಾಗಿ ಸೂರೆಗೊಂಡಳು. ಆತನಿಗೆ ತಾನೇನು ಮಾಡುವುದೆಂಬುದು ತಿಳಿದುಬರಲಿಲ್ಲ. ರೆಂಜೆ ಹೂಗಳನ್ನು ಪೋಣಿ ಸಲು ಒಂದು ಕೈಯಲ್ಲಿ ದಾರವನ್ನೂ ಇನ್ನೊಂದರಲ್ಲಿ ಹೂವನ್ನೂ ಆತನು ಹಿಡಿದುಕೊಂಡು ಪ್ರತಿಮೆಯಂತೆ ಕುಳಿತಿದ್ದನು. ಪ್ರೇಮಾನಂದದಲ್ಲಿ ಆತನು ತನ್ಮಯನಾಗಿ ಇಹವನ್ನೇ ಮರೆತಿದ್ದನು. ಆದರೂ ಆತನಿಗೆ ಜಗತ್ತಿನ ಹಾಗೂ ಸುತ್ತುಮುತ್ತಲಿನ ಅರಿವಾದಾಗ ಅವನ ವಿವೇಕವು ಜಾಗೃತವಾಗಿ 'ಸೋತು ಹೋಗಬೇಡ' ಎಂದು ಎಚ್ಚರಿಸಿತು.

ಮಾಧವನಿಗೆ ತುಸು ನಾಚಿಕೆಯಾಯಿತು, ತನ್ನ ಪರಿಸ್ಥಿತಿಗಾಗಿ. ಯಾವಳೋ ಅಜ್ಞಾತ ವನಿತೆಯೊಬ್ಬಳನ್ನು ಕಂಡು ತಾನು ಹೀಗೆ ತನ್ನತನ ವನ್ನೂ ಧೈರ್ಯವನ್ನೂ ಕಳೆದುಕೊಳ್ಳಬಹುದೆ? ಎಂದೆನಿಸಿತು ಆತನಿಗೆ. ತತ್‌ಕ್ಷಣವೇ ಪ್ರೇಮದ ದರ್ಶನವಾಗಿ ಆತನು ತಲ್ಲೀನನಾಗುತ್ತಿದ್ದನು ಕೈ ಯಲ್ಲಿ ಪೋಣಿಸಲು ಹಿಡಿದಿದ್ದ ಮಾಲೆ ಅಪೂರ್ಣವಾಗಿದ್ದುದು ತನ್ನ ಸೋಲಿನ ಸೂಚಕವೆಂದು ಕಂಡು ಆತನು ಅದನ್ನು ಮುಂದುವರಿಸತೊಡಗಿದನು. ಹಾಗೆಯೇ ತನ್ನ ಕೆಲಸವನ್ನು ಮಾಡಿಕೊಂಡು ಆತನು ಪರಿಸ್ಥಿತಿಯ ಕಡೆಗೆ ಗಮನ ಹರಿಸಿಕೊಂಡು ಕುಳಿತೇ ಇದ್ದನು.

ಆ ಯುವತಿ ಹೆಣ್ಣಾನೆಯನ್ನೇರಿ ನಗರದ ಹೆದ್ದಾರಿಯತ್ತ ಸಾಗುವಂತೆ ಕಂಡಿತು. ಮುಂದೆ ಸಾಗುತ್ತಾ ಆಕೆ ಎಸೆದ ಕೊಂಕುನೋಟವು ಮಾಧವನ ಹೃದಯದಲ್ಲಿ ನಾಟಿಹೋಯಿತು. ಎಷ್ಟು ಪ್ರಯತ್ನ ಮಾಡಿದರೂ ಆತನಿಗೆ ಅದನ್ನು ಕಿತ್ತು ತೆಗೆಯಲಾಗಲಿಲ್ಲ.

ಆ ಯುವತಿ ಗೆಳತಿಯರೊಂದಿಗೆ ನಾಲ್ಕು ಮಾರು ದೂರ ಹೋಗುವುದ ರೊಳಗಾಗಿ, ಆ ಸಹಚಾರಿಣಿಯರಲ್ಲಿ ಒಬ್ಬಳು ಆ ಗುಂಪಿನಿಂದ ಬೇರೆಯಾಗಿ ಹೂ ಕೊಯ್ಯುವ ನೆವದಿಂದ ಇತ್ತ ಬಂದಳು. ಮಾಧವನ ಬಳಿಗೆ ಬಂದಾಗ

ಆತನಿಗೆ ಆಶ್ಚರ್ಯವಾಯಿತು. ಆಕೆ ನಮುಸ್ಕರಿಸಿದಾಗ ಮಾಧವನಿಗೆ ಇದೇನು ಕನಸೋ ನೆನಸೋ ಎನ್ನುವಂತಾಯಿತು. ಮಾಧವನು ಸಾಕೂತ ದೃಷ್ಟಿಯಿಂದಲೇ ಆಕೆಯನ್ನು ಪ್ರಶ್ನಿಸಿದ.

ಆಕೆ ಹೇಳಿದಳು: "ಮಹಾಶಯ! ಈ ಸನ್ನಿವೇಶವು ಸುಶ್ಲಿಷ್ಟ ಗುಣವಾಗಿದ್ದು ರಮಣೀಯವಾಗಿದೆ. ನಮ್ಮ ಒಡತಿಗೆ ಇದರಲ್ಲಿ ಕುತೂಹಲವೂ ಇದೆ. ತಮ್ಮ ರಚನೆಯ ವೈದಗ್ಧ್ಯ, ನಿರ್ಮಾಣದ ಸೊಬಗುಗಳು ಸಫಲವಾಗಲಿ. ಇದು ನಮ್ಮ ಒಡತಿಯ ಕೊರಳನ್ನು ಸೇರುವಂತೆ ಅನುಗ್ರಹಿಸಬೇಕು."

ಆಕೆ ಬಹಳ ಜಾಣೆಯಾಗಿದ್ದಂತೆ ಮಾಧವನಿಗೆ ಕಂಡಿತು. ಆಕೆಯ ಮಾತಿನಲ್ಲಿ ಚಮತ್ಕಾರ ಬಳಸಿದ್ದುದೂ, ಅರ್ಥಾಂತರವನ್ನಿಟ್ಟು ಮಾತನಾಡಿದುದೂ ಆತನಿಗೆ ಕೂಡಲೇ ತಿಳಿಯಿತು. ತನ್ನ ಒಡತಿಗೆ ನಿನ್ನ ಮೇಲೆ ಸಂಪೂರ್ಣ ಪ್ರೇಮವಿದೆ ಎಂಬುದನ್ನು ವ್ಯಂಜಿಸುವ ಪದಗಳು ಆಕೆಯ ಮಾತುಗಳಲ್ಲಿದ್ದುವು. ಮಾಧವನಿಗೆ ಆಕೆ ಯಾರು, ಏನು ಎಂಬುದನ್ನೆಲ್ಲಾ ತಿಳಿಯುವ ಕುತೂಹಲವೂ ಬಹಳವಾಗಿತ್ತು. ಇದೇ ಸಂದರ್ಭವೆಂದು ಆತನು ಕೇಳಿಯೇ ಬಿಟ್ಟನು. "ಆಕೆ ಯಾರು?"

"ಈ ರಾಜ್ಯದ ಅಮಾತ್ಯನಾದ ಭೂರಿವಸುವಿನ ಮಗಳು. ಮಾಲತಿ ಎಂದು ಹೆಸರು."

"ನೀನು?"

"ನಾನು ಆಕೆಯ ವಿಶ್ವಾಸಪಾತ್ರಳಾದ ಒಲವಿನ ಗೆಳತಿ."

"ಹೆಸರು?"

"ಲವಂಗಿಕೆ."

ಮಾಧವನ ಅಂತರಂಗವು ಸಂತೃಪ್ತವಾಯಿತು. ಮಾಲತಿ! ಎಷ್ಟು ಮೃದುವಾದ ಹೆಸರು. ಕುಸುಮಕೋಮಲೆಯಾದ ಆಕೆಯ ಈ ಹೆಸರು ಅನ್ವರ್ಥ! ನಿಜವಾಗಿಯೂ ಆಕೆಯಲ್ಲಿ ತಾನು ಅನುರಕ್ತನಾದುದು ಸಾರ್ಥಕ. ಅಮಾತ್ಯ ಭೂರಿವಸುವಿನ ಮಗಳು ಎಂದಮೇಲೆ ಹೃದಯದ ವ್ಯಾಪಾರದ ಬಗ್ಗೆ ಆತನಿಗೆ ಮತ್ತಷ್ಟು ತೃಪ್ತಿಯೆನಿಸಿತು.

ಲವಂಗಿಕೆಯ ಕಣ್ಣು ರಂಜೆ ಹೂವಿನ ಮಾಲೆಯ ಮೇಲಿತ್ತು. ಮಾಧವನಿಗೆ ಇದು ಗೋಚರಿಸಿತು. 'ಹೂವಿನ ಸಫಲತೆಯೆಂದರೆ ಸುಂದರಿಯರ

ಅಂಗಗಳನ್ನಲಂಕರಿಸುವುದು. ಪುರುಷನಾದ ತನಗೆ ಅದರಿಂದೇನು?' ಎಂಬ ವಿವೇಚನೆಯೊಂದಿಗೆ ಆತನಿಗೆ ಒಂದು ಬಗೆಯ ಹೆಮ್ಮೆಯೂ ಕೂಡಿಕೊಂಡಿತು. ತನ್ನ ಕತ್ತಿನಲ್ಲಿ ಹಾಕಿಕೊಂಡಿದ್ದ ಮಾಲೆಯನ್ನು ಅಮಾತ್ಯ ಭೂರಿವಸುವಿನ ಮಗಳು ಕೇಳುವಾಗ, ಅದರಲ್ಲೂ ತನ್ನ ಬಗ್ಗೆ ಆಕೆಗೆ ಅನುರಾಗವಿದೆಯೆಂದು ತಿಳಿದಾಗ ಆತನಿಗೆ ಎಷ್ಟು ಹರ್ಷವಾಗಲಿಕ್ಕಿಲ್ಲ! ಆತನು ತನ್ನ ಕುತ್ತಿಗೆಯಿಂದ ಮಾಲೆಯನ್ನು ತೆಗೆದು ಆನಂದದಿಂದ ಲವಂಗಿಕೆಗೆ ಕೊಟ್ಟನು. ಆಕೆ ಅದನ್ನು 'ಮಹಾಪ್ರಸಾದ' ವೆಂಬಂತೆ ಸ್ವೀಕರಿಸಿ ಆನಂದದಿಂದ ಹಿಗ್ಗಿ ಹೀರೇಕಾಯಿಯಾದಳು.

ಲವಂಗಿಕೆ ಹೋಗುತ್ತಾ ಮಾಲೆಯ ರಚನೆಯ ಕಡೆಗೆ ದೃಷ್ಟಿ ಹರಿಸಿದಳು. ಮಾಲೆ ಕಟ್ಟುವುದರಲ್ಲಿ ಎಷ್ಟೆಂದರೂ ಹೆಂಗಸರು ನಿಪುಣೆಯರಲ್ಲವೆ? ಗಂಡಸರು ಆ ಮಾಲೆ ಕಟ್ಟಿದರೆಂದರೆ ಅದು ಅವರಿಗೊಂದು ವಿಶೇಷವೇ. ಆದರೆ ಲವಂಗಿಕೆಗೆ ಇದೊಂದೇ ವಿಶೇಷವಲ್ಲ. ಈ ಮಾಲೆಯಿಂದ ಆಕೆಗೆ ಮಾಧವನ ಹೃದಯವನ್ನು ಪರೀಕ್ಷಿಸಬೇಕಾಗಿತ್ತು. ತನ್ನ ಒಡತಿಯಲ್ಲಿ ಮಾಧವನಿಗೆ ಪ್ರೇಮವಿದೆಯೋ ಇಲ್ಲವೊ ಎಂಬುವನ್ನು ಕಂಡುಕೊಳ್ಳಲು ಈ ಮಾಲೆಯಿಂದ ಸಾಧ್ಯವಿದೆ ಎಂಬುದನ್ನು ಆಕೆ ಅರಿತಿದ್ದಳು. ಸರಿ. ಮಾಲೆಯ ರಚನೆಯಲ್ಲಿ ಮಾಧವನು ಚತುರನಾಗಿದ್ದಾನೆ ಎಂಬುದು ಆಕೆಗೆ ಥಟ್ಟನೆ ಹೊಳೆಯಿತು. ಆದರೆ ಅರ್ಧದ ತನಕದ ಮಾಲೆಯ ರಚನೆಯ ವೈದಗ್ಧ್ಯವೊಂದು ಬಗೆಯದಾದರೆ, ಇನ್ನೊಂದು ಬಗೆಯ ರಚನೆ ವಿಷಮವಾಗಿತ್ತು. ಇದು ಮಾಲೆಗೇನೂ ಕೊರತೆಯೆನಿಸಲಿಲ್ಲವಾದರೂ ಅವನ್ನು ಪೋಣಿಸಿದವನ ಮನಃಸ್ಥಿತಿಯನ್ನು ಸಾರಿ ಹೇಳುತ್ತಿತ್ತು. ಸರಿ. ಲವಂಗಿಕೆಗೂ ಇಷ್ಟೇ ಬೇಕಾದುದು. ಮಾಲತಿ ದೃಷ್ಟಿಗೆ ಬೀಳುವತನಕದ ರಚನೆಯೊಂದು ಬಗೆಯದ್ದರೆ, ಮಾಲತಿಯನ್ನು ಕಂಡಮೇಲಿನ ಮಾಧವನ ಪರಿಸ್ಥಿತಿಯೇ ಉಳಿದರ್ಧದ ವೈಷಮ್ಯಕ್ಕೆ ಕಾರಣವೆಂದು ಚತುರಳಾದ ಲವಂಗಿಕೆ ತೀರ್ಮಾನಿಸಿದಳು. ಆನಂದದಿಂದ ಕೇಕೆ ಹಾಕುತ್ತಾ ಆಕೆ ಒಡತಿಯೆಡೆಗೆ ಧಾವಿಸಿದಳು.

ಮಾಲತಿ ಹೊರಟುಹೋದ ಮೇಲೆ ಮಾಧವನೂ ಅಲ್ಲಿ ನಿಲ್ಲಲಿಲ್ಲ. ಆತನಿಗೆ ತನ್ನ ಗೆಳೆಯ ಮಕರಂದನ ನೆನಪಾಯಿತು. ಆತನು ತನ್ನನ್ನು ಕಾವಿರುವುದಾಗಿ ಹೇಳಿದುದು ನೆನಪಾಗುತ್ತಲೇ ಮಾಧವನು ಅವನೆಡೆಗೆ ಭರದಿಂದ

ಸಾಗಿದನು.

ಮಕರಂದನು ಮಾಧವನ ಬಾಲ್ಯಸ್ನೇಹಿತ. ಶರೀರಗಳೆರಡಾದರೂ ಒಂದೇ ಮನಸ್ಸಿನವರಾಗಿ ಇಂದಿನ ತನಕವೂ ನಡೆದುಕೊಂಡು ಬಂದವರು. ಮಾಧವನ ಬಗ್ಗೆ ಮಕರಂದನಿಗೆ ಒಂದು ಬಗೆಯ ಅಭಿಮಾನವು ತುಂಬಿಕೊಂಡಿತ್ತು.

ಮಾಧವನ ದಾರಿಯನ್ನು ಕಾದು ಮಕರಂದನಿಗೆ ಬೇಸರವೆನಿಸಿದರೂ ಆತನನ್ನು ಕಂಡೊಡನೆ ಎಲ್ಲಾ ಮಾಯವಾಗಿ ಎಲ್ಲಿಲ್ಲದ ಉತ್ಸಾಹ ಮೂಡಿತು. ಸನಿಯಕ್ಕೆ ಬರುತ್ತಲೇ ಮಾಧವನನ್ನು ಸಂಪೂರ್ಣವಾಗಿ ಮಕರಂದ ನೋಡಿದ. ಎಂದಿನಂತೆ ಏಕಿಲ್ಲ ತನ್ನ ಗೆಳೆಯ ಇಂದು? ಎಂಬುದು ಆತನಿಗೆ ಪ್ರಶ್ನೆಯಾಗಿ ಕಾಣಿಸಿತು. ಸೂಕ್ಷ್ಮದರ್ಶಿಯಾದ ಮಕರಂದನು ಥಟ್ಟನೆ ಆತನನ್ನು ಕೇಳಿಯೇ ಬಿಟ್ಟನು.

"ಗೆಳೆಯಾ! ಇದೇನು ನಿನ್ನಲ್ಲಿ ಇಂದು ಇಷ್ಟು ವಿಪರ್ಯಾಸ ಉದ್ಯಾನಕ್ಕೆ ಹೋಗುವಾಗ ಇದ್ದಂತೆ ಬರುವಾಗ ಇಲ್ಲ. ಏನಾದರೂ ಪುಷ್ಪಶರಗಳ ಪೆಟ್ಟು ಬಿದ್ದಿತೆ ಹೂದೋಟದಲ್ಲಿ?"

ಮಾತು ನೇರವಾಗಿ ಲಕ್ಷ್ಯವನ್ನು ಬಂದು ಮುಟ್ಟಿತ್ತು. ಮಾಧವನಿಗೆ ನಾಚಿಕೆಯಾಗಿ ಆತನು ತಲೆ ತಗ್ಗಿಸಿಕೊಂಡನು. ಆಗ ಮಕರಂದನು ಸಾಂತ್ವನಪರನಾಗಿ—

"ಇದೇನೂ ಹೊಸತಾದುದಲ್ಲ. ನಿನಗೆ ಮಾತ್ರ ಹೊಸತಷ್ಟೆ. ಆ ಮನ್ಮಥನೆಂದರೆ ತ್ರಿಮೂರ್ತಿಗಳಿಗೆ ನೀರು ಕುಡಿಸಿದ ಮಹಾನುಭಾವ. ನೀನೇನು ಲಕ್ಷ್ಯ ಆತನಿಗೆ? ನನ್ನಲ್ಲಿ ಎಲ್ಲಾ ಹೇಳಿಬಿಡು" ಎಂದನು.

ಮಾಧವನಿಗೆ ಮಕರಂದನಲ್ಲಿ ಅಷ್ಟು ವಿಶ್ವಾಸ. ತಾನು ಹೂದೋಟಕ್ಕೆ ಹೋದಂದಿನಿಂದ ನಡೆದ ಎಲ್ಲಾ ಕಥೆಯನ್ನೂ ಒಂದೂ ಬಿಡದೆ ಮಾಧವನು ಹೇಳಿದನು. ಸುಖವಾಗಲಿ, ದುಃಖವಾಗಲಿ ಆತ್ಮೀಯರೊಂದಿಗೆ ಹೇಳಿದರೆ ಆಗುವ ಆನಂದವೇ ಬೇರೆ. ಇದೇ ಅನುಭವವು ಮಾಧವನಿಗೆ ಮಕರಂದನೊಂದಿಗೆ ಮಾತನಾಡುವಾಗ ಉಂಟಾಗುತ್ತಿತ್ತು. ಹೀಗೆ ಗೆಳೆಯರಿಬ್ಬರ ಸಂಭಾಷಣೆ ಬಹಳ ಹೊತ್ತಿನ ತನಕ ಸಾಗಿತು.

ಕಲಹಂಸನು ಮಾಧವನ ಪ್ರೀತಿಪಾತ್ರನಾದ ಅನುಯಾಯಿ. ಮಾಧವ

ಎಂಬ ಮೂರಕ್ಷರಗಳು ಆತನಿಗೆ ಸರ್ವಸ್ವಗಳಾಗಿದ್ದುವು. ಆತನು ಹೀಗೆಯೇ ಅಡ್ಡಾಡುತ್ತಾ ಹೋದಾಗ ಮಂದಾರಿಕೆ ಕಾಣಿಸಿದಳು. ಬಹಳ ದಿನಗಳಿಂದಲೂ ಆತನು ಆಕೆಯ ಮೇಲೆ ಕಣ್ಣಿಟ್ಟಿದ್ದನು. ಆಗಾಗ ಅಲ್ಲಲ್ಲಿ ಆತನು ಆಕೆಯನ್ನು ಕೆಣಕುತ್ತಿದ್ದನು. ಆಕೆಗೂ ಇದು ಬೇಡವೆನಿಸಿರಲಿಲ್ಲ. ಅಂತೂ ಮಂದಾರಿಕೆಯನ್ನು ಆಗಾಗ ಬೇಕೆಂದೇ ಕರೆದು ಮಾತನಾಡಿಸುತ್ತಿದ್ದ ಕಲಹಂಸ. ಏನೂ ಕೆಲಸವಿಲ್ಲದಿದ್ದರೂ ಬಹು ದೊಡ್ಡ ರಾಜಕಾರ್ಯವೆಂಬಂತೆ ಆಕೆಯಿದ್ದಲ್ಲಿಗೆ ಅಡ್ಡಾಡುತ್ತಿದ್ದ.

ಆಕೆಯೂ ಹಾಗೆಯೇ. ಕಲಹಂಸನನ್ನು ಎಷ್ಟು ಬಾರಿ ನೋಡಿದರೂ ಆಕೆಗೆ ಸಾಕೆನಿಸುತ್ತಿರಲಿಲ್ಲ. ಹೀಗಿರುವುದರಿಂದ ಅವರಿಬ್ಬರು ಒಬ್ಬರನ್ನೊಬ್ಬರು ಆಗಾಗ ಇದಿರು ನೋಡುವಂತಾಗುತ್ತಿತ್ತು.

ಮಂದಾರಿಕೆಯ ಕೈಯಲ್ಲಿ ಮಾಧವನ ಚಿತ್ರವನ್ನು ಕಂಡು ಆತನಿಗೆ ಆಶ್ಚರ್ಯವಾಯಿತು. ತನ್ನ ಒಡೆಯನ ಚಿತ್ರ ಈಕೆಯ ಕೈಗೆ ಹೇಗೆ ಬಂದಿತು? ಎಂದು ಆತ ವಿಚಾರಿಸಿದ. ಮಂದಾರಿಕೆ ಹೇಳಿದಳು—

"ನಮ್ಮ ಒಡತಿ ಮಾಲತಿಬಾಯಿಯವರಿಗೆ ಇವರ ಮೇಲೆ ಭಾರೀಪ್ರೇಮವಾಗಿದೆ. ಇವರನ್ನು ನೋಡಿ ಅವರು ತುಂಬ ಸೋತಿದ್ದಾರೆ. ಹಾಗೆ ಚಿತ್ರ ಬರೆದುದು ನನಗೆ ಕಂಡಿತು. ನಾನು ಒಮ್ಮೆ ನಿಮಗೆ ತೋರಿಸೋಣವೆಂದು ತಂದೆ."

ಕಲಹಂಸನು ಮತ್ತೆ ಅಲ್ಲಿ ನಿಲ್ಲುವಂತಿರಲಿಲ್ಲ. ಚಿತ್ರವನ್ನು ಹೊತ್ತು ಮಾಧವನನ್ನು ಹುಡುಕುತ್ತಾ ಓಡಿಬಿಟ್ಟನು. ಮಂದಾರಿಕೆ ಎಷ್ಟು ಕರೆದರೂ ಆತನಿಗೆ ಕೇಳಿಸಲೇ ಇಲ್ಲ.

ಓಡಿಬರುವ ಕಲಹಂಸನನ್ನು ಕಂಡು ಮಾಧವ ಮಕರಂದರು ನಿಬ್ಬೆರಗಾದರು. ಆದರೆ ಆತನ ಮೊಗದಲ್ಲಿ ಲಾಸ್ಯವಾಡುತ್ತಿದ್ದ ಆನಂದವು ಇವರಿಗೆ ಸಮಾಧಾನ ತಂದಿತ್ತಿತು. ಕೈಯಲ್ಲೇನೋ ವಿಶೇಷವಿದೆ ಎಂಬುದೂ ಆತನ ಚಲನವಲನಗಳಿಂದ ತಿಳಿಯಿತು.

ಅವನು ತಂದ ಚಿತ್ರವನ್ನು ನೋಡಿ ಮಾಧವ ಮಕರಂದರ ಆನಂದಕ್ಕೆ ಎಲ್ಲೆಯಿಲ್ಲದಾಯಿತು. ಮಾಧವನು ಮಾಲತಿಯ ನೈಪುಣ್ಯವನ್ನು ಕಂಡು

ಚಿತ್ರಿತನಾದನು. ಆಕೆಗೆ ತನ್ನಲ್ಲಿರುವ ದೃಢಪ್ರೇಮದಿಂದ ಆತನು ಪುಲಕಿತನಾದನು.

ಕೂಡಲೇ ತಾನೂ ಮಾಲತಿಯ ಚಿತ್ರವೊಂದನ್ನೇಕೆ ಬರೆಯಬಾರದು ಎಂದಿತು ಆತನ ಮನಸ್ಸು. ತತ್‌ಕ್ಷಣ ಆಕೆಯನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದನು. ಆಕೆಯ ಕುರಿತಾದ ಅನುರಾಗವನ್ನು ವ್ಯಕ್ತಪಡಿಸುವ ಪದ್ಯವೊಂದನ್ನೂ ರಚಿಸಿ ಚಿತ್ರದ ಕೆಳಗೆ ಬರೆದುಬಿಟ್ಟನು. ಇದನ್ನೇ ಮೂವರೂ ನೋಡುತ್ತಾ ನಿಂತಿದ್ದರು.

ಇತ್ತ ಮಂದಾರಿಕೆ ಕಲಹಂಸನನ್ನು ಹುಡುಕುತ್ತಾ ಇವರಿದ್ದಲ್ಲಿಗೆ ಬಂದಳು. ಬರುತ್ತಲೇ "ಚಿತ್ರ ಕೊಡು" ಎಂದು ಕೂಗಿ ಹೇಳಿದಳು.

ಮಾಧವನು ಆಗ ತಾನೇ ಬರೆದ ಮಾಲತಿಯ ಚಿತ್ರವನ್ನು ಕಲಹಂಸನು ಆಕೆಯ ಕೈಗಿತ್ತನು ಮಂದಾರಿಕೆ ಅಚ್ಚರಿಯಿಂದ—

"ಇದೇನು, ನಮ್ಮ ಒಡತಿಯ ಚಿತ್ರ! ಎಲ್ಲಿಂದ! ಯಾರು ಬರೆದುದು?" ಎಂದಳು.

"ಯಾರನ್ನು ಆಕೆ ಬರೆದಿರುವಳೋ, ಅವನು" ಎಂದು ಚುಟುಕಾಗಿ ಉತ್ತರವಿತ್ತ ಕಲಹಂಸ. ಮಂದಾರಿಕೆಗೆ ಆನಂದವಾಯಿತು. ಆಕೆ ಅದನ್ನು ತೆಗೆದುಕೊಂಡು ಸೀರೆಯ ಸೆರಗಿನಲ್ಲಿ ಅವಿತಿರಿಸಿಕೊಂಡು ಓಡಿಹೋದಳು.

ನಂದನನ ಬಯಕೆ

ವಿದರ್ಭರಾಜನ ಮಂತ್ರಿಯಾದ ದೇವರಾತನೂ, ಪದ್ಮಾವತೀ ರಾಜನ ಸಚಿವನಾದ ಭೂರಿವಸುವೂ ಎಳೆತನದಿಂದಲೇ ಗೆಳೆಯರು. ಅವರು ಓದಿದ್ದು ಆಡಿದ್ದು ನಲಿದದ್ದು ಮಲಗಿದ್ದು ಎಲ್ಲಾ ಒಂದೇ ವರ್ತುಲದಲ್ಲಿ! ಗುರುಕುಲದಲ್ಲಿ ಎಷ್ಟೋ ಮಂದಿ ವಿದ್ಯಾರ್ಥಿಗಳಿದ್ದರೂ ಇವರಿಬ್ಬರಲ್ಲಿ ಬೆಸೆದಷ್ಟು ಸ್ನೇಹ, ಬಾಂಧವ್ಯ, ಅನ್ಯೋನ್ಯತೆ ಇನ್ನಾರಲ್ಲೂ ಉಂಟಾಗಿರಲಿಲ್ಲ.

ವಿದ್ಯಾಭ್ಯಾಸ ಮುಗಿಸಿ ತಂತಮ್ಮ ನಗರಗಳನ್ನು ಸೇರಿ ಇಬ್ಬರೂ ರಾಜ ಕಾರಣದಲ್ಲಿ ದುಡಿಯುವವರು. ಮಂತ್ರಿಗಳ ಮಕ್ಕಳೆಂದ ಮೇಲೆ ಮುಂದೆ ಮಂತ್ರಿಪಟ್ಟ ಪರಂಪರೆಯಿಂದ ಅವರಿಗೆ ಬರಲೆ ಬೇಕಷ್ಟೆ. "ಚಿಕ್ಕಂದಿನ ಗೆಳೆತನ ವನ್ನು ಸದಾ ಉಳಿಸಿ ಬೆಳೆಸಿಕೊಂಡು ಬರಬೇಕು. ಪರಸ್ಪರ ರಾಷ್ಟ್ರಗಳು ಮೈತ್ರಿಯಿಂದಿರಬೇಕು. ಬಾಲ್ಯ ಜೀವನದ ರಸನಿಮಿಷಗಳ ಸವಿನೆನಹು ಜೀವ ಮಾನ ಪರ್ಯಂತ ಮರುಕೊಳಿಸುವಂತಹ ಒಂದು ಸಂಬಂಧವನ್ನೂ ಮುಂದೆ ನಾವು ಮಾಡಿಕೊಳ್ಳಬೇಕು" ಎಂದು ಸಂಕಲ್ಪಿಸಿ ತಂತಮ್ಮೊಳಗೆ ಕೊಳ್ಕೊಡುಗೆ ಮಾಡಿಕೊಳ್ಳತಕ್ಕದ್ದು ಎಂದು ತೀರ್ಮಾನಿಸಿದ್ದರು. ಈ ಪ್ರತಿಜ್ಞೆ ನೆರವೇರುವ ಕಾಲದಲ್ಲಿ ಇಂದು ಸನ್ಯಾಸಿನಿಯಾಗಿರುವ ಕಾಮಂದಕಿಯೂ ಅವರ ಬಳಿಯಲ್ಲಿ ದ್ದಳು. ಆಕೆಯೂ ಅವರ ಸಹಾಧ್ಯಾಯಿನಿಯಾಗಿದ್ದಳು. ಇಬ್ಬರಲ್ಲೂ ಆಕೆಗೆ ಸಮಾನವಾದ ವಿಶ್ವಾಸಾದರಗಳಿದ್ದುವು.

ಇಂದು ಭೂರಿವಸು–ದೇವರಾತರು ಎರಡು ರಾಜ್ಯಗಳ ಮಂತ್ರಿಪಟ್ಟವ ನ್ನೇರಿ ರಾಜ್ಯಸೂತ್ರಗಳಲ್ಲಿ ಕೈಯಾಡಿಸುವವರು. ದೇವರಾತನಿಗೆ ಮಾಧವ ನೆಂಬ ಮಗನಿದ್ದರೆ ಭೂರಿವಸುವಿಗೆ ಮಾಲತಿಯೆಂಬ ಮಗಳೂ ಇದ್ದಾಳೆ: ಹಿರಿಯರಿಬ್ಬರಿಗೂ ತಮ್ಮ ಪ್ರತಿಜ್ಞೆ ನೆನಪಿದೆ. ದೇವರಾತನು ತನ್ನ ಮಗ ನನ್ನು ಭೂರಿವಸುವಿನ ರಾಜಧಾನಿಗೆ ಹೆಚ್ಚಿನ ವಿದ್ಯಾಭ್ಯಾಸಕ್ಕೆ ಕಳಿಸುವ ನೆಪ ದಿಂದ ಹಿಂದಿನ ಪ್ರತಿಜ್ಞೆಗೆ ಚಾಲನೆ ಕೊಟ್ಟಂತಾಗಿತ್ತು.

ಭೂರಿವಸುವೂ ತನ್ನ ಗೆಳೆಯನನ್ನಾಗಲಿ ಪ್ರತಿಜ್ಞೆಯನ್ನಾಗಲಿ ಮರೆ

ಯುವ ಕೃತಘ್ನ ಇಲ್ಲವೇ ಶಠನಲ್ಲ. ಮಾಧವನು ಯೋಗ್ಯ ವರನೆಂದು ಆತನಿಗೆ ಆನಂದವಾಯಿತು. ಆದರೆ ಪರಿಸ್ಥಿತಿ ಅನುಕೂಲವಿಲ್ಲದ ಬಗ್ಗೆ ಆತನು ತನ್ನ ದೈವವನ್ನು ಹಳಿಯುವ ಬೇರೆ ವಿಧಿಯಿರಲಿಲ್ಲ.

ಅಮಾತ್ಯ ಭೂರಿವಸು ಪದ್ಮಾವತೀರಾಜನ ಸಚಿವನಾಗಿದ್ದರೂ ರಾಜನು ನಂದನನನ್ನು ನರ್ಮಸಚಿವನನ್ನಾಗಿ ಮಾಡಿಕೊಂಡಿದ್ದನು. ರಾಜರು ತಮ್ಮ ಕೆಲವೊಂದು ಕಾಮನೆಗಳನ್ನು ತೃಪ್ತಿಪಡಿಸುವ ಸಲುವಾಗಿ ಇಂಥ ವ್ಯಕ್ತಿಗಳನ್ನು ಇರಿಸಿಕೊಳ್ಳುತ್ತಾರೆ. ರಾಜನ ಯೋಗ್ಯತೆಯನ್ನು ಹೊಂದಿಕೊಂಡು ನರ್ಮಸಚಿವರ ಸ್ಥಾನಮಾನಗಳೂ ಇರುತ್ತವೆ. ರಾಜನು ಹೆಚ್ಚು ಕ್ರೀಡಾಸಕ್ತನಾದರೆ ರಾಜಕಾರ್ಯವನ್ನು ಸಚಿವನಿಗೆ ಬಿಟ್ಟುಕೊಟ್ಟು ನರ್ಮಸಚಿವರೊಂದಿಗೆ ವಿಹರಿಸುತ್ತ ಇರುವುದೂ ಉಂಟು.

ನಂದನನು ರಾಜನ ನರ್ಮಸಾಚಿವ್ಯದಲ್ಲಿ ಚೆನ್ನಾಗಿ ಪಳಗಿದ್ದ. ರಾಜನು ಆತನ ಮಾತಿಗೆ ಸಾಕಷ್ಟು ಗೌರವವನ್ನು ಕೊಡುವ ಮಟ್ಟದಲ್ಲೇ ಇದ್ದನು. ನಂದನನಿಗೆ ತಾನು ರಾಜನಿಂದ ಏನನ್ನೂ ಪಡೆದೇನು ಎಂಬ ಆತ್ಮವಿಶ್ವಾಸವೂ ಹುಟ್ಟಿಬಿಟ್ಟಿತ್ತು.

ನಂದನನಿಗೆ ಪ್ರಾಯ ಸಾಕಷ್ಟಾಗಿತ್ತು. ರೂಪವೇನೂ ಹೊಗಳುವಂತಹುದಲ್ಲ. ಆದರೂ ಆತನಿಗೆ ಮದುವೆಯೊಂದನ್ನಿನ್ನು ಮಾಡಿಕೊಳ್ಳಬೇಕೆಂಬ ಹಂಬಲ ಬಲವಾಗಿಬಿಟ್ಟಿತ್ತು. ಮಾಲತಿಯನ್ನು ನೋಡಿದ್ದರಿಂದಲೇ ಆತನಿಗೆ ಈ ಹುಚ್ಚು ಬಲವಾಗಿರಬೇಕೆಂದು ಹೆಚ್ಚಿನವರು ಊಹಿಸಬಹುದಾಗಿತ್ತು. ಅಂತೂ ರಾಜನ ಮೂಲಕ ಭೂರಿವಸುವನ್ನೊಪ್ಪಿಸಿ ಮಾಲತಿಯನ್ನು ಲಗ್ನ ಮಾಡಿಕೊಳ್ಳಬೇಕೆಂದು ನಂದನನು ಹೊಂಚುಹಾಕುತ್ತಿದ್ದನು. ಮಾಲತಿಯು ರೋಸುದಪ್ಪಾದರೂ ಯೋಗ್ಯತೆ, ಸೌಂದರ್ಯ ತನ್ನಲ್ಲಿಲ್ಲದಿರುವುದರಿಂದ ಭೂರಿವಸು ತನಗೆ ಮನಃಪೂರ್ವಕವಾಗಿ ಹುಡುಗಿಯನ್ನು ಕೊಡಲಾರನೆಂದು ನಂದನನು ತರ್ಕಿಸಿದ್ದನು.

ನಂದನನ ಈ ಹಂಚಿಕೆ ಭೂರಿವಸುವಿಗೆ ಹೇಗೋ ತಿಳಿದು ಬಂದಿತು. ಆತನು ಬಹಳ ಚಿಂತೆಗೀಡಾದನು. ಮಾಧವನಂಥ ಅನುರೂಪನನ್ನು ಬಿಟ್ಟು ನಂದನನಂಥ ಅಯೋಗ್ಯನಿಗೆ ಮಾಲತಿಯನ್ನು ಕೊಡಲು ಭೂರಿವಸುವಿನ ಹೆತ್ತ ಕರುಳು ಒಪ್ಪುವುದೆಂತು ಸಾಧ್ಯ? ಆದರೆ ನಂದನನಿಗೆ ಕೊಡುವುದಿಲ್ಲ

ವೆಂದರೆ ರಾಜನಿಗೆ ಸಿಟ್ಟಾದರೆ ಎಂಬ ಹೆದರಿಕೆಯೂ ಇತ್ತು. ಅತ್ತ ಹುಡುಗಿಯನ್ನು ಕೊಡಲೂ ಬಾರದು; ಇತ್ತ ರಾಜನೊಡನೆ ವೈಮನಸ್ಸೂ ಮಾಡಿಕೊಳ್ಳಬಾರದು. ಹಾವು ಸಾಯಲೂ ಬೇಕು, ಕೋಲು ಮುರಿಯಲೂ ಬಾರದು ಎಂದು ಭೂರಿವಸುವಿನ ಆಶಯ. ಇದನ್ನೇ ನಿತ್ಯವೂ ಆತನು ಚಿಂತಿಸುತ್ತಿದ್ದನು.

ಕಾಮಂದಕಿ ಸರ್ವಸಂಗ ಪರಿತ್ಯಾಗ ಮಾಡಿದ ಸಂನ್ಯಾಸಿನಿಯಾದರೂ ಭೂರಿವಸು-ದೇವರಾತರಲ್ಲಿ ಆಕೆಗೆ ವಿಶೇಷ ಆತ್ಮೀಯತೆ ಇತ್ತು. ಭೂರಿವಸು ಕಾಮಂದಕಿಗೆ ತನ್ನ ಪರಿಸ್ಥಿತಿಯನ್ನು ತಿಳಿಸಿದಾಗ ಆಕೆಗೆ ಹೇಗಾದರೂ ಇಲ್ಲಿ ತನ್ನ ಪಾತ್ರ ಅನಿವಾರ್ಯವಾಗಿ ಬೇಕು ಎಂಬುದು ತಿಳಿಯಿತು. ಆದುದರಿಂದ ಭೂರಿವಸುವನ್ನು ಆಕೆ ಸಮಾಧಾನ ಪಡಿಸಿ ತಾನು ಈ ಶ್ರೇಯಸ್ಸಿನ ಕೆಲಸಕ್ಕಾಗಿ ದುಡಿಯುವುದಾಗಿ ಒಪ್ಪಿಕೊಂಡಳು. ಆಕೆಯ ಸಲಹೆಯಂತೆಯೇ ಭೂರಿವಸು ಮಾಧವನ ಪರಿಚಯವಿಲ್ಲದವನಂತೆಯೇ ಇದ್ದನು. ಆತನು ರಾಜಕೀಯ ವ್ಯವಹಾರಗಳಲ್ಲಿಯೇ ತನ್ನ ಯಾವತ್ತೂ ಸಮಯವನ್ನು ಕಳೆಯುತ್ತಿದ್ದನು.

ಕಾಮಂದಕಿ ಎಲ್ಲಾ ವಿಚಾರಗಳನ್ನು ಜಾಣತನದಿಂದ ನಿರ್ವಹಿಸುವ ಸಂಕಲ್ಪ ಮಾಡಿದ್ದಳು. ಇತರರಿಗೆ ಸಂಶಯ ಬರಬಾರದು, ಕೆಲಸವೂ ಸಾಧಿಸಲ್ಪಡಬೇಕು ಎಂದು ಆಕೆ ವಿಚಾರಿಸುತ್ತಿದ್ದಳು. ಇದರಲ್ಲಿ ಆಕೆಗೆ ಮಾಲತಿಯ ಗೆಳತಿಯಾದ ಲವಂಗಿಕೆಯೂ ಅವಲೋಕಿತೆಯೂ ವಿಶೇಷ ಸಹಕರಿಸುತ್ತಿದ್ದರು.

ಮಾಧವನು ಆಗಾಗ ಅತ್ತಿತ್ತ ಹೋಗಿ ಬರುವುದು ಅಮಾತ್ಯ ಭೂರಿವಸುವಿನ ಮನೆಯ ಮುಂದಿನ ರಸ್ತೆಯ ಮೇಲೆಯೇ ಆಗಿತ್ತು. ಆತನಿಗೆ ಅಭ್ಯಾಸ, ಗೆಳೆಯರ ಬಳಗ ಎರಡನ್ನು ಬಿಟ್ಟರೆ ಇನ್ನೇನೂ ಇಲ್ಲ. ಗೆಳೆಯರೊಂದಿಗೆ ಸಾಹಿತ್ಯ ರಾಜಕೀಯ ವಿಚಾರಗಳನ್ನು ಚರ್ಚಿಸುತ್ತ ಆತನು ವಿಹಾರಕ್ಕೆ ಹೋಗುವುದೂ ಇತ್ತು.

ಮಾಳಿಗೆಯ ಮೇಲೆ ಕುಳಿತು ಮಾಲತಿ ಆಗಾಗ ರಸ್ತೆಯ ಕಡೆಗೆ ದೃಷ್ಟಿ ಹಾಯಿಸಿದಾಗ ಆಕೆಗೆ ಮಾಧವನ ದರ್ಶನವಾಗುತ್ತಿತ್ತು. ಮನಸ್ಸಿಗೆ ಬೇಸರ ಬಂದಾಗಲೆಲ್ಲಾ ಆಕೆ ಅಲ್ಲಿ ಬಂದು ಕುಳಿತು ಅತ್ತಿತ್ತ ಹೋಗಿ ಬರುತ್ತಲಿರುವ ಜನರನ್ನು ನೋಡುತ್ತಿದ್ದಳು. ಆದರೆ ಆಕೆಗೆ ಮಾಧವನನ್ನು ಆಗಾಗ ಕಂಡು

ಆತನ ಸೌಂದರ್ಯದ ಮೇಲೆ ಮೋಹವುಂಟಾಗಿತ್ತು. ಆತನ ಬಗ್ಗೆ ಅವಳಲ್ಲಿ ಆದರಾಭಿಮಾನಗಳು ಮೂಡಿದ್ದುವು.

ಮಾಲತಿ ಹೀಗೆ ನೋಡುತ್ತಿದ್ದುದು ಮಾಧವನಿಗೆ ಹೇಗೆ ಗೊತ್ತಾಗಬೇಕು? ಆತನು ತನ್ನ ದೈನಂದಿನ ಕಾರ್ಯಕ್ರಮಗಳಿಗಾಗಿ ಎಂದಿನಂತೆ ಹೋಗಿಬರುತ್ತಲೇ ಇದ್ದನು. ಆತನು ಎಷ್ಟು ಹೊತ್ತಿಗೆ ಇಲ್ಲಿ ಹಾದುಹೋಗುತ್ತಾನೆ? ಎಂಬ ಪ್ರತೀಕ್ಷೆಯೇ ಮಾಲತಿಗೆ ಒಂದು ಉದ್ಯೋಗವಾಗಿ ಹೋಗಿಬಿಟ್ಟಿತ್ತು. ಊಟತಿಂಡಿಗಳಲ್ಲೂ ಆಕೆಗೆ ವಿಶೇಷ ಲಕ್ಷ್ಯವಿರಲಿಲ್ಲ. ಮಾಧವನು ಪ್ರತಿದಿನವೂ ಆ ದಾರಿಯಾಗಿ ಬರುವ ಸಮಯ ಬಂತೆಂದರೆ ಆಕೆ ಸೌಧದ ಮೇಲೆ ಬಂದು ಯಾರಿಗೂ ತಿಳಿಯದಂತೆ ರಸ್ತೆಯಕಡೆಗೆ ದಿಟ್ಟಿ ಹಾಕುತ್ತಿದ್ದಳು. ಒಮ್ಮೊಮ್ಮೆ ಗೆಳತಿಯರು ವಿಹಾರಕ್ಕಾಗಲಿ, ಆಟಕ್ಕಾಗಲಿ ಕರೆದರೂ ಆಕೆ 'ನನಗೆ ಈಗ ಬಿಡುವಿಲ್ಲ' ಎನ್ನುತ್ತಿದ್ದಳು. ಲವಂಗಿಕೆಯಂಥ ಆತ್ಮೀಯ ಗೆಳತಿಯರೊಂದಿಗೆ ಕುಳಿತು ಹರಟುತ್ತಾ ರಾಜಮಾರ್ಗದ ಯಾತಾಯಾತದ ಗೊಂದಲವನ್ನು ನೋಡುವ ನೆಪದಿಂದ ಮಾಧವನನ್ನೇ ನಿರೀಕ್ಷಿಸುತ್ತಿದ್ದಳು.

ಹೀಗೆಯೇ ತುಸು ದಿನ ಕಳೆದ ಮೇಲೆ ನಗರದ ಮದನೋದ್ಯಾನದ ಉತ್ಸವವು ನಡೆಯಿತು. ಆ ದಿವಸದ ಪ್ರಕರಣವು ಪ್ರೇಮಾಭಿವ್ಯಕ್ತಿಗೆ ನಾಂದಿಯಾಯಿತೆನ್ನಬಹುದು. ಮಾಧವನಿಗೆ ಮಾಲತಿಯ ದರ್ಶನ ಅದೇ ಹೊಸತು. ಆತನ ಪ್ರೇಮವು ಉದಯಿಸಿದ ಸನ್ನಿವೇಶವೂ ಅದೇ. ಆದರೆ ಮಾಲತಿಗೆ ಮಾಧವನಲ್ಲಿರುವ ಪ್ರೇಮದ ಸೂಚನೆಯಾದುದೂ ಅದೇ ಸಂದರ್ಭದಲ್ಲಿ.

ಮಾಧವನು ಮಾಲತಿಯನ್ನು ನೋಡಿದುದು, ಲವಂಗಿಕೆ ಬಕುಲಮಾಲೆ (ರೆಂಜೆ ಹೂವಿನ ಮಾಲೆ) ಯನ್ನು ಕೊಂಡೊಯ್ದುದು, ಎಲ್ಲಾ ಮಾಧವನಿಗೆ ವಿಚಿತ್ರವೆನಿಸಿದರೆ, ಮಾಲತಿಗೆ ತನ್ನ ಬಯಕೆ ಮಾಧವನಿಗೆ ತಿಳಿಯಬೇಕು, ಹಾಗೂ ತಿಳಿಸಿದಂತಾಯಿತು ಎಂಬ ತೃಪ್ತಿಯುಂಟಾಗಿತ್ತು. ಈ ಘಟನೆಗೆ ಪುಟ ಕೊಡುವಂತೆ ಲವಂಗಿಕೆ ಮಾಲತಿ ಬರೆದ ಮಾಧವನ ಚಿತ್ರವನ್ನು ಆತನ ಕೈಸೇರುವಂತೆ ಮಾಡಿದ್ದಳು.

ಮದನೋದ್ಯಾನದ ಉತ್ಸವದಿಂದ ಮರಳಿದ ಮಾಲತಿ ಲವಂಗಿಕೆಯನ್ನು ಕರೆದು ಮಾಧವನ ವಿಚಾರವನ್ನು ಪರಿಪರಿಯಿಂದ ಕೇಳಿದಳು. ಲವಂಗಿಕೆ

ಮಾಲತಿಯ ಪ್ರಶ್ನೆಗಳನ್ನೆಲ್ಲಾ ಸರಿಯಾಗಿ ಉತ್ತರಿಸಿದಳು. ಮಾಲತಿಗೆ ಆನಂದವು ಹಿಡಿಸದಷ್ಟು ಆಗಿಬಿಟ್ಟಿತು.

ಲವಂಗಿಕೆ ತಂದ ರೆಂಜೆ ಹೂವಿನ ಮಾಲೆ ಮಾಲತಿಗೆ ಬಹಳ ವಿಶೇಷವಾದ ರತ್ನ ದೊರೆತಂತಾಗಿತ್ತು, ಅಥವಾ ಮಾಧವನೇ ದೊರೆತಂತಾಗಿತ್ತು ಎಂದರೂ ಸರಿಯೆ; ಮಾಲತಿ ಎವೆ ಮುಚ್ಚದೆ ಮಾಲೆಯನ್ನು ನೋಡುತ್ತಲೆ ಕುಳಿತಳು. ತಿರುಗಿಸಿ ತಿರುಗಿಸಿ ಹತ್ತಾರು ಬಾರಿ ನೋಡಿ ಕೊನೆಗೆ ಲವಂಗಿಕೆಯೊಡನೆ ಕೇಳಿದಳು—

"ಗೆಳತಿ, ಮಾಲೆ ಪೋಣಿಸಿದುದು ಬಹಳ ಸುಂದರವಾಗಿದೆ. ಆದರೆ ಇದೇನು ಅರ್ಧದ ಅನಂತರದ ರಚನೆಯಲ್ಲಿ ವ್ಯತ್ಯಾಸ?"

"ಸಖಿ, ವ್ಯತ್ಯಾಸವೇನು ? ತೀರಾ ವಿಷಮವಾಗಿದೆ!"

"ಲವಂಗಿಕೆ, ಇದಕ್ಕೇನು ಕಾರಣವಿರಬಹುದು ?"

"ಕಾರಣ ನೀನೇ."

"ಅದು ಹೇಗೆ ?"

"ನೀನು ಆತನಿಗೆ ಕಾಣಿಸುವ ತನಕದ ರಚನೆ ಅನುಸ್ಯೂತವಾಗಿದೆ. ನಿನ್ನನ್ನು ನೋಡಿದುದು ಈ ವಿಪರೀತಕ್ಕೆ ಕಾರಣ."

"ನಿಜವಾಗಿಯೂ ಅಹುದೆ ? ಹಾಗಿದ್ದರೆ ಅವರಿಗೂ ನನ್ನಲ್ಲಿ ಅನುರಾಗವಿದೆಯೆ ?" ಮಾಲತಿ ಹರ್ಷನಿರ್ಭರಳಾಗಿ ಲವಂಗಿಕೆಯ ಕೊರಳನ್ನಪ್ಪಿ ಪ್ರಶ್ನಿಸಿದಳು.

ಅಷ್ಟರಲ್ಲಿ ಲವಂಗಿಕೆಯ ಶರೀರದಿಂದ–ಬಹುಶಃ ಸೆರಗಿನ ಮರೆಯಿಂದ–ಏನೋ ಒಂದು ಜಾರಿದಂತೆ ಮಾಲತಿಗೆ ಭಾಸವಾಯಿತು. ತಾನು ಬರೆದ ಮಾಧವನ ಚಿತ್ರವನ್ನು ಆತನಿಗೆ ಮಂದಾರಿಕೆಯ ಮೂಲಕ ಮುಟ್ಟಿಸುವುದಾಗಿ ಲವಂಗಿಕೆ ಒಯ್ದು ಅಂತೆಯೇ ಹಿಂದೆ ತಂದಿರಬೇಕು ಎಂದೊಮ್ಮೆ ಯೋಚಿಸಿಕೊಂಡಳು. ಅಥವಾ ಮಾಧವನಿಗೆ ಮುಟ್ಟಿಸಿ ಹಿಂದೆ ತಂದುದೆ ಎಂದೂ ಆಕೆಗೆ ಸಂಶಯವಾಯಿತು. ಅಂತೂ ತಿಳಿಯುವ ಕುತೂಹಲ ಆಕೆಯಲ್ಲಿ ಬೆಳೆಯಿತು. "ಅದೇನು ಜಾರಿದುದು ?" ಎಂದು ಕೇಳಿಯೇ ಬಿಟ್ಟಳು. ಲವಂಗಿಕೆ ಹೇಳಿದಳು—

"ಅದೊಂದು ಚಿತ್ರ."

"ಹಾಗಿದ್ದರೆ ನೋಡಬೇಡವೆ ನಾನು ?"

"ನಿನ್ನನ್ನೇ ನೀನೇಕೆ ನೋಡಿಕೊಳ್ಳಬೇಕು ?"

ಲವಂಗಿಕೆ ಹೇಳಿದುದನ್ನು ಕೇಳಿ ಮಾಲತಿಗೆ ಅರೆಕ್ಷಣ ಏನೂ ಹೊಳೆಯಲಿಲ್ಲ. ಆಮೇಲೆ ಥಟ್ಟನೆ ಚಿತ್ರವೆಡೆಗೆ ಕೈಹಾಕಿ "ಇತ್ತ ಕೊಡು" ಎಂದಳು. ಲವಂಗಿಕೆ ಚಿತ್ರವನ್ನು ಕೊಟ್ಟಾಗ ಮಾಲತಿಗೆ ಅಚ್ಚರಿಯಾಯಿತು. ತನ್ನ ಕಣ್ಣನ್ನು ಆಕೆ ನಂಬಲಿಲ್ಲ. ಆ ಚಿತ್ರವನ್ನು ಬಹಳ ಹೊತ್ತು ನೋಡಿಕೊಂಡಳು. ಆಕೆಗೆ ತನ್ನ ಚಿತ್ರವನ್ನು ನೋಡುವುದು ಮುಖ್ಯವಲ್ಲ. ಅದನ್ನು ಬರೆದವನ ಚಮತ್ಕಾರ ಹಾಗೂ ಸೌಂದರ್ಯಪ್ರೇಮವನ್ನು ಆಕೆ ಗುರುತಿಸುತ್ತಿದ್ದಳು. ಚಿತ್ರದ ಕೆಳಗೆ ಏನೋ ಬರೆದಂತಿದೆಯೆಂದು ಅದನ್ನೂ ಓದಿದಳು. ಛೆ, ಇದು ಮಾಧವನ ಹೃದಯದ ಪ್ರತಿಬಿಂಬ! ಎಷ್ಟು ಸುಂದರವಾದ ಭಾವ ! ಅಂದವಾದ ಪದ್ಯ! ಇದು ಆತನದೇ ಚಾಕಚಕ್ಯವೆಂದು ಮಾಲತಿಗೆ ತತ್‌ಕ್ಷಣ ಹೊಳೆಯಿತು. ಲವಂಗಿಕೆ ಅದನ್ನು ವಿವರಿಸಬೇಕಾಗಿಲ್ಲ. ಮಾಲತಿಗೆ ಈಗ ಸ್ವರ್ಗಕ್ಕೆ ಒಂದೇ ಗೇಣು !

ಆದರೆ ಅದರ ಜೊತೆಗೆ ಕೊರಗು ಆಕೆಯನ್ನು ಅಷ್ಟೇ ಪಾತಾಳಕ್ಕೆ ಜಗ್ಗುತ್ತಿತ್ತು. ತನ್ನ ಬಯಕೆ ಈಡೇರುವ ಬಗೆ ಹೇಗೆ ? ರಾಜನಿಗೆ ವಿರೋಧವಾಗಿ ತಂದೆ ವರ್ತಿಸುವುದು ಎಂತು ? ಈ ಚಿಂತಾತರಂಗವು ಆಕೆಯನ್ನು ವ್ಯಾಕುಲಗೊಳಿಸಿತು. ತನಗೆ ಮಾಧವನ ಹೊರತು 'ಇನ್ನಿಲ್ಲ' ಎಂಬುದಾಗಿ ಆಕೆಯ ಮನಸ್ಸು ದೃಢವಾಗಿಹೋಗಿತ್ತು. ಆದರೆ ಪರಿಸ್ಥಿತಿ ಮಾತ್ರ ಇದಕ್ಕೆ ಪ್ರತಿಕೂಲವಾಗಿರಬೇಕೆ ?

ಹೇಗಿದ್ದರೂ ಮಾಲತಿಯನ್ನು ವಿವಾಹವಾಗಬೇಕೆಂದು ಹೊಂಚುಹಾಕುತ್ತಿದ್ದ ನರ್ಮಸಚಿವ ನಂದನನು, ರಾಜನ ಅನುಗ್ರಹವೇ ಮುಖ್ಯವೆಂದು ತಿಳಿದು, ಪ್ರತಿದಿನವೂ ಹೆಚ್ಚುಹೆಚ್ಚಾಗಿ ಆತನ ಮನಮೆಚ್ಚಿಸತೊಡಗಿದ್ದನು. ಅರಸನಿಗೆ ನಂದನನ ಬಗ್ಗೆ ವಿಶೇಷವಾದ ರಿಯಾಯಿತಿ, ಒಂದು ಬಗೆಯ ಆದರವು ಇದರಿಂದ ನೆಲೆಗೊಳ್ಳುವಂತಾಯಿತು. ನಂದನನು ಸಮಯ ಸಾಧಿಸಿ ತನ್ನ ಮನೋಗತವನ್ನು ಮತ್ತೊಮ್ಮೆ ಹೊರಗೆಡಹಿ ರಾಜನಿಂದಲೇ ಸಂಧಾನ ಕಾರ್ಯವು ಜರಗಿದರೆ 'ಹುಲ್ಲೆ ತನ್ನ ಬಲೆಗೆ ಬೀಳುತ್ತದೆ' ಎಂದು ಬಲವಾಗಿ ನಂಬಿಕೊಂಡಿದ್ದ. ಅಂತೆಯೇ ಆತನು ಸಮಯ ಸಾಧಿಸಿ ರಾಜನ ಕಿವಿಯ

ನ್ನೂಡಿಯೇ ಬಿಟ್ಟ. ರಾಜನು ತನ್ನ ನರ್ಮಸಚಿವನಿಗಾಗಿ ಭೂರಿವಸುವನ್ನು ಕರೆಸಬೇಕಾಯಿತು.

ರಾಜನ ಆಕಸ್ಮಿಕವಾದ ಆಮಂತ್ರಣಕ್ಕೆ ಭೂರಿವಸು ವಿಶೇಷ ಲಕ್ಷ್ಯವಿತ್ತು ಓಡಿ ಬಂದು ಕೈಮುಗಿದು 'ಅಪ್ಪಣೆಯಾಗಬೇಕು' ಎಂದನು.

ರಾಜನು ಆಡಳಿತೆಗೆ ಸಂಬಂಧಿಸಿದ ನಾಲ್ಕಾರು ಮಾತುಗಳನ್ನಾಡಿ ನೇರವಾಗಿ ವಿಷಯಕ್ಕೆ ಬಂದನು.

"ಅಮಾತ್ಯವರ್ಯ, ನಿನಗಂತೂ ಪ್ರಬುದ್ಧೆಯಾದ ಮಗಳಿದ್ದಾಳೆ. ನಮ್ಮ ನಂದನನಿಗೂ ವಿವಾಹವನ್ನು ಮಾಡಿಕೊಳ್ಳುವ ಬಯಕೆಯಾಗಿದೆ. ಇಲ್ಲೇ ಸಂಬಂಧ ಬೆಳೆಸಿಕೊಂಡರೆ ಇಕ್ಕಡೆಯವರಿಗೂ ಅನ್ವೇಷಣೆಯ ಕಷ್ಟ ತಪ್ಪುತ್ತದೆ ಅಲ್ಲದೆ, ಅರಮನೆಯೊಳಗೆ ಸಂಬಂಧವು ದೃಢವಾದರೆ ನಮಗೂ ಹಿತ. ಏನು ನಿನ್ನ ಅಭಿಪ್ರಾಯ? ಮಗಳನ್ನು ಕೊಡಬಹುದಲ್ಲವೆ?"

ಭೂರಿವಸು ರಾಜನಿಂದ ನೇರವಾಗಿ ಬಂದ ಪ್ರಶ್ನೆಗೆ ಉತ್ತರಿಸಲಿಲ್ಲ. ಯಾಕಂದರೆ ಅವನು ಇದನ್ನು ನಿರೀಕ್ಷಿಸಿಯೇ ಇದ್ದನು. ಆತನು ಹೇಳಿದ—

"ರಾಜನಿಗೆ ತನ್ನ ಕುಮಾರಿಯ ಬಗ್ಗೆ ಸಂಪೂರ್ಣ ಅಧಿಕಾರವಿದೆ."

ರಾಜನಿಗೆ ಬಹಳ ಸಂತಸವಾಯಿತು. ಅಮಾತ್ಯ ಭೂರಿವಸು ತನ್ನ ಮಾತಿಗೆ ಇಷ್ಟು ಗೌರವ ಕೊಟ್ಟುದರಿಂದ ರಾಜನಿಗೆ ಆತನ ಬಗ್ಗೆ ವಿಶ್ವಾಸವು ಹೆಚ್ಚಿತು. ತನ್ನ ಮಾತಿಗೆ ಅಮಾತ್ಯನು ಇದಿರಾಡದೆ ನಡೆದುಕೊಂಡುದು ಆತನಿಗೆ ಹೆಮ್ಮೆಯನ್ನು ಉಂಟುಮಾಡಿತು.

ನಂದನನಿಗಂತೂ ಎಲ್ಲಿಲ್ಲದ ಹುಮ್ಮಸ್ಸು ಬಂದಿತ್ತು. ತಾರುಣ್ಯ ಹುರುಪುಗಳು ತುಂಬಿಬಿಟ್ಟಿದ್ದುವು. ಆತನು ಆಗ ತೀರಾ ಬದಲಾಗಿ ಬಿಟ್ಟುದು ಎಲ್ಲರ ಗಮನಕ್ಕೂ ಬಂದಿತ್ತು. ಅಂದಚೆಂದದ ಉಡುಪುತೊಡುಪುಗಳಲ್ಲೇ ಆತನು ಸದಾ ಇರುತ್ತಿದ್ದನು. ಶರೀರಕ್ಕೆಲ್ಲಾ ಸುಗಂಧ ದ್ರವ್ಯಗಳನ್ನು ತಪ್ಪದೆ ಹಚ್ಚಿಕೊಳ್ಳುತ್ತಿದ್ದನು. ಬೆಳಗಿನಲ್ಲಿ ಎದ್ದೊಡನೆಯೇ ಎಲ್ಲಕ್ಕಿಂತಲೂ ಮೊದಲಿನ ನಿತ್ಯವಿಧಿಯೆಂದರೆ ಕ್ಷೌರ. ತನ್ನ ಪ್ರಾಯವನ್ನು ಯಾರೂ ಗುರುತಿಸಬಾರದೆಂದು ಆತನು ಆ ಬಗ್ಗೆ ಹೆಚ್ಚಿನ ಆಸ್ಥೆ ತಳೆದಿದ್ದನು. ಕನ್ನಡಿಯ ಮುಂದೆ ನಿಂತು ಆಗಾಗ ತನ್ನ ಸ್ವರೂಪವನ್ನು ನೋಡಿ ತೃಪ್ತಿಪಟ್ಟುಕೊಳ್ಳುತ್ತಿದ್ದನು. ಹತ್ತು ವರ್ಷಗಳ ಹಿಂದೆ 'ತನ್ನ ವಯಸ್ಸು ನಲವತ್ತು' ಎಂದು ಹೇಳಿದ ನೆನಪಿ

ಲ್ಲವೆ, ಆತನಿಂದು ಯಾರಾದರೂ ವಯಸ್ಸಿನ ಬಗ್ಗೆ ಕೇಳಲಿ, ಕೇಳದಿರಲಿ, ತನ್ನ ವಯಸ್ಸು ಮೂವತ್ತಾರು ಎಂದು ಸಂದರ್ಭವನ್ನು ಕಲ್ಪಿಸಿಯಾದರೂ ಹೇಳಿ ತೃಪ್ತಿಪಟ್ಟುಕೊಳ್ಳುತ್ತಿದ್ದ. ಅಂತೂ ಆತನಿಗೊಂದು ಮದುವೆಯಾಗಬೇಕಾಗಿತ್ತು.

ಭೂರಿವಸುವಿಗೆ ತನ್ನ ಕೆಲಸದಲ್ಲಿ ಆತ್ಮತೃಪ್ತಿ ಇಲ್ಲದಿರಲಿಲ್ಲ. ರಾಜನಿಗೆ ತಾನು ಇತ್ತ ಉತ್ತರದ ಬಗ್ಗೆ ಆತನಿಗೆ ಆನಂದವೆನಿಸಿತ್ತು. 'ತನ್ನ ಕುಮಾರಿಯ ಬಗ್ಗೆ ರಾಜನಿಗೆ ಸಂಪೂರ್ಣ ಅಧಿಕಾರವಿದೆ' ಎಂದ ಮಾತ್ರಕ್ಕೆ ಮಾಲತಿಯ ಬಗ್ಗೆ ರಾಜನಿಗೆ ಅಧಿಕಾರವಿದೆ ಎಂದಾಗುವುದಿಲ್ಲ, ಮಾತ್ರವಲ್ಲದೆ ಅವರವರ ಮಕ್ಕಳ ಬಗ್ಗೆ ಅವರವರೇ ನಿರ್ಣಾಯಕರು ಎಂಬುದನ್ನು ಅಂತರಂಗದಲ್ಲಿಟ್ಟೇ ಈ ವಾಕ್ಯವನ್ನು ಪ್ರಯೋಗಿಸಲಾಗಿದೆ. ಆದರೆ ಅದು ರಾಜನಿಗೆ ಪ್ರಕೃತ ತಿಳಿಯಲಿ, ತಿಳಿಯದಿರಲಿ, ಆ ಮಾತು ಬೇರೆ. ಬುದ್ಧಿವಂತರು ಯಾವಾಗಲೂ ಹೀಗೆಯೇ ಇರುತ್ತಾರೆ. ಇತರರಿಗೆ ಸಂಶಯ ಬಾರದಂತೆ ವ್ಯವಹಾರವನ್ನು ಸುಂದರವಾಗಿಟ್ಟುಕೊಂಡು, ಇನ್ನಿತರ ಉಪಾಯಗಳಿಂದ ತಮ್ಮ ಕಾರ್ಯವನ್ನು ತಟಸ್ಥರಾಗಿ ಮೌನವಾಗಿದ್ದೇ ಸಾಧಿಸಿಕೊಳ್ಳುತ್ತಾರೆ. ಕಾರ್ಯವು ತನ್ನಿಷ್ಟದಂತೆಯೇ ಆಗಬೇಕು, ಆದರೆ ವ್ಯವಹಾರವು ರಾಜನೊಂದಿಗೆ ಕೆಡಬಾರದು ಎಂದು. ಭೂರಿವಸು ವಹಿಸಿದ ಜಾಣ್ಮೆ ಅನನ್ಯವಾದುದು.

ಕಾಮಂದಕಿಯೂ ಇದಕ್ಕೆ ಸಹಾಯಕಳಾಗಿದ್ದುದು ವಿಶೇಷ ತೃಪ್ತಿಕರವಾಗಿತ್ತು ಭೂರಿವಸುವಿಗೆ. ಆಕೆ ವಿಚಾರದ ಆಗುಹೋಗುಗಳನ್ನು ಪರಿಶೀಲಿಸುತ್ತಲೇ ಇದ್ದಳು. ಭೂರಿವಸು ರಾಜನಿಗೆ ಕೊಟ್ಟ ಉತ್ತರದಿಂದ ಆಕೆಗೆ ವಿಶೇಷ ಆನಂದವಾಗಿತ್ತು. ಇನ್ನು ಮುಂದಿನ ಕೆಲಸವನ್ನು ತಾನು ನಿರ್ವಹಿಸಿ ಗೆಳೆಯನಿಗೆ ಸಹಕರಿಸಬೇಕು. ಈ ಸಂಬಂಧ ನೆರವೇರಿಸಿ ಬಿಡಬೇಕು ಎಂದು ಆಕೆ ಟೊಂಕ ಕಟ್ಟಿದ್ದಳು. ಸಂನ್ಯಾಸಿನಿಯಾದರೂ ಆಕೆಗೆ ಸಮಾಜದ ಹಿತ ಬೇಕು. ರೂಪಲಾವಣ್ಯ–ಸದ್ಗುಣಸಂಪನ್ನೆಯಾದ ಕನ್ಯೆಯನ್ನು ಅನುರೂಪವರನೇ ಪಡೆಯಲರ್ಹನಲ್ಲದೆ, ನಂದನನಂಥ ಮುದುಕನಲ್ಲ ಎಂಬುದು ಅವಳ ಧ್ಯೇಯವಾಗಿತ್ತು.

ಕಾಮಂದಕಿಯಲ್ಲಿ ಎಲ್ಲರಿಗೂ ವಿಶೇಷ ಅಭಿಮಾನ. ಆಕೆಯ ನಿಃಸ್ವಾರ್ಥ ಅಂತಃಕರಣ, ಲೋಕೋಪಕಾರಬುದ್ಧಿ ಇವುಗಳಿಗೆ ಎಲ್ಲರೂ ತಲೆ

ಬಾಗಿದ್ದರು. ಮಾಲತೀ ಮಾಧವರಿಗೆ ಆಕೆಯ ಮೇಲೆ ಆತ್ಮೀಯ ಹಿರಿಯ ವ್ಯಕ್ತಿಯಲ್ಲಿದ್ದಷ್ಟು ಅಭಿಮಾನ. ಕಾಮಂದಕಿಗೂ ಅವರಲ್ಲಿ ಅಷ್ಟೇ ವಾತ್ಸಲ್ಯವಿತ್ತು

ಮಾಧವನು ಧೀರಪ್ರಕೃತಿಯವನು. ಆತನಿಗೆ ಈ ಬಗ್ಗೆ ಕಲಿಸಬೇಕಾದ್ದೇನೂ ಇರಲಿಲ್ಲ. ಆದರೆ ಮಾಲತಿ ಸುಕುಕೋಮಲೆ; ಪ್ರಕೃತ್ಯಾ ಅಧೀರೆ. ಆಕೆ ಧೈರ್ಯ ಕೆಟ್ಟಳೆಂದರೆ ಕೆಲಸವೇ ಕೆಟ್ಟುಹೋಗಬಹುದೆಂದು ಕಾಮಂದಕಿ ತಿಳಿದು, ಆಕೆಯ ಮನಸ್ಸನ್ನು ಗಟ್ಟಿಮಾಡಲು ಬಯಸಿ ಮಾಲತಿಯನ್ನು ಹುಡುಕುತ್ತಾ ಬಂದಳು.

ಆಗ ಲವಂಗಿಕೆಯೊಂದಿಗೆ ಮಾಲತಿ ಏಕಾಂತದಲ್ಲಿದ್ದಳು. ಕಾಮಂದಕಿಯೂ ಅಲ್ಲಿಗೆ ಚಿತ್ತೈಸಿದಾಗ ಮಾಲತಿಗೆ ಆನಂದವಾಗಿ ನಮಸ್ಕರಿಸಿದಳು.

"ಪೂಜ್ಯರಿಗೆ ಕುಶಲವೆ?" ಮಾಲತಿ ಪ್ರಶ್ನಿಸಿದಳು.

"ಕುಶಲವೇನು?" ಎಂದಳು ಕಾಮಂದಕಿ.

"ಏನು? ತಮಗೂ ಈ ಬಗೆಯ ಉದ್ವೇಗ!" ಲವಂಗಿಕೆ ಕೇಳಿದಳು.

"ಉದ್ವೇಗವಲ್ಲದೆ ಮತ್ತೇನು? ಇಷ್ಟು ಸುಂದರ ರೂಪವು ಈ ಹಾಳು ಮುದಿಗೂಬೆಯ ಸೊತ್ತಾಗುವುದೆಂದರೆ?"

"ಛೆ, ಛೆ, ಇದು ನಿಜವಾಗಿಯೂ ಅಮಾತ್ಯರ ತಪ್ಪು" ಎಂದಳು ಲವಂಗಿಕೆ.

"ನಿಜ. ಆದರೆ ಭೂರಿವಸುವಿಗೆ ತನ್ನ ಮಗಳ ಹಿತಾಹಿತಕ್ಕಿಂತಲೂ ರಾಜ್ಯಾಧಿಕಾರ ಹಿತಾಹಿತಗಳೇ ಮೇಲು. ಮಗಳನ್ನು ಬಲಿ ಕೊಟ್ಟಾದರೂ ರಾಜನನ್ನು ಮೆಚ್ಚಿಸಿ ತನ್ನ ಪದವಿಯನ್ನು ಗಟ್ಟಿ ಮಾಡಿಕೊಳ್ಳೋಣ ಎಂದು ಆತನ ಬಯಕೆ."

ಕಾಮಂದಕಿಯ ಅಭಿಪ್ರಾಯವು ಮಾಲತೀ ಲವಂಗಿಕೆಯರಿಗೆ ಸರಿಯೆಂದು ಕಂಡಿರಬೇಕು. ಆ ಕ್ಷಣ ಮೌನವಿತ್ತು. ಆಮೇಲೆ ಲವಂಗಿಕೆ ಕೇಳಿದಳು—

"ಇದನ್ನು ಹೇಗಾದರೂ ತಪ್ಪಿಸಲು ಸಾಧ್ಯವಿಲ್ಲವೆ?"

"ಸಾಧ್ಯವಿಲ್ಲವೆ ಎಂದರೆ ಹೇಗೆ? ಬೇರೆಯವರು ಇಲ್ಲಿ ಏನು ಮಾಡಲು ಸಾಧ್ಯ? ತಂದೆಯೇ ಹೀಗೆ ಮಾಡಿದರೆ, ಇನ್ನುಳಿದಿರುವುದು ಕೇವಲ

ದೈವದ ಪ್ರಶ್ನೆ ಮಾತ್ರ. ತಂದೆಯ ಇಷ್ಟಾರ್ಥಕ್ಕೆ ವಿರೋಧವಾಗಿಯೋ, ಅಥವಾ ತಂದೆಗೆ ತಿಳಿಯದೆಯೋ, ಕೆಲವೊಮ್ಮೆ ದೈವವೇ ಅಂಥ ಸಂಬಂಧ ಘಟಿಸಿದ್ದುಂಟು. ನಮ್ಮ ಪೂರ್ವಜರಾದ ದುಷ್ಯಂತ ಶಕುಂತಲೆಯರ, ಊರ್ವಶೀ–ಪುರೂರವರ ಕಥೆ ನೀವು ಕೇಳಿರಬಹುದು. ತಂದೆಗಿಂತಲೂ ದೈವವೇ ಇಲ್ಲಿ ಮುಖ್ಯ. ಇನ್ನು ನಾವು ವಾಸವದತ್ತೆಯ ಕಥೆಯನ್ನು ವಿಚಾರಿಸಿದರೆ, ಆಕೆಯ ತಂದೆ ಸಂಜಯನೊಂದಿಗೆ ವಿವಾಹ ಮಾಡಬಯಸಿದ್ದರೂ, ಆಕೆ ಉದಯನನ್ನೇ ಪ್ರೇಮಿಸಿ ವಿವಾಹವಾಗಿ ತನ್ನ ಬಯಕೆಯನ್ನೀಡೇರಿಸಿಕೊಳ್ಳಲಿಲ್ಲವೆ? ವಾಸವದತ್ತೆ ತಂದೆಯ ಅಭಿಪ್ರಾಯವನ್ನು ಮೀರಿಯಾದರೂ ನಡೆದು ತನ್ನ ಜೀವನವನ್ನು ಸಾರ್ಥಕಪಡಿಸಿಕೊಂಡಳು. ವಿವಾಹದ ಬಗ್ಗೆ ತಂದೆಯ ನಿರ್ಣಯಕ್ಕಿಂತಲೂ ಕನ್ನೆಯ ನಿರ್ಣಯವೇ ಮುಖ್ಯ. ಅದು ಅವರವರ ಧೈರ್ಯ ಸಾಹಸಗಳನ್ನು ಅವಲಂಬಿಸಿಕೊಂಡಿದೆ."

ಕಾಮಂದಕಿಯ ಮಾತು ಮಾಲತೀ–ಲವಂಗಿಕೆಯರಲ್ಲಿ ಪರಿಣಾಮವನ್ನುಂಟು ಮಾಡಿಬಿಟ್ಟಿತು ಅವರು ವಿಚಾರಮಗ್ನರಾದರು. ತುಸು ಹೊತ್ತು ಮೌನವು ವ್ಯಾಪಿಸಿಕೊಂಡಿತು. ಆಮೇಲೆ ಲವಂಗಿಕೆ ಕೇಳಿದಳು—

"ಮಾಧವನು ಯಾರು? ಆತನ ವಿಚಾರವೇನು?"

ಕಾಮಂದಕಿ ಇದೇ ಪ್ರಶ್ನೆಯನ್ನು ನಿರೀಕ್ಷಿಸಿದ್ದಳು. ಆಕೆ ಮಾಧವನ ತಂದೆಯ ಪರಿಚಯವನ್ನೂ ಮಾಧವನ ಸದ್ಗುಣಕೌಶಲ್ಯಾದಿಗಳನ್ನೂ ಯಥಾವತ್ತಾಗಿ ತಿಳಿಸಿದಳು. ಈಗಂತೂ ಮಾಲತಿಗೆ ಮನಸ್ಸು ಸ್ತಿಮಿತದಲ್ಲಿ ನಿಲ್ಲುವಂತಿರಲಿಲ್ಲ. ಮಾಧವನನ್ನು ಆಕೆ ಸಂಪೂರ್ಣ ತನ್ನವನನ್ನಾಗಿ ಮಾಡಿಕೊಂಡಳು.

ಮಾಲತಿಯ ಮೇಲೆ ಕಾಮಂದಕಿಯ ಮಾತುಗಳು ಚೆನ್ನಾಗಿ ಪರಿಣಾಮವನ್ನೆಸಗಿದುವೆನ್ನಬೇಕು. ಮಾಲತಿಗೆ ಈಗ ಕಾಮಂದಕಿ ಹೆಜ್ಜೆಹೆಜ್ಜೆಗೂ ಬೇಕಾಗುತ್ತಿತ್ತು. ಆಕೆ ಬಂದಳೆಂದರೆ ಮಾಲತಿಗೆ ದೇವರೇ ಪ್ರತ್ಯಕ್ಷವಾದ ಹಾಗೆ! ಹೊರಟಳೆಂದರೆ ಕತ್ತು ಹಿಡಿದು 'ಇನ್ನೆಂದು ಬರುವಿರಿ?' ಎಂದು ತಡೆದು ತಡೆದು ಕೇಳುತ್ತಿದ್ದಳು.

ಕಾಮಂದಕಿಗೆ ತನ್ನ ಕರ್ತವ್ಯದ ಬಗ್ಗೆ ನೋಟವು ಹರಿತವಾಗಿಯೇ ಇತ್ತು. ನಂದನನಿಗೆ ಸುಂದರಿಯಾದ ತಂಗಿಯೊಬ್ಬಳಿರುವುದು ಆಕೆಗೆ ಚೆನ್ನಾಗಿ

ತಿಳಿದಿತ್ತು. ಆಕೆಯ ಹೆಸರು ಮದಯಂತಿಕೆ. ಆಕೆಗೂ ಮಾಲತಿಗೂ ಬಹಳ ಸ್ನೇಹವೂ ಇತ್ತು. ಇತ್ತ ಮಾಧವನ ಗೆಳೆಯ ಮಕರಂದನಿಗೆ ಆಕೆಯನ್ನು ವಿವಾಹ ಮಾಡಿಸಿಬಿಟ್ಟರೆ ಒಂದು ಮಂಗಲಕಾರ್ಯದೊಂದಿಗೆ ಮತ್ತೊಂದು ಜರಗುವ ಲಾಭ ಮಾತ್ರವಲ್ಲ, ಗೆಳೆಯರ ತೃಪ್ತಿಯ ಪ್ರಶ್ನೆ ಮಾತ್ರವೂ ಅಲ್ಲ, ಪ್ರಕೃತದ ಕೆಲಸಕ್ಕೆ ಅದರಿಂದ ಪ್ರಯೋಜನವಿದೆ ಎಂದು ಸೂಕ್ಷ್ಮಪ್ರಜ್ಞೆಯಾದ ಕಾಮಂದಕಿ ತಿಳಿದಿದ್ದಳು. ಆದುದರಿಂದ ತನ್ನ ವಿಶ್ವಾಸಪಾತ್ರಳೂ ಮದಯಂತಿಕೆಯ ಸ್ನೇಹಿತೆಯೂ ಆದ ಬುದ್ಧರಕ್ಷಿತೆಗೆ ಮಕರಂದನ ವಿಚಾರವಾಗಿ ಆಕೆಗೆ ಅನುರಾಗ ಹುಟ್ಟುವಂತಹ ಮಾತುಗಳನ್ನಾಡಬೇಕು ಎಂದು ತಿಳಿಸಿದ್ದಳು. ಬುದ್ಧರಕ್ಷಿತೆ ತನ್ನ ಕೆಲಸವನ್ನು ಬಹಳ ಚಾತುರ್ಯದಿಂದ ಮಾಡುತ್ತಲೇ ಇದ್ದಳು. ಆಗಾಗ ಮಕರಂದನು ಸಿಕ್ಕಿದನೆಂಬುದೋ, ಅಥವಾ ಆತನ ರೂಪದ ವಿಚಾರವನ್ನೋ, ಬುದ್ಧಿಯ ಚಾತುರ್ಯವನ್ನೋ, ಇನ್ನೇನೇನೋ ಸಾಹಸಗಳನ್ನೆಲ್ಲಾ ಮದಯಂತಿಕೆಯ ಮುಂದೆ ತಿಳಿಸುತ್ತಿದ್ದಳು. ಮದಯಂತಿಕೆಗೆ ಆತನನ್ನೊಮ್ಮೆ ನೋಡಿಬಿಡಬೇಕು ಎಂದು ಉತ್ಕಂಠೆ ಬಲವಾಗುವಂತೆ ಬುದ್ಧರಕ್ಷಿತೆ ಮಾಡಿಬಿಟ್ಟಿದ್ದಳು.

ಮದಯಂತಿಕೆ ರೂಪವತಿಯಾಗಿದ್ದಳು. ಆಕೆ ನವತಾರುಣ್ಯವನ್ನು ಹೊಂದಿದ್ದು ಭಾವೀಜೀವನದ ಸುಂದರ ಕನಸುಗಳನ್ನು ಹೆಣೆಯುವ ವೇಳೆಯಲ್ಲಿ ಆಕೆಗೆ ಮಕರಂದನ ಸಮಾಚಾರ ಕೇಳುವುದೆಂದರೆ ಇಷ್ಟವೇ. "ರೋಗಿ ಬಯಸಿದ್ದೂ ಹಾಲನ್ನ, ವೈದ್ಯ ಹೇಳಿದ್ದೂ ಹಾಲನ್ನ" ಎಂಬಂತೆ ಕೂಡಿಬಂದಿತು ಈ ವಿಚಾರ.

ಹೂದೋಟದಲ್ಲಿ ಹಬ್ಬ !

ಕೃಷ್ಣಚತುರ್ದಶಿಯ ಹಬ್ಬವೆಂದರೆ ಪದ್ಮಾವತೀನಗರದಲ್ಲಿ ಬಹಳ ವಿಶೇಷ. ಆ ದಿನ ಶಂಕರಪುರದ ದೇವಸ್ಥಾನದಲ್ಲಿ ವಿಜೃಂಭಣೆಯ ಪೂಜೆಪುರಸ್ಸರ ಪಾರಾಯಣಾದಿಗಳು ಜರಗುವುದು ಸಂಪ್ರದಾಯ. ನಗರದ ಸಕಲರೂ ಆ ದಿನ ಅಲ್ಲಿಗೆ ಹೋಗಿ ದೇವರ ದರ್ಶನವನ್ನು ಪಡೆದು ಬರುತ್ತಿದ್ದರು. ಎಂದಿನಂತೆ ಭೂರಿವಸುವಿನ ಪತ್ನಿಯೂ ಅಲ್ಲಿಗೆ ಅವಶ್ಯವಾಗಿ ಹೋಗಲಿರುವಳು ಎಂಬುದರಲ್ಲಿ ಕಾಮುಂದಕಿಗೆ ಸಂಶಯವಿರಲಿಲ್ಲ. ದೇವತಾದರ್ಶನಕ್ಕೆ ಹೋಗುವಾಗ ಮಗಳನ್ನು ಬಿಟ್ಟು ಹೋಗಲಾರಳು ಎಂಬುದೂ ಅಷ್ಟೇ ಸತ್ಯದ ಸಂಗತಿಯಷ್ಟೇ.

ಕಾಮುಂದಕಿಗೆ ಕೂಡಲೇ ಯೋಚನೆಯೊಂದು ಹೊಳೆಯಿತು. ಮಾಲತಿ ಮಾಧವರಿಗೆ ಭೇಟಿ ಮಾಡಿಸಲು ಇದೇ ತಕ್ಕ ಸಂದರ್ಭವೆಂದು ಆಕೆ ನಿರ್ಣಯಿಸಿದಳು. ಆದುದರಿಂದ ಆಕೆ ಅವಲೋಕಿತೆಯನ್ನು ಕರೆದು ಮಾಧವನಿಗೆ ಈ ಸುದ್ದಿ ಮುಟ್ಟಿಸಿದಳು.

ಈ ಸುದ್ದಿ ತಿಳಿದೊಡನೆಯೇ ಮಾಧವನು ಹೊರಟನು. ಶಂಕರಪುರದ ಬಳಿಯ ಹೂದೋಟದಲ್ಲಿ ಹೋಗಿ ತೋಟದ ಸೊಬಗನ್ನು ನೋಡುತ್ತಾ ಕುಳಿತುಕೊಂಡನು.

ಮಾಲತಿ ತಾಯಿಯೊಂದಿಗೆ ಶಂಕರಪುರಕ್ಕೆ ಹೋಗಿದ್ದಳು. ಲವಂಗಿಕೆಯಂತೂ ಆಕೆಯನ್ನು ನೆರಳಿನಂತೆ ಅನುಸರಿಸುವ ಗೆಳತಿಯಾಗಿದ್ದಳು. ಹಾಗೆ ಲವಂಗಿಕೆ ಮಾಲತಿಯನ್ನು ಹೂ ಕೊಯ್ಯಲೆಂದು ಉದ್ಯಾನಕ್ಕೆ ಕರೆದುಕೊಂಡು ಬಂದಳು. ಹಾಗೆ ಅವರಿಬ್ಬರೂ ಹೂಗಳನ್ನು ಕೊಯ್ಯುತ್ತಿದ್ದರು. ಗಿಡಬಳ್ಳಿಗಳ ಮರೆಯಲ್ಲಿದ್ದ ಮಾಧವನಿಗೆ ಮಾಲತಿ ಸ್ಪಷ್ಟವಾಗಿ ಕಾಣಿಸುತ್ತಿದ್ದಳು. ಆತನ ಕಣ್ಣು ಮತ್ತೊಮ್ಮೆ ಆಕೆಯನ್ನು ಕಂಡು ತೃಪ್ತಿಪಟ್ಟುಕೊಂಡಿತು.

"ಗೆಳತಿ, ಬಾ, ಇಲ್ಲಿ ಹೂ ಕೊಯ್ಯೋಣ."

ಮಾಲತಿಯ ಮಾತು ಮಾಧವನ ಕಿವಿಗೆ ಇದೇ ಮೊದಲು ಬಿದ್ದುದು. ಹಿಂದಿನ ಬಾರಿ ಕೇವಲ ನೋಡಿದುದು ಮಾತ್ರ. ಇಂದು ಮಾತನ್ನು ಕೇಳಿ ಆತನಿಗೆ ಅಮೃತಪಾನ ಮಾಡಿದಷ್ಟು ಆನಂದವಾಯಿತು. ಗೆಳತಿ ಲವಂಗಿಕೆ ಯೊಂದಿಗೆ ಮಾತನಾಡುತ್ತ ಹೂ ಕೊಯ್ಯುತ್ತ ಇರುವಾಗ, ಮರೆಯಾಗಿದ್ದ ಮಾಧವನಿಗೆ ಮಾಲತಿಯ ಅಂಗಪ್ರತ್ಯಂಗ ಸೌಂದರ್ಯವು ಸ್ಪಷ್ಟವಾಗಿ ಕಂಡಿತು. ತಾನು ಇದಿರಾಗಿದ್ದ ವೇಳೆಯಲ್ಲಿ ಆಕೆಯ ರೂಪಲಾವಣ್ಯಗಳ ಸೊಗಸನ್ನು ಬೇಕುಬೇಕಾದಂತೆ ಆಸ್ವಾದಿಸಲಾಗಿರಲಿಲ್ಲ. ಇಂದು ದೊರಕಿ ದಂಥ ಸಂದರ್ಭವು ಎಂದೆಂದೂ ಏನು ಮಾಡಿದರೂ ಲಭಿಸುವಂತಹದಲ್ಲ ಎಂದೆ ನಿಸಿತು ಮಾಧವನಿಗೆ. ಈ ಯೋಗವನ್ನು ತಂದೊಡ್ಡಿದ ಕಾಮಂದಕಿಯ ಚಾತುರ್ಯವನ್ನು ಮಾಧವನು ಬಹಳ ಅಭಿನಂದಿಸಿದನು.

ಮಾಲತೀ–ಲವಂಗಿಕೆಯರು ಹೂ ಕೊಯ್ಯುತ್ತಿರುವಲ್ಲಿಗೆ ಕಾಮಂದ ಕಿಯೂ ಬಂದಳು. ಮಂತ್ರಿಯ ಮಗಳೆಂದರೆ ರಾಜವೈಭವದಲ್ಲಿ ಬಳೆದ ಸುಮ ಕೋಮಲೆ; ಸ್ವಲ್ಪ ದಣಿದರೂ ಕೆಂದಾವರೆಯಂತೆ ಕಾಣಿಸುವ ಪ್ರಕೃತಿಯವಳು. ಹೂ ಕೊಯ್ದು ಆಕೆಗೆ ಬಳಲಿಕೆಯುಂಟಾಗಿತ್ತು. ಬೆವರಿನ ಹನಿಗಳು ಆಕೆಯ ಮೊಗದಲ್ಲಿ ಸಾಲುಗಟ್ಟಿ ಮುತ್ತಿನ ಮಾಲೆಯಂತೆ ಹರಿಯತೊಡಗಿದ್ದುವು. ಕಾಮಂದಕಿ ಇದನ್ನು ನೋಡಿ ನಗೆಚಾಟಿಕೆ ಮಾಡಬೇಕೆಂತಲೇ ಹೇಳಿದಳು—

"ಇದೇನು, ಪ್ರಿಯದರ್ಶನವಾದಂತೆ ಮೈಯೆಲ್ಲಾ ಬೆವರಿದೆ? ಕಣ್ಣು ಮುಕುಲಿತವಾಗಿವೆ? ಸಾಕು, ನಿಲ್ಲಿಸು ಹೂ ಕೊಯ್ಯುವದನ್ನು."

ಮಾಲತಿಗೆ ನಿಜವಾಗಿ ಈ ಮಾತುಗಳಿಂದ ನಾಚಿಕೆಯುಂಟಾಗಿ ಕಣ್ಣು ಗಳು ಮತ್ತಷ್ಟು ಮುಕುಲಿತವಾದುವು. ತಲೆ ತಗ್ಗಿಸಿ ನಿಂತುಕೊಂಡಳು. ಆಗ ಕಾಮಂದಕಿ ಆಕೆಯ ಚಿಬುಕವನ್ನೆತ್ತಿ ಕೇಳಿದಳು.

"ಮಗಳೆ, ಹಿಂದೊಮ್ಮೆ ನಾನು ಹೇಳಿದುದು ನೆನಪಿದೆಯೆ?"

"ಯಾವ ವಿಚಾರ?"

"ಮಾಧವ ಎಂಬವನ ವಿಚಾರ."

ಮಾಲತಿಗೆ ನಾಚಿಕೆಯಾಯಿತು. ಆಕೆ ಮಾತನಾಡಲಿಲ್ಲ. ಕಾಮಂದಕಿ ತಾನೇ ಮಾತು ಮುಂದುವರಿಸಿದಳು—

"ನೋಡು, ನಿನ್ನಂತೆಯೇ ಆತನು ನನ್ನ ಇನ್ನೊಂದು ಹೃದಯ.

ನಿನ್ನನ್ನು ನೋಡಿದ ತರುವಾಯ ಆತನ ಪರಿಸ್ಥಿತಿ ವರ್ಣನಾತೀತವಾಗಿದೆ. ಪ್ರಕೃತಿ-ಪ್ರಪಂಚಗಳಲ್ಲಿ ಆತನಿಗೆ ನಿಸ್ಸಾರತೆ ಕಂಡು ಬಂದಿದೆ. ಅಂತೂ ತನ್ನ ಬಯಕೆ ಈಡೇರದಿದ್ದರೆ ಆತನು ಮರಣವನ್ನು ಅನುಭವಿಸಲೂ ಹಿಂಜರಿಯು ಲಾರನು. ಆತನಿಗೆ ಇಂಥ ಕಷ್ಟಗಳನ್ನು ಅನುಭವಿಸಿ ಗೊತ್ತಿಲ್ಲ."

"ನನಗಾಗಿ ಆ ಮಹಾನುಭಾವನು ಈ ಲೋಕದ ಶೋಭೆಯನ್ನು ಕಡಿಮೆ ಮಾಡುವುದೆ ?"

ಈ ಮಾತುಗಳಿಂದ ಕಾಮಂದಕಿಗೆ ಮಾಲತಿಯ ಹೃದಯವು ಇನ್ನಷ್ಟು ಸ್ಫುಟವಾಗಿ ವ್ಯಕ್ತವಾಯಿತು.

"ಪ್ರಾಜ್ಞರೆ, ತಾವು ತಿಳಿಸಿದ ಮಾಧವನ ಸುದ್ದಿಗಿಂತ ಮಾಲತಿಯ ಪರಿಸ್ಥಿತಿಯಾದರೂ ಕಡಿಮೆಯದೇನಲ್ಲ." ಲವಂಗಿಕೆ ಹೇಳಿದಳು.

"ಏನದು ?"

"ಈಕೆಯೂ ಬಾಡಿದ ಕಮಲಿನಿಯಂತೆ ಸಪ್ಪಗಾಗಿದ್ದಾಳೆ. ಮಾಧವನದೇ ಸದಾ ನೆನಪು ಈಕೆಗೆ. ಯಾವ ಆಟ-ಕೂಟಗಳಲ್ಲೂ ಈಕೆಗೆ ಆಸಕ್ತಿಯಿಲ್ಲ. ನಿಮಿಷವನ್ನು ಯುಗದಂತೆ ಕಳೆಯುತ್ತಾಳೆ. ಶರೀರವಂತೂ ನಿತ್ಯವೂ ಬಿಸಿಯಾಗಿಯೇ ಇದೆ."

ಕಾಮಂದಕಿಗೆ ಬೇಸರವಾಯಿತು. "ಅಯ್ಯೋ, ನನ್ನ ಮುದ್ದಿನ ಮಾಲತಿಗೆ ಇಂಥ ಪರಿಸ್ಥಿತಿಯೇ ?" ಎಂದುಕೊಂಡಳು. ಆಗ ಲವಂಗಿಕೆ ಬಕುಲ ಮಾಲೆಯನ್ನೂ, ಮಾಧವನ ಚಿತ್ರವನ್ನೂ ಕೈಯಲ್ಲಿ ಹಿಡಿದುಕೊಂಡು "ಕೇವಲ ಇವೆರಡು ಆಕೆಯನ್ನಿನ್ನೂ ಬದುಕಿಸಿವೆ" ಎಂದಳು.

ಮರೆಯಾಗಿದ್ದ ಮಾಧವನು ಇದನ್ನು ಕೇಳುತ್ತಿದ್ದಂತೆಯೇ ಆನಂದೋನ್ಮಾದದಿಂದ ಹಿಗ್ಗುತ್ತಿದ್ದನು. ಮಾಲತಿಗೂ ತನ್ನಂತೆಯೇ ಮೇರೆ ಮೀರಿದ ತಾಪವಾದುದನ್ನು ನೆನೆಸಿ ಆತನಿಗೆ ಒಂದು ಬಗೆಯ ಸಮಾಧಾನವಾಯಿತು.

ಈ ರೀತಿಯಾಗಿ ರಸನಿಮಿಷಗಳು ಉರುಳಿದುದು ಯಾರಿಗೂ ಗೊತ್ತಾಗಿರಲಿಲ್ಲ. ಮಾತಿನ ಪ್ರವಾಹದಲ್ಲಿ ಇವರು ತೇಲಿಹೋಗಿದ್ದರೆ, ಮಾಧವನು ಆನಂದಪ್ರವಾಹದಲ್ಲಿ ಮುಳುಗೇಳುತ್ತಿದ್ದನು.

ಅಷ್ಟರಲ್ಲಿ ಏನೋ ಒಂದು ಕೋಲಾಹಲ ಕೇಳಿಸಿದಂತಾಯಿತು. ಏನೋ

ಪ್ರಮಾದವಾಗಿದೆಯೆಂದು ಎಲ್ಲರಿಗೂ ತಿಳಿಯಿತು, ಎಲ್ಲರ ಕಿವಿಗಳೂ ನೆಟ್ಟಗಾದುವು.

"ಒಂದು ದುಷ್ಟ ಹುಲಿ ಹೂದೋಟದಲ್ಲಿ ಭಯಂಕರವಾಗಿ ಉಪಟಳ ಕೊಡುತ್ತಿದೆ. ಎಚ್ಚರಿಕೆ, ಎಚ್ಚರಿಕೆ!"

ಕ್ಷಣಾರ್ಧದಲ್ಲಿ ಭಯಂಕರವಾದ ಕರುಣಾಜನಕವಾದ ಚೀತ್ಕಾರವೂ ಕೇಳಿಸಿತು. ಮದಯಂತಿಕೆಯ ಸ್ನೇಹಿತೆಯಾದ ಬುದ್ಧರಕ್ಷಿತೆ ಕಾಮಂದಕಿ ಮೊದಲಾದವರಿದ್ದಲ್ಲಿಗೆ ಓಡಿಬರುತ್ತ "ನಮ್ಮ ಮದಯಂತಿಕೆಯ ಮೇಲೆ ಹುಲಿ ಯೆರಗಿದೆ" ಎಂದು ಗೋಳಿಡುತ್ತಿದ್ದಳು. ಮಾಧವನಿಗೆ ಇದನ್ನು ಸಹಿಸಲಾಗಲಿಲ್ಲ. ಆತನು ಥಟ್ಟನೆ ಮುಂದೆ ಬಂದು "ಎಲ್ಲಿ? ಯಾರು?" ಎಂದು ಕೇಳಿಯೇ ಬಿಟ್ಟನು.

ಮಾಧವನನ್ನು ನೋಡಿ ಮಾಲತಿಗೆ ಅಚ್ಚರಿಯಾಯಿತು. ಇವನಿಲ್ಲಿಗೆ ಎಲ್ಲಿಂದ ಬಂದನೆಂಬುದೇ ಅವಳಿಗೆ ಸಮಸ್ಯೆಯಾಯಿತು. ಜೊತೆಗೆ ಆತನ ದರ್ಶನದಿಂದ ಆನಂದವೂ ತುಂಬಿಬಿಟ್ಟಿತು.

ಮಾಧವನೂ ಮಾಲತಿಯನ್ನು ಸನಿಯದಿಂದ ನೋಡಿಕೊಂಡನು. ಆದರೆ ಆತನಿಗೆ ಇದು ಹೀಗೆ ನಿಂತಿರುವ ಸಮಯವಾಗಿರಲಿಲ್ಲ. ಬುದ್ಧರಕ್ಷಿತೆ ತೋರಿಸಿದೆಡೆಗೆ ಆತನು ತೀವ್ರವಾಗಿ ಸಾಗಿಬಿಟ್ಟನು.

ಇಷ್ಟರೊಳಗೆ ಮಾಧವನ ಗೆಳೆಯನಾದ ಮಕರಂದನು ಮಾಧವನನ್ನು ಹುಡುಕುತ್ತ ಬರುತ್ತಾ ಇದ್ದನು. ಮದಯಂತಿಕೆಯ ಮೇಲೆ ಹುಲಿಯೆರಗಿದುದನ್ನು ಕಂಡು ಆತನು ಹೆಬ್ಬುಲಿಯಂತೆ ಸಿಡಿದೆದ್ದು ಹೊಡೆದು ಅದನ್ನು ನೆಲಕ್ಕೊರಗಿಸಿದನು. ಆತನಿಗೂ ಸಾಕಷ್ಟು ಪೆಟ್ಟುಗಳಾಗಿದ್ದುವು.

ಎಲ್ಲರೂ ಕ್ಷಣಾರ್ಧದಲ್ಲಿ ಅಪಘಾತ ನಡೆದಲ್ಲಿಗೆ ಧಾವಿಸಿದರು.

ಮದಯಂತಿಕೆಯ ಪ್ರಾಣವನ್ನಂತೂ ಮಕರಂದನು ಉಳಿಸಿಬಿಟ್ಟನು. ಆದರೆ ಆತನಿಗೆ ಮಾತ್ರ ಇಹದ ಪರಿವೆಯಿರಲಿಲ್ಲ. ಚೈತನ್ಯವೇ ಇಲ್ಲದಂತಾಗಿತ್ತು.

ತನ್ನ ಗೆಳೆಯನಿಗೆ ಸಂಭವಿಸಿದ ಅನರ್ಥದಿಂದ ಮಾಧವನೂ ಕಂಗೆಟ್ಟು ನಿಶ್ಚೇತನನಾಗಿದ್ದನು. ಆತನಿಗೆ ಶರೀರಕ್ಕೆ ಬಲವಿರಲಿಲ್ಲ; ಮನಸ್ಸಿಗೆ ಧೃತಿಯಿಲ್ಲ. ಮಾಧವನೂ ಮಕರಂದನಂತೆಯೇ ಕಂಗೆಟ್ಟು ಹೋಗಿದ್ದನು.

ತನ್ನ ಪ್ರಾಣವುಳಿಸಿದ ಮಕರಂದನ ಯೋಗಕ್ಷೇಮ ಶುಶ್ರೂಷೆಗಳನ್ನೆಲ್ಲ ಮದಯಂತಿಕೆಯೇ ನೋಡಿಕೊಂಡಳು. ಆತನಿಗೆ ಬೇಕುಬೇಕಾದಂತೆ ಶೈತ್ಯೋಪಚಾರ, ಗಾಳಿ ಹಾಕುವುದು ಎಲ್ಲವನ್ನೂ ಮದಯಂತಿಕೆ ಮಾಡಿದಳು. ಮಾಲತಿಗೂ ಬಹಳ ವೇದನೆಯಾಗಿ ಮಾಧವನಿಗೇನೂ ಆಗದಂತೆ ಆತನನ್ನು ಆಕೆ ಉಪಚರಿಸಿದಳು.

ಕಾಮಂದಕಿ ಮಂತ್ರೋದಕವನ್ನು ಪ್ರೋಕ್ಷಿಸಿದಾಗ ಮಕರಂದನಿಗೆ ಪ್ರಜ್ಞೆ ಬಂದಂತಾಯಿತು. ಅವನು ಚೇತರಿಸಿಕೊಂಡನೆಂದು ತಿಳಿದು ಮಾಧವನು ಉತ್ಸಾಹ ತಳೆದನು. ಆಗ ಎಲ್ಲರ ಮುಖಗಳಲ್ಲೂ ಆನಂದದ ಬೆಳಕು ಪಸರಿಸಿತು. ಮಾಧವನು ಆನಂದದಿಂದ ಮಕರಂದನನ್ನು ತಬ್ಬಿಕೊಂಡನು.

ಬುದ್ಧರಕ್ಷಿತೆ 'ಈತನೇ ಅವನು' ಎಂದು ಮದಯಂತಿಕೆಗೆ ಪರಿಚಯ ಮಾಡಿಕೊಟ್ಟಾಗ ಆಕೆಯ ಆನಂದಕ್ಕೆ ಪಾರವಿರಲಿಲ್ಲ. ತನ್ನ ಬಯಕೆಯಂತೆ ಈತನು ಕಾಣಸಿಕ್ಕಿದುದು ಮಾತ್ರವಲ್ಲ, ಜೀವವನ್ನೇ ಉಳಿಸಿದುದು ಆಕೆಗೆ ವಿಶೇಷವಾಗಿತ್ತು. ಆತನನ್ನು ನೋಡಿ ಆಕೆಗೆ ಇನ್ನೇನೂ ಬೇಡವಾಗಿತ್ತು. ಆಗಾಗ ಆತನನ್ನೇ ಆಕೆ ನೋಡಿಕೊಂಡಳು. ಆತನಿಗೆ ಬೇಕುಬೇಕಾದಂತೆ ಉಪಚಾರ ಮಾಡಿದಳು.

ಕಾಮಂದಕಿ ಮಾಧವನನ್ನು ಕರೆದು "ಈಕೆಯೇ ನಿನ್ನ ಯೋಗಕ್ಷೇಮ ನೋಡಿಕೊಂಡ ಮಾಲತಿ. ಈಕೆಯ ಉಪಕಾರಕ್ಕೆ ಪ್ರತಿಯಾಗಿ ನೀನೇನು ಕೊಡುವೆ?" ಎಂದಳು.

"ಗೆಳೆಯನ ವಿಪತ್ತಿನಿಂದಾಗಿ ಕಂಗೆಟ್ಟ ನನ್ನನ್ನು ಅವಲಂಬಿಸಿದ ಈಕೆಗೆ ನನ್ನ ಜೀವಹೃದಯಗಳಿಗಿಂತ ಹೆಚ್ಚಿನದೇನನ್ನು ಕೊಡಲಿ?"

ಮಾಧವನ ರಸಿಕತೆ, ಬುದ್ಧಿಶಕ್ತಿ, ಚಮತ್ಕಾರಗಳಿಂದ ಎಲ್ಲರಿಗೂ ಹರ್ಷವಾಯಿತು. ಹೀಗೆಯೇ ಎಲ್ಲರೂ ನಡೆದ ಘಟನೆಯ ಕುರಿತು ಚರ್ಚಿಸುತ್ತ ಕುಳಿತರು.

ತುಸು ಹೊತ್ತಿನಲ್ಲಿ ಒಬ್ಬ ಆಳು ಓಡಿ ಬಂದು ಮದಯಂತಿಕೆಯನ್ನು ಕರೆದು ಹೇಳಿದನು: "ನಿನ್ನ ಅಣ್ಣನಿಗೆ ರಾಜನು ಮಾಲತಿಯನ್ನು ಕೊಡುವುದಾಗಿ ಒಪ್ಪಿದ್ದಾನೆ. ಆದುದರಿಂದ ಕೂಡಲೇ ಮನೆಗೆ ಬರಬೇಕು ಎಂದು

ಅಣ್ಣನ ಆದೇಶವಾಗಿದೆ."

ಸಂತಸದ ನಡುವೆ ಈ ಸುದ್ದಿ ಕೇಳಿ ಎಲ್ಲರ ಮುಖಗಳ ಬಣ್ಣವು ಥಟ್ಟನೆ ಬದಲಿಬಿಟ್ಟಿತು.

ಆದರೆ ಮದಯಂತಿಕೆಗೆ ಆನಂದವು ಉಕ್ಕಿ ಬಂದು ಆಕೆ ಮಾಲತಿಯನ್ನು ತಬ್ಬಿಕೊಂಡಳು.

"ಗೆಳತಿ, ಚಿಕ್ಕಂದಿನಿಂದಲೇ ಒಟ್ಟಿಗೆ ಆಡಿ ಬೆಳೆದವರು ನಾವು. ಇಂದು ನೀನು ನಮ್ಮ ಮನೆಯನ್ನೇ ಬೆಳಗಲಿರುವೆ " ಎಂದಳು.

"ಮದಯಂತಿಕೆಯ ಅಣ್ಣನಿಗೆ ಮಾಲತಿ ಸಿಗುವುದೊಂದು ಲಾಭವೇ " ಎಂದು ಕಾಮಂದಕಿ ನಗೆಚಾಟಿಕೆ ಹಾರಿಸಿಬಿಟ್ಟಳು. ಪಾಪ! ಮದಯಂತಿಕೆಗೆ ಇವೆಲ್ಲ ಹೇಗೆ ಅರ್ಥವಾಗಬೇಕು ? ಆಕೆಗೆ ಅಂಥ ಸಮಸ್ಯೆಯ ಪರಿಜ್ಞಾನ ವಿರಲಿಲ್ಲ. ಮಾಲತಿ ತನ್ನ ಅತ್ತಿಗೆಯಾಗುತ್ತಾಳೆ, ಇನ್ನಷ್ಟು ಗೆಳೆತನ ಬೆಳೆಯುತ್ತದೆ ಎಂದೇ ಆಕೆಯ ನಂಬಿಕೆ. "ಎಲ್ಲಾ ತಮ್ಮ ಆಶೀರ್ವಾದ" ಎಂದು ಕಾಮಂದಕಿಗೆ ವಂದಿಸಿ ಆಕೆ ಹೊರಟಳು. ಹೊರಡಬೇಕೆಂದರೂ ಆಕೆಯ ಕಾಲು ಅಲ್ಲಿಂದ ಮುನ್ನಡೆಯಲಾರದಾಗಿತ್ತು. ಕಾಲಿನ ಮೇಲೆ ಮನಸ್ಸು ಬಲವಾದ ಪ್ರತಿಬಂಧವನ್ನೇ ಹೇರಿತ್ತೆನ್ನಬಹುದು. ಆಕೆಗೆ ಮಕರಂದನನ್ನು ಇನ್ನೂ ನೋಡಬೇಕು ಎನಿಸುತ್ತಿತ್ತು. ಆತನು ಅಯಸ್ಕಾಂತದಂತೆ ಆಕೆಯನ್ನು ಸೆಳೆಯುತ್ತಿದ್ದನು. ಆದರೂ ಆಕೆ ಅಲ್ಲಿ ನಿಲ್ಲುವಂತಿಲ್ಲ. ಹೋಗಲು ಮನಸ್ಸಿಲ್ಲ. ಇನ್ನೊಮ್ಮೆ ಈತನು ಎಂದು ಕಾಣಸಿಗುವನೋ ಎನ್ನುತ್ತ ಆಕೆ ಮುಂದಡಿಯಿಡಲೇಬೇಕಾಯಿತು.

ಇನ್ನು ಇಲ್ಲಿ ಉಳಿದವರೆಲ್ಲಾ ಒಂದೇ ಆತ್ಮೀಯ ವರ್ತುಲಕ್ಕೆ ಸೇರಿದವರು. ಹೀಗಾಗಿ ಬಿಚ್ಚು ಮನಸ್ಸಿನಿಂದ ಚರ್ಚಿಸಲು ಬಹಳ ಅನುಕೂಲವೊದಗಿದಂತಾಯಿತು. ಕಾಮಂದಕಿ ಮಾಧವನೊಡನೆ ನೇರವಾಗಿ ಕೇಳಿದಳು.

"ಭೂರಿವಸು ಮಾಲತಿಯನ್ನು ತಾನಾಗಿಯೇ ನಿನಗೆ ವಿವಾಹ ಮಾಡಿಕೊಡುವುದು ಸಾಧ್ಯವೆ? ಏನೆಂದೆನಿಸುತ್ತಿದೆ ನಿನಗೆ?"

ಮಾಲತಿ ಮುಂದಿರುವಾಗ ಇದನ್ನುತ್ತರಿಸಲು ಮಾಧವನಿಗೆ ನಾಚಿಕೆಯಾಗಿರಬೇಕು. ಆಗ ಕಾಮಂದಕಿಯೇ ಹೇಳಿದಳು.

"ಆತನು ಹಿಂದೆ ತನ್ನ ಗೆಳೆಯನಿಗೆ ಕೊಟ್ಟ ಮಾತಿನಂತೆ ನಡೆಯ ಬೇಕಲ್ಲವೆ ?"

ಆಗ ಮಕರಂದನು "ಹಾಗಿದ್ದರೆ ರಾಜನಿಗೆ ಕೊಟ್ಟ ಮಾತು ತಪ್ಪುವು ದಿಲ್ಲವೆ ?" ಎಂದು ಕೇಳಿದನು.

"ಆದರೆ ಮಾತಿನ ಚಮತ್ಕಾರದಲ್ಲೇ ಎಲ್ಲಾ ಇದೆ. ರಾಜನಿಗೆ ಮಾಲ ತಿಯ ಬಗ್ಗೆ ಏನು ಹಕ್ಕಿದೆ ? ಭೂರಿವಸು ಹೇಳಿದುದು 'ತನ್ನ ಮಗಳನ್ನು ಕೊಡಲು ರಾಜನಿಗೆ ಅಧಿಕಾರವಿದೆ' ಎಂದಲ್ಲವೆ ? ಹೀಗಿರುವಾಗ ಭೂರಿವಸು ವಿನ ಮಗಳ ಮೇಲೆ ಆತನಿಗೆ ಅಧಿಕಾರವಿಲ್ಲ ಎಂಬುದು ಸಿದ್ಧವಾಗಲಿಲ್ಲವೆ ? ಮಾತಿನ ಚಮತ್ಕೃತಿಯಲ್ಲೇ ಎಲ್ಲಾ ಅಡಗಿದೆ. ವ್ಯವಹಾರವೆಂದರೆ ಇದೇ ಆಗಿದೆ."

ಕಾಮಂದಕಿಯ ಮಾತು ತರ್ಕ ಶುದ್ಧವಾಗಿತ್ತು. ಎಲ್ಲರಿಗೂ ಇದನ್ನು ಕೇಳಿ ಸಂತೋಷವಾಯಿತು. "ಆದರೆ ಇಷ್ಟರಿಂದಲೇ ಕೆಲಸ ಸಾಗಲಾರದು. ನಮ್ಮ ಯತ್ನವೂ ಮುಖ್ಯ" ಎಂದು ಕಾಮಂದಕಿ ಹೇಳಿದಾಗ ಎಲ್ಲರ ಮೊಗ ಗಳಲ್ಲೂ ಪ್ರಶ್ನಾರ್ಥಕ ಚಿಹ್ನೆ ಮೂಡಿತ್ತು.

ಹೀಗೆಯೇ ವಿಚಾರ ನಡೆಸುತ್ತ ಅವರು ಬಹಳ ಹೊತ್ತು ಅಲ್ಲೇ ಕುಳಿ ತರು. ತುಸು ವೇಳೆಯಲ್ಲಿ ಮಾಲತಿಯ ತಾಯಿ ಮಗಳಿಗೆ ಬರಲು ಹೇಳಿ ಕಳಿಸಿದಳು. ಆಗ ಕಾಮಂದಕಿ ಮಾಲತಿಯನ್ನು ಕರೆದುಕೊಂಡು ಹೊರಡ ಬೇಕಾಯಿತು. ಅವರು ಹೊರಟುಹೋದ ಮೇಲೆ ಮಾಧವನಿಗೆ ಇನ್ನಲ್ಲಿ ನಿಲ್ಲುವುದು ವ್ಯರ್ಥವೆಂದು ಕಂಡಿತು. ಮಾಲತಿಯೊಡನೆ ತಾನು ಹೆಚ್ಚು ವೇಳೆ ನಿಂತಿರುವುದೂ ದೈವಕ್ಕೆ ಇಷ್ಟವಿಲ್ಲವೇನೋ ಎನಿಸಿತು ಮಾಧವನಿಗೆ. ಕಾಮಂದಕಿಯೇನೋ ತನ್ನನ್ನು ಸಮಾಧಾನ ಪಡಿಸುವುದಕ್ಕಾಗಿ ಮಾತನಾಡು ತ್ತಿದ್ದಾಳೆ. ಸಾಕಷ್ಟು ಬುದ್ಧಿವಂತಿಕೆಯನ್ನೂ ಖರ್ಚು ಮಾಡುತ್ತಿದ್ದಾಳೆ. ಮಾಲತಿಗೂ ಪ್ರೇಮವಿದೆ. ಆದರೆ ರಾಜನಿಗೆ ವಿರೋಧವಾಗಿ ಮಾಲ ತಿಯನ್ನು ಪಡೆಯುವುದೆಂದರೆ ಬಿಸಿಲ್ಗುದುರೆಯ ಬೆನ್ನು ಹತ್ತಿದಂತೆಯೇ ಅಲ್ಲವೆ? ಈಗ ತಾನೇನು ಮಾಡಬೇಕು ? ಎಂಬುದೇ ಆತನಿಗೆ ತೋಚದಂತಾ ಯಿತು.

ತನ್ನಂತೆಯೇ ಗೆಳೆಯ ಮಕರಂದನ ಪರಿಸ್ಥಿತಿಯು ಆದುದು ಆತನಿಗೆ ತಿಳಿದುಬಂದಿದೆ. ಆದರೂ ತನ್ನಷ್ಟು ಮಕರಂದನ ಪರಿಸ್ಥಿತಿ ಪ್ರತಿಕೂಲವಾಗಿಲ್ಲವೆಂದು ಆತನು ಸಮಾಧಾನಪಟ್ಟುಕೊಂಡನು. ಹುಲಿ ಕೊಲ್ಲುವ ವೇಳೆಯುಲ್ಲಿ ಮಕರಂದನು ಬಂದು ಆಕೆಯನ್ನು ಕಾಪಾಡಿದುದು ಎಲ್ಲಾ ದೈವವಿಲಾಸವೆಂದೇ ಮಾಧವನಿಗೆ ಕಂಡಿತು. ತನಗೆ ಇಂಥ ಯೋಗವೂ ಬರಲಿಲ್ಲವೆಂದು ಆತನು ಬೇಸರಪಟ್ಟುಕೊಂಡನು. ಇಬ್ಬರೂ ತಂತಮ್ಮ ಸಮಸ್ಯೆಗಳನ್ನು ಚರ್ಚಿಸುತ್ತ ಹೊದೋಟದಿಂದ ತಮ್ಮ ವಸತಿಯೆಡೆಗೆ ಸಾಗಿದರು.

ಕಾಳಿಯ ಗುಡಿಯಲ್ಲಿ

ಇನ್ನು ತಾನೇನು ಮಾಡಬೇಕೆಂದು ಮಾಧವನಿಗೆ ತಿಳಿಯಲಿಲ್ಲ. ಹೀಗೆಯೇ ಯೋಚಿಸುತ್ತ ಆತ ಕುಳಿತುಕೊಂಡನು. ಅನ್ನ ನೀರುಗಳ ಚಿಂತೆಯೇ ಆತನಿಗೆ ಇರಲಿಲ್ಲ. ನಿದ್ರೆಯಂತೂ ಸರ್ವಥಾ ಬರಲೊಲ್ಲದು. ಯಾವ ಆಲೋಚನೆಯೂ ಆತನಿಗೆ ಹೊಳೆಯದು. ಲೌಕಿಕವಾದ ಯಾವ ಉಪಾಯವೂ ಬಗೆಹರಿಸುವ ಸಮಸ್ಯೆಯಿದಲ್ಲವೆಂದು ಆತನಿಗೆ ಕಂಡಿತು. ತಾನು ಓದಿದ ಆಗಮಶಾಸ್ತ್ರ ಕಾವ್ಯಗಳ ಕಡೆಗೆ ಆತನ ದೃಷ್ಟಿ ಹರಿಯಿತು. ಹಾಗೆಯೇ ವಿಚಾರಿಸುತ್ತಿದ್ದಂತೆ ಥಟ್ಟನೆ ಒಂದು ಯೋಚನೆ ಹೊಳೆಯಿತು.

ಬಾಹ್ಯಾಗಮದಲ್ಲಿ ಮಹಾಮಾಂಸವಿಕ್ರಯವೆಂಬ ಒಂದು ಉಪಾಯವು ಹೇಳಿರುವುದಾಗಿ ಆತನಿಗೆ ತಿಳಿಯಿತು. ತನ್ನ ಇಷ್ಟಾರ್ಥ ಸಿದ್ಧಿಯಾಗದ ವೇಳೆಯಲ್ಲಿ, ಇತರ ಯಾವ ಉಪಾಯವೂ ಫಲಿಸದಿದ್ದಾಗ ಮಹಾಮಾಂಸ ವಿಕ್ರಯ ಮಾಡಿದರೆ ಕೆಲಸವು ಸಿದ್ಧಿಸುತ್ತದೆಯೆಂದು ಅದರಲ್ಲಿ ಹೇಳಿದೆ. ಹಿಂದೆ ಅನೇಕ ಮಹನೀಯರೂ ಇದನ್ನು ಮಾಡಿದ ನಿದರ್ಶನಗಳು ಆತನಿಗೆ ಕಂಡು ಬಂದುವು.

ಹಾಗೆಯೇ ಆತನು ಅದರ ವಿಧಿಯನ್ನೂ ಚೆನ್ನಾಗಿ ವಿಚಾರಿಸಿಕೊಂಡನು. ಶಸ್ತ್ರದ ಗಾಯವಾಗಬಾರದು, ಅಂಥ ಮಾಂಸವನ್ನು ರೋಗಾದಿಗಳಿಲ್ಲದ ತನ್ನ ಶರೀರದಿಂದಲೇ ತಯಾರಿಸಿ ವಿಕ್ರಯಿಸಬೇಕು ಎಂದು ಮಹಾಮಾಂಸ ವಿಕ್ರಯದಲ್ಲಿರುವ ವಿಧಾನ. ಇದನ್ನೇ ಮಾಡಬೇಕೆಂದು ಆತನು ನಿರ್ಧರಿಸಿದನು.

ಊರಹೊರಗಿನ ಸ್ಮಶಾನವಾಟವೆಂದರೆ ಯಾರೂ ತಪ್ಪಿಯೂ ಅಲ್ಲಿಗೆ ಕಾಲಿಡುವಂತಿರಲಿಲ್ಲ. ಒಬ್ಬೊಬ್ಬರೇ ಅಲ್ಲಿಗೆ ಹೋದರೆ ಅಲ್ಲಿಂದ ಹಿಂದೆ ಬರುವ ಆಶೆಯಿರಲಿಲ್ಲ. ಪ್ರತಿದಿನವೂ ಅಲ್ಲಿ ಚಿತೆಗಳು ಉರಿಯುತ್ತಲೇ ಇರುತ್ತವೆ. ಭೂತಪ್ರೇತಪಿಶಾಚಗಳೆಲ್ಲಾ ವಿಕಟಾಟ್ಟಹಾಸದಿಂದ ನಲಿಯುತ್ತಿವೆಯೆಂದು ಯಾರೂ ಆಕಡೆಗೆ ಹೋಗುತ್ತಿರಲಿಲ್ಲ.

ಸ್ಮಶಾನದ ಬಳಿಯಲ್ಲಿ ಒಂದು ಕಾಳಿಯ ಗುಡಿ. ರಕ್ತಮಾಂಸಗಳಿಂದ

ಕಾಳಿಯ ಭಕ್ತರು ಆಕೆಯನ್ನು ತೃಪ್ತಿಪಡಿಸುವುದಾಗಿಯೂ, ಆಕೆಗೆ ಮನುಷ್ಯರ ಬಲಿಯ ಮೇಲೆಯೇ ಹೆಚ್ಚಿನ ಪ್ರೀತಿಯಿದೆಯೆಂದೂ ಜನರು ಹೇಳುವುದನ್ನು ಕೇಳಿದ ಮೇಲಂತೂ ಸ್ಮಶಾನದ ಕಡೆಗೆ ಕನಸಿನಲ್ಲಿಯೂ ಯಾರೂ ತಲೆ ಹಾಕಿ ಮಲಗುತ್ತಿರಲಿಲ್ಲ.

ಅಲ್ಲಿ ಅಘೋರಘಂಟನೆಂಬ ಕಾಪಾಲಿಕನೊಬ್ಬನು ಕಾಳಿಯ ಸವಿಶೇಷ ಆರಾಧನೆಗೆ ತೊಡಗಿದ್ದನು. ಆತನಿಗೆ ಸಾಕಷ್ಟು ಶಿಷ್ಯರೂ ಇದ್ದರು. ಭಯಂಕರವೂ ತಾಮಸವೂ ಆದ ಮಂತ್ರಶಕ್ತಿಯಿಂದ ಆತನು ಕಾಳಿಯ ಸಿದ್ಧಿಯನ್ನು ಮಾಡಿಕೊಂಡಿದ್ದನು. ತನ್ನ ಆರಾಧ್ಯ ದೈವಕ್ಕೆ ಒಂದು ನರಬಲಿಯನ್ನು ಕೊಟ್ಟು ತೃಪ್ತಿಪಡಿಸಬೇಕೆಂದು ಬಗೆದು ಆತನು ತನ್ನ ಶಿಷ್ಯೆಯಾದ ಕಪಾಲ-ಕುಂಡಲೆಯನ್ನು ಕರೆದು ಹೇಳಿದ್ದನು.

"ಮಗಳೆ, ಇದೇ ಬಳಿಯ ನಗರದಲ್ಲಿರುವ ಒಂದು ಸ್ತ್ರೀರತ್ನವನ್ನು ಕಾಳಿಗೆ ಅರ್ಪಿಸಲು ತರಬೇಕು"ಎಂದು. ಗುರುವಿನ ಆಜ್ಞೆಯನ್ನು ಶಿರಸಾವಹಿಸಿ ಕಪಾಲಕುಂಡಲೆ ಮಂತ್ರಸಿದ್ಧಿಯ ಪ್ರಭಾವದಿಂದ ವಾಯುವೇಗದಿಂದ ಆಕಾಶ ಮಾರ್ಗವಾಗಿ ನಗರಕ್ಕೆ ಹೋದಳು.

ಶಂಕರಪುರದಿಂದ ಮನೆಗೆ ಬಂದೊಡನೆಯೇ ಮಾಲತಿ ಲವಂಗಿಕೆಯೊಂದಿಗೆ ಸೌಧವನ್ನೇರಿ ಕುಳಿತುಬಿಟ್ಟಳು. ಆಕೆಗೆ ಊಟ ಉಪಚಾರವೊಂದೂ ಬೇಕಾಗಿರಲಿಲ್ಲ. ತಾಯಿ ಮೂರು ಮೂರು ಬಾರಿ ಬಂದು ಹೇಳಿಹೋದುದರಿಂದ ಆಕೆಯ ಕಣ್ಣುಕಟ್ಟುವ ಸಲುವಾಗಿ ಆಕೆ ಊಟದ ಶಾಸ್ತ್ರ ಮುಗಿಸಿದಳು. ಪುನಃ ಬಂದು ಶಯ್ಯಾಗೃಹದಲ್ಲಿ ಬಿದ್ದುಕೊಂಡಳು.

ಆಕೆಗೆ ಯಾರೊಡನೆಯೂ ಮಾತನಾಡುವ ಬಯಕೆಯಿರಲಿಲ್ಲ. ಆಕೆಗೆ ಒಂದೆಡೆಯಿಂದ ಮಾಧವನ ಸುಂದರ ಸ್ವರೂಪವು ಗೋಚರಿಸಿ ಕಣ್ಮನಸ್ಸುಗಳಿಗೆ ಶಾಂತಿ ಸಮಾಧಾನಗಳನ್ನುಂಟು ಮಾಡಿದರೆ, ಇನ್ನೊಂದೆಡೆಯಿಂದ ಅಮಾತ್ಯನಂದನನ ವಿಕರಾಳ ಸ್ವರೂಪವು ಪಿಶಾಚದಂತೆ ಆಕೆಯ ಮುಂದೆ ಕರಾಳ ತಾಂಡವಕ್ಕೆ ತೊಡಗುತ್ತಿತ್ತು. ಹೀಗೆಯೇ ಒಮ್ಮೆ ಚೀರುತ್ತಲಿದ್ದಳು; ಮತ್ತೊಮ್ಮೆ ಹುಚ್ಚುಹುಚ್ಚಾಗಿ ನಗುತ್ತಲಿದ್ದಳು. ತುಸು ಹೊತ್ತು ಮಾಧವನನ್ನು ಹೇಗೆ ಸೇರಲಿ ಎಂದು ಚಿಂತಿಸಿ ಆತನ ಸಮಾಗಮದ ರಸನಿಮಿಷಗಳನ್ನು ಆಸ್ವಾದಿಸುತ್ತಿದ್ದಳು. ಏನು ಮಾಡಿದರೂ ಆಕೆಯ ಕಣ್ಣಿಗೆ ನಿದ್ದೆ ಹತ್ತ

ವಂತಿರಲಿಲ್ಲ.

ಮಾಲತಿಯನ್ನೇ ಆಹುತಿ ಕೊಡಲು ಗುರು ನಿರ್ಣಯಿಸಿರುವುದಾಗ ಕಪಾಲಕುಂಡಲೆಗೆ ತಿಳಿದಿತ್ತು. ಆಕೆ ನೇರವಾಗಿ ಅಮಾತ್ಯ ಭೂರಿವಸುವಿನ ಸೌಧದ ಮೇಲೆ ಬಂದು ನೋಡಿದಾಗ ಮಾಲತಿ ನಿದ್ರಿಸಿರಲಿಲ್ಲ. ಒಮ್ಮೆ ಆ ಪಕ್ಕಕ್ಕೆ ಇನ್ನೊಮ್ಮೆ ಈ ಪಕ್ಕಕ್ಕೆ ಆಕೆ ಹೊರಳಾಡುತ್ತಿದ್ದಳು. ಕಪಾಲಕುಂಡಲೆ ಆಕೆಗೆ ನಿದ್ರೆ ಬರುವುದನ್ನೇ ಕಾದು ಕುಳಿತಳು. ಬಹಳ ಹೊತ್ತು ಹಾಗೆಯೇ ಇದ್ದಳು.

ಬಹಳ ರಾತ್ರಿ ಕಳೆದ ಮೇಲೆ ಮಾಲತಿಗೆ ತುಸು ಜೊಂಪು ಹತ್ತಿದಂತಾಯಿತು ಕೂಡಲೇ ಆಕೆಯನ್ನೆತ್ತಿಕೊಂಡು ಕಪಾಲಕುಂಡಲೆ ನೇರವಾಗಿ ತನ್ನ ಗುರುವಿನ ಬಳಿಗೆ ಬಂದಿಳಿದು ಕೈಮುಗಿದು ನಿಂತುಕೊಂಡಳು.

ಮಾಲತಿಗೆ ಎಚ್ಚರವಾಗಿ ಕಣ್ತೆರೆದಾಗ • ಇದು ತಾನು ನಿದ್ರಿಸಿದ ಶಯ್ಯಾಗೃಹವಲ್ಲವೆಂದು ತತ್‌ಕ್ಷಣ ಹೊಳೆಯಿತು. ಗೋಡೆಯಲ್ಲಿ ತೂಗ ಹಾಕಿದ ಮಾಧವನ ಚಿತ್ರದ ಬದಲಾಗಿ ಕಾಳಿಯ ಮೂರ್ತಿ ಆಕೆಯ ಮುಂದಿತ್ತು. ಗೆಳತಿ ಲವಂಗಿಕೆಯ ಬದಲು ವಿಕಾರಸ್ವರೂಪದ ಕ್ರೂರಳಾದ ಕಪಾಲಕುಂಡಲೆ ನಿಂತಿದ್ದಳು. ಅಘೋರಘಂಟನು ಪೂಜೆಯ ವಿಧಾನವನ್ನೆಲ್ಲಾ ಪೂರೈಸಿಕೊಂಡು ಬಲಿ ಕೊಡಲು ಸಿದ್ಧತೆ ನಡೆಸುತ್ತಿದ್ದನು. ಆಕೆಯ ಶರೀರದ ಮೇಲೆ ವಧ್ಯಚಿಹ್ನವಾದ ಮಾಲೆ ಗಂಧಾಕ್ಷತೆಗಳನ್ನು ಹಾಕಲಾಗಿತ್ತು. ಮಾಲತಿ ಇದ್ದಕ್ಕಿದ್ದಂತೆಯೇ ಹೃದಯ ಬಿರಿಯುವಂತೆ ಚೀರಿಕೊಂಡಳು. ಆಕೆಗೆ ಎಲ್ಲವೂ ಕೂಡಲೇ ತಿಳಿದುಹೋಯಿತು.

ಎಷ್ಟು ಚೀರಿದರೇನು? ಏನು ಹೇಳಿದರೇನು? ಇಲ್ಲಿಗೆ ಬರುವವರೊಬ್ಬರೂ ಇಲ್ಲ. ಆದರೂ ಆಕೆ 'ಮಾಧವ' 'ಮಾಧವ' ಎನ್ನುತ್ತಿದ್ದಳು. ಕಪಾಲಕುಂಡಲೆಗೆ ಮಾಲತಿಯ ಪರಿಚಯವಿತ್ತು. ಆಕೆಯ ಬಾಯಿಂದ ಮಾಧವನ ಹೆಸರನ್ನು ಕೇಳಿದ್ದಳು. 'ಆ ಮಾಧವನೇ ಇರಬೇಕು' ಎಂದು ಕಪಾಲಕುಂಡಲೆ ತರ್ಕಿಸಿಕೊಂಡಳು. ಯಾರಾದರೇನು ಆಕೆಗೆ? ತನ್ನ ಗುರುವಿನ ಪೂಜೆ ಸಾಂಗವಾಗಿ ನೆರವೇರಬೇಕು, ಕಾಳಿಗೆ ತೃಪ್ತಿಯಾಗಬೇಕು, ಇಷ್ಟೇ ಅವಳ ಗುರಿ. ಇತರರ ಸುಖ-ದುಃಖಗಳ ಗೊಡವೆ ಅವಳಿಗೆಲ್ಲಿ ಬರಬೇಕು?

ಮಾಲತಿ ಅತ್ತ ಇತ್ತ ನೋಡತೊಡಗಿದಳು. ಶಕ್ತಿಯನ್ನೆಲ್ಲಾ ಉಪಯೋಗಿಸಿ ಗಟ್ಟಿಯಾಗಿ ಮತ್ತೊಮ್ಮೆ ಚೀರಿಕೊಂಡಳು. "ಮಾಧವ! ಒಂದು ಅರೆನಿಮಿಷವಾದರೂ ವಿಧಿ ನಮ್ಮನ್ನು ಜೊತೆಯಾಗಿ ಇರಗೊಡಲಿಲ್ಲ. ನಾನು ಸತ್ತರೂ ನೀನು ನನ್ನನ್ನು ಸ್ಮರಿಸಿದರೆ ಸಾಕು. ನನಗೆ ಇನ್ನೇನೂ ಬಯಕೆಯಿಲ್ಲ" ಎಂದಳು ಮಾಲತಿ. ಗುರು-ಶಿಷ್ಯೆಯರು ಮಾಲತಿಯ ಬಯಕೆಯನ್ನು ಕೇಳಿ ನಕ್ಕರು. ಪೂಜೆ ಸಾಗಿತು. ಘಂಟಾನಾದವೂ ಆಯಿತು. ಅಘೋರಘಂಟನು ಬಲಿಯನ್ನರ್ಪಿಸುವ ವಿಧಾನಗಳನ್ನು ಕ್ರಮವತ್ತಾಗಿ ಪೂರೈಸಿಕೊಂಡನು.

ಮಹಾಮಾಂಸ ವಿಕ್ರಯ ಮಾಡಲು ಸ್ಮಶಾನವೇ ಯೋಗ್ಯ ಪ್ರದೇಶವೆಂದು ತಿಳಿದು ಮಾಧವನು ಅಲ್ಲಿಗೆ ಬಂದಿದ್ದನು. ಆತನಿಗೆ ಆರ್ತಧ್ವನಿಯೊಂದು ಕೇಳಿತು. ಇಂಥ ಘಟನೆಗಳು ಇಲ್ಲಿ ಎಷ್ಟೊ ಜರಗುತ್ತಿವೆಯೆಂದು ಆತನು ತಿಳಿದಿದ್ದನು. ಆದರೆ ಬೆದರಿದ ಹುಲ್ಲೆಯಂತೆ ಕೂಗುತ್ತಿರುವ ಸದ್ದು ಇದು ಎಂದು ತಿಳಿದು ಆತನ ಹೃದಯವು ಕರಗಿತು. ಮತ್ತೂ ವಿಚಾರಿಸಿದಾಗ ಹೆಣ್ಣುದನಿ ಎಂದು ಕಂಡುಕೊಂಡನು. ಅದೂ ನಿಕಟ ಪರಿಚಯದ್ದೇ ಎಂದು ತಿಳಿದಾಗ ಆತನಿಗೆ ಮತ್ತಷ್ಟು ಕಳವಳ ಉದ್ವೇಗಗಳು ಉಂಟಾದುವು. ಅಂತೂ ಈ ಕೂಗು ಯಾವ ಕಡೆಯಿಂದ ಕೇಳಿಸುತ್ತಿದೆ ಎಂದು ಆತ ಗಮನ ಹರಿಸಿದನು. ಶ್ಮಶಾನದ ಬಳಿಯ ಕಾಳಿಯ ಗುಡಿಯ ಕಡೆಯಿಂದ ಚೀರುವಿಕೆ ಕೇಳಿ ಬರುತ್ತಿತ್ತು. ಸರಿ. ಇದು ಅಂತಹದ್ದೇ ಪ್ರದೇಶವೆಂದು ಆತನು ನಿರ್ಣಯಿಸಿ ಯಾರೇ ಇರಲಿ, ಏನೇ ಇರಲಿ, ಹೋಗಿ ಪರಿಶೀಲಿಸಲೇ ಬೇಕು ಎಂದು ಧಾವಿಸಿದನು.

ಕಾಳಿಯ ಗುಡಿಯ ಮುಂದೆ ಬಂದು ನೋಡಿದಾಗ ತನ್ನ ಕಣ್ಣಿನ ಬಗ್ಗೆ ಆತನಿಗೆ ವಿಶ್ವಾಸ ಹುಟ್ಟಲಿಲ್ಲ. ಹೃದಯವು ಥರಥರ ನಡುಗತೊಡಗಿತು. ತನ್ನ ಹೃದಯದ ಆರಾಧ್ಯ ದೇವತೆಯೇ ಆತನಿಗೆ ಕಾಣಿಸಬೇಕೆ? ಯಾರಿಗಾಗಿ ಮಹಾಮಾಂಸ ವಿಕ್ರಯದಂಥ ಸಾಹಸಕ್ಕೆ ಆತನೆಳಸಿದ್ದನೋ? ಅವಳೇ ಇಲ್ಲಿ ಇಂಥ ಪರಿಸ್ಥಿತಿಗೊಳಗಾಗಬೇಕೆ? ಕ್ರೂರ ಪಾಖಂಡನು ಕಾಳಿಗೆ ಆಕೆಯನ್ನು ಬಲಿ ಕೊಡಲು ನಿರ್ದಯನಾಗಿ ಖಡ್ಗವೆತ್ತಿ ನಿಂತಿದ್ದಾನೆ. ಏನಿದು ವಿಪರೀತ! ದೇವರಿಗೆ ಮನುಷ್ಯಬಲಿ-ಅದೂ ಮಾನವನೇ ಕೊಡುವುದು!

ಮಾಧವನಿಗೆ ಭಕ್ತಿಯ ಹೆಸರಿನಲ್ಲಿ ನಡೆಸುವ ಅತ್ಯಾಚಾರ-ಅನಾಚಾರಗಳನ್ನು ಸಹಿಸಲಾಗಲಿಲ್ಲ.

ಅಮಾತ್ಯ ಭೂರಿವಸುವಿನ ಮಗಳಿಗೆ ಇಂತಹ ಗತಿ ಬಂದಿತಲ್ಲ ಎಂದು ಆತನ ಹೃದಯವು ಮಮ್ಮಲ ಮರುಗಿತು.

ಅಂತೂ ದೈವವೇ ತನ್ನನ್ನು ಇಲ್ಲಿಗೆ ಕರೆದು ತಂದಿರಬೇಕು ಎಂದು ಮಾಧವನು ಗ್ರಹಿಸಿದನು. ಇಲ್ಲವಾದರೆ ತಾನು ನಿಜವಾಗಿಯೂ ಮಾಲತಿಯನ್ನು ಕಳೆದುಕೊಳ್ಳಬೇಕಾಗುತ್ತಿತ್ತು ಎಂದು ಆತನಿಗೆ ಹೊಳೆಯಿತು. ಮಹಾಮಾಂಸ ವಿಕ್ರಯದಂಥ ಸಾಹಸ ಮಾಡಿಯೂ, ಮಾಲತಿಯನ್ನು ಕಳೆದುಕೊಂಡರೆ ತಾನು ಎಷ್ಟು ನಿರಾಶೆ ಪಡಬೇಕಾಗಿತ್ತು ಎಂದೆನಿಸಿತು ಆತನಿಗೆ. ತಾನು ಬದುಕುವಂತಿರಲಿಲ್ಲವೆಂದೂ ಭಾವಿಸಿಕೊಂಡನು. ಇದೇ ಸಂದರ್ಭಕ್ಕೆ ಸರಿಯಾಗಿ ತನ್ನನ್ನು ಇಲ್ಲಿಗೆ ಎಳೆದು ತಂದುದಕ್ಕಾಗಿ ಆತನು ದೈವವನ್ನು ಮನಸಾರೆ ಅಭಿನಂದಿಸಿ ಮಾಲತಿಯ ರಕ್ಷಣೆಗೆ ಮುಂದುವರಿದನು.

ಅಘೋರಘಂಟ–ಕಪಾಲಕುಂಡಲೆಯರು ಕಾಳಿಯನ್ನು ಮತ್ತೊಮ್ಮೆ ಪ್ರಾರ್ಥಿಸಿಕೊಂಡರು. ತಮ್ಮ ಈ ಅತ್ಯುತ್ತಮ ಬಲಿ ಕಾಣಿಕೆಯಿಂದ ಕಾಳಿ ತುಷ್ಟಳಾಗಿ ಮಂತ್ರಸಿದ್ಧಿಯ ಅನುಗ್ರಹವಾಗಬೇಕೆಂದು ಬೇಡಿಕೊಂಡರು. ನಿಶಿತವಾದ ಖಡ್ಗವನ್ನು ಕಪಾಲಕುಂಡಲೆ ಸಿದ್ಧಪಡಿಸಿಟ್ಟಿದ್ದಳು. ಅಘೋರಘಂಟನು ಅದನ್ನು ಮೇಲಕ್ಕೆತ್ತಿಕೊಂಡು ದೇವಿಗೂ ಖಡ್ಗಕ್ಕೂ ನಮಸ್ಕರಿಸಿ ಮಾಲತಿಯ ಕುತ್ತಿಗೆಗೆ ಸರಿಯಾಗಿ ತಂದನು.

ಇನ್ನೇನು? ಒಂದೇ ಪೆಟ್ಟಿನಲ್ಲಿ ತುಂಡೆರಡು ಎಂಬ ಪರಿಸ್ಥಿತಿ. ಕಾಳಿಯ ಅನುಗ್ರಹಕ್ಕಿನ್ನು ವಿಳಂಬವಿಲ್ಲವೆಂದು ಗುರು–ಶಿಷ್ಯೆಯರು ಬಲವಾಗಿ ನಂಬಿದ್ದರು. ಮಾಲತಿ ಮಾಧವನನ್ನೇ ಜಪಿಸುತ್ತ ಇಹವನ್ನು ಸಂಪೂರ್ಣ ಬಿಡಲು ಸಿದ್ಧಳಾಗುತ್ತಿದ್ದಳು. ಅಷ್ಟರಲ್ಲಿ ಇದ್ದಕ್ಕಿದ್ದಂತೆಯೇ ಅಘೋರಘಂಟನ ಕೈ–ಯನ್ನು ತಡೆದು ಖಡ್ಗವನ್ನೆಳೆದು ಮಾಧವನು ಎದುರಾಗಿ ನಿಂತನು.

ಅಘೋರಘಂಟನಿಗೆ ಆಶ್ಚರ್ಯವಾಯಿತು. ಇದೇನು? ಈತನಕ ಇಂಥ ಪ್ರದೇಶಕ್ಕೆ ಬಂದ ಎದೆಗಾರಿಕೆಯವರು ಆದಾರೂ ಇಲ್ಲ. ಈ ಹೊತ್ತಿಗೆ ಇವನೆಲ್ಲಿಂದ ಬಂದನು? ಯಾರೇ ಆಗಲಿ, ಏನೇ ಆಗಲಿ. ತನ್ನ ಕಾರ್ಯಕ್ಕೆ ವಿರೋಧಿಯಾಗಿ ಬಂದುದರಿಂದ ಸುಮ್ಮನೆ ಈತನನ್ನು ಬಿಡುವಂತಿಲ್ಲವೆಂದು

ನಿರ್ಣಯಿಸಿ "ಈತನಾರು ?" ಎಂದು ಶಿಷ್ಯೆಯಲ್ಲಿ ಕೇಳಿದ.

"ಈತನೇ ಮಾಧವ" ಎಂದಳು ಕಪಾಲಕುಂಡಲೆ.

ಮಾಧವನನ್ನು ನೋಡಿದ ಮಾಲತಿಗೆ ಹೋದ ಜೀವವೇ ಮರಳಿ ಬಂದಂತಾಯಿತು. ತಾನು ಜಪಿಸಿದ್ದಕ್ಕೆ ಪ್ರತ್ಯಕ್ಷನಾದ ದೇವರೇ ಈತನೆಂದು ಆಕೆ ತಿಳಿದಳು. ಸಂತೋಷವು ಆಕೆಯಲ್ಲಿ ತುಂಬಿ ಮಾಧವನನ್ನು ಗಟ್ಟಿಯಾಗಿ ಅಪ್ಪಿಕೊಂಡಳು.

ಮಾಧವನಿಗೆ ಇದು ಹೊಚ್ಚ ಹೊಸ ಅನುಭವ. ಆತನು ಬಹು ದಿನಗಳಿಂದ ಬಯಸುತ್ತಿದ್ದುದೇ ಆತನಿಗೆ ಇಂದು ಲಭಿಸಿದಂತಾಯಿತು. ಹೆದರಿಕೆಯೊಂದಿಗೆ ಪ್ರೇಮವೂ ಸೇರಿದ ಆಲಿಂಗನವು ಅದೆಷ್ಟು ಮನೋಹರವಾಗಿರಬಹುದೋ ಅಷ್ಟು ಶ್ರೇಷ್ಠವಾಗಿತ್ತು ಮಾಧವನಿಗೆ ಆ ಆಲಿಂಗನ! ಅವನು ಆಕೆಯನ್ನು ನೇವರಿಸಿ ಸಮಾಧಾನ ಹೇಳಿದನು.

"ಈಹೊತ್ತಿಗೆ ನೀವೆಲ್ಲಿಂದ ಬಂದಿರಿ ?" ಮಾಲತಿ ಪ್ರೇಮದಿಂದ ತೆಕ್ಕೆಬಿದ್ದು ಕೇಳಿದಳು.

"ನಾನು ನಿನ್ನನ್ನು ಪಡೆಯಲೆಂದು ಬೇರೆ ಉಪಾಯಗಾಣದೆ ಮಹಾಮಾಂಸ ವಿಕ್ರಯಕ್ಕಾಗಿ ಶ್ಮಶಾನಕ್ಕೆ ಬಂದಾಗ ನಿನ್ನ ಕೂಗು ಕೇಳಿ ಓಡಿಬಂದೆ" ಎಂದಾಗ ಆಕೆಗೆಷ್ಟು ಸಮಾಧಾನ ಆನಂದಗಳಾದುವೋ ಹೇಳಲು ಬರುವಂತಿಲ್ಲ. ತನಗಾಗಿಯೇ ಈತನೂ ಇಷ್ಟೊಂದು ಶ್ರಮ ವಹಿಸುವನಲ್ಲ ಎಂದು ತಿಳಿದು ಆಕೆಯ ಹೃದಯವು ತುಂಬಿಬಂದಿತು.

ಅಘೋರಘಂಟನು ಇದನ್ನೆಲ್ಲ ಕೇಳಿ ಸಿಟ್ಟಿನಿಂದ ಕಿಡಿಕಿಡಿಯಾದನು. "ಏನಿದು, ಹುಡುಗಾಟಿಕೆ ? ತನ್ನ ಉದ್ದೇಶವನ್ನು ಭಂಗಗೊಳಿಸಿ ಈ ಬಗೆಯ ಚೇಷ್ಟೆಯೇನು ?" ಎಂದು ಆತನು ಮಾಧವನನ್ನು ಮೂದಲಿಸಿದನು. ಕಂಗಳಿಂದ ಕಿಡಿಕಾರಿ ಮತ್ತೂ ಹೇಳಿದ. "ನಾನು ಕನ್ಯಾರತ್ನವನ್ನು ದೇವಿಗೆ ಬಲಿಕೊಡತೊಡಗಿದಾಗ ನೀನೇಕೆ ವಿಘ್ನವಾಗಿ ಬಂದೆ ? ಮೊದಲು ನಿನ್ನನ್ನೇ ಬಲಿಕೊಟ್ಟು ಆಮೇಲೆ ಈಕೆಯನ್ನು ಕೊಡುತ್ತೇನೆ. ದೇವಿಗೆ ಇಮ್ಮಡಿ ತೃಪ್ತಿಯಾಗಲಿ."

"ಮೂರ್ಖ ! ಈಕೆಯನ್ನು ಕೊಂದು ನೀನು ಸಂಸಾರವನ್ನು ನಿಸ್ಸಾರವನ್ನಾಗಿಯೂ, ಜಗತ್ತನ್ನು ರತ್ನಶೂನ್ಯವನ್ನಾಗಿಯೂ, ಬೆಳಕಿಲ್ಲದಂತೆಯೂ, ಬಂಧು

ಗಳಿಗೆ ಜೀವವುಳಿಯುವಂತೆಯೂ, ಮನ್ಮಥನ ದರ್ಪ ಮುರಿಯುವಂತೆಯೂ, ಜನರ ಕಣ್ಣನ್ನು ನಿಷ್ಫಲವನ್ನಾಗಿಯೂ, ಲೋಕವನ್ನು ಮರಳುಕಾಡಿನಂತೆಯೂ ಮಾಡಬಯಸಿರುವೆ. ನಿನ್ನ ಅನ್ಯಾಯಕ್ಕೆ ತಕ್ಕ ಶಾಸ್ತಿಯೆಂದರೆ ನಿನ್ನ ಸಂಹಾರವೇ ! ನಿಲ್ಲು ಮುಂದೆ."

ಇಬ್ಬರಲ್ಲೂ ಮಾತಿಗೆ ಮಾತು ಬೆಳೆದು ಕೈಗೆಕ್ಕೈ ಹತ್ತಿತು. ಮಾಲತಿ ಮಾಧವನನ್ನು ನೋಡಿಕೊಂಡು ಹೆದರಿ ಕೂಗಿದಳು. ಮಾಧವನು ಆಕೆಗೆ ಧೈರ್ಯ ಹೇಳಿದನು.

ಇಷ್ಟುಹೊತ್ತಿಗೆ ಸರಿಯಾಗಿ ಮಾಲತಿ ಕಾಣೆಯಾಗಿದ್ದಾಳೆ ಎಂಬ ಸುದ್ದಿ ಊರಿಡೀ ಹರಡಿ ಜನರು ಅಲ್ಲಲ್ಲಿ ಹುಡುಕತೊಡಗಿದ್ದರು. ಕಾಮಂದಕಿಯ ಹೇಳಿಕೆಯ ಮೇರೆಗೆ ಭಟರು ಬಂದು ಕಾಳಿಯ ಗುಡಿಯನ್ನು ಮುತ್ತಿಬಿಟ್ಟರು. ಒಳಗೆ ಬಂದು ನೋಡುವಾಗ ಮಾಲತಿ ವಿಹ್ವಲೆಯಾಗಿ ನಿಂತಿದ್ದಾಳೆ. ಮಾಧವ ಅಘೋರಘಂಟರಲ್ಲಿ ಸಂಗ್ರಾಮವು ಪ್ರಾರಂಭವಾಗಿದೆ.

ಕೂಡಲೇ ಮಾಧವನು ಮಾಲತಿಯನ್ನು ಹಿರಿಯರ ಬಳಿಗೆ ಕಳಿಸಿ ಅಘೋರಘಂಟನೊಡನೆ ಹೋರಾಟಕ್ಕೆ ನಿಂತನು. ಬಹಳ ಹೊತ್ತಿನ ತನಕ ಕಾದಾಟವಾಗಿ ಮಾಧವನು ಆತನನ್ನು ನೆಲಕ್ಕುರುಗಿಸಿ ಕೊಂದು ಹೋಗಿಬಿಟ್ಟನು.

ಕಪಾಲಕುಂಡಲೆ ತನ್ನ ಗುರು ತೀರಿಕೊಂಡುದನ್ನು ನೋಡಿ ಅತ್ತು ಹೊರಳಾಡಿ ಕಣ್ಣೀರು ಕರೆದಳು. ಆದರೇನು, ಹೋದ ಜೀವ ಪುನಃ ಬರುವುದೆ? ಆದರೆ, ಗುರುವನ್ನು ಕೊಂದವನನ್ನು ಹೀಗೆಯೇ ಬಿಡುವುದು ತನ್ನ ಗುರುಭಕ್ತಿಯ ಲಕ್ಷಣವಲ್ಲ ಎಂದು ತಿಳಿದು ಆಕೆ ಪ್ರತೀಕಾರ ಮಾಡಿ ತೃಪ್ತಿಪಡಬಯಸಿದಳು. 'ಹೆಡೆ ಮೆಟ್ಟಿದ ಹಾವು ಸುಮ್ಮನೆ ಬಿಡುವುದುಂಟೆ? ಅಂತೆಯೇ ತಾನೂ ಬಿಡಬಾರದು' ಎಂದು ಆಕೆ ಪ್ರತಿಜ್ಞೆ ಮಾಡಿಕೊಂಡಳು.

ವಿವಾಹಸಮಾರಂಭ

ಮಾಲತಿಗೆ ನಂದನನೊಡನೆ ವಿವಾಹವೆಂದು ನಿರ್ಣಯವಾಗಿ ಹೋಯಿತು. ಅಮಾತ್ಯ ಭೂರಿವಸುವಿನ ಮಗಳನ್ನು ರಾಜನ ನರ್ಮಸಚಿವ ನಂದನನಿಗೆ ಕೊಡುವ ಸಮಾರಂಭ. ಇಕ್ಕಡೆಗಳಲ್ಲೂ ರಾಜನವೇ ಸರ್ವಾಧಿಕಾರ. ಆತನದೇ ಮಾರ್ಗದರ್ಶನ.

ನಂದನನು ಮದುವಣಿಗನಾಗಿ ಬೆಳಗಿನಿಂದಲೇ ಅಲಂಕಾರಕ್ಕೆ ಕುಳಿತಿದ್ದಾನೆ. ದಿಬ್ಬಣ ಹೊರಡುವ ವಿಜೃಂಭಣೆ ಪ್ರಾರಂಭವಾಗಿದೆ. ಕೊಂಬು ಕಹಳೆಗಳು ಮೊಳಗತೊಡಗಿವೆ. ಜನರ ಗಜಿಬಿಜಿ ನಡೆಯುತ್ತಿದೆ. ಹೆಂಗುಸರೆಲ್ಲ ತಮ್ಮ ಶೃಂಗಾರ ಮುಗಿಸಿ ಸಿದ್ಧರಾದರೂ ಮದುಮಗ ನಂದನನ ಅಲಂಕಾರವು ಮುಗಿಯದುದರಿಂದ ಜನರೆಲ್ಲರೂ ಕಾದು ನಿಂತಿದ್ದಾರೆ. ಆತನಿಗೆ ಕನ್ನಡಿಯನ್ನೆಷ್ಟು ಬಾರಿ ನೋಡಿದರೂ ತೃಪ್ತಿಯಿಲ್ಲ. ಬಟ್ಟೆಯನ್ನೆಷ್ಟು ಚೆನ್ನಾಗಿ ತೊಟ್ಟರೂ ಮತ್ತೂ ಮತ್ತೂ ಸರಿಪಡಿಸಿಕೊಳ್ಳಬೇಕು. ಅಂತೂ ಆತನದೇ ಎಲ್ಲರಿಗೂ ಒಂದು ಸಮಸ್ಯೆ. ಅಂತೂ ಹೇಗಾದರೂ ದಿಬ್ಬಣವು ಬಂದು ಸೇರಿತು.

ಭೂರಿವಸುವಿನ ಮನೆಯಲ್ಲಿಯೂ ಎಲ್ಲಾ ಸಿದ್ಧತೆಗಳು ಭರದಿಂದ ಸಾಗಿದ್ದುವು. ರಾಜದೂತರೇ ಎಲ್ಲಾ ಕೆಲಸವನ್ನೂ ಚಾಚೂ ತಪ್ಪದೆ ನೋಡಿಕೊಳ್ಳುತ್ತಿದ್ದರು. ಅಮಾತ್ಯನ ಮನೆಯೆಂದ ಮೇಲೆ ಜನರೆಲ್ಲರೂ ನಾ ಮುಂದೆ ತಾ ಮುಂದೆ ಎಂದು ಸಹಕರಿಸಲು ಬರುತ್ತಿದ್ದರು. ಎಲ್ಲಾ ವಿಧಾನಗಳಲ್ಲಿಯೂ ಏನೂ ಕೊರತೆಯಿರಲಿಲ್ಲ.

ವಿವಾಹದ ಅಂಗವಾದ ಕಾರ್ಯಗಳೆಲ್ಲಾ ಒಂದೊಂದೇ ಪ್ರಾರಂಭವಾದುವು. ಮದುಮಗಳು ನಗರದೇವತೆಯ ಮಂದಿರಕ್ಕೆ ಹೋಗಿ ದೇವತಾದರ್ಶನ ಮಾಡುವುದೂ, ಅಲ್ಲೇ ಅಲಂಕಾರಾದಿಗಳನ್ನು ಮಾಡಿಕೊಳ್ಳುವುದೂ ಆ ನಗರದ ಸಂಪ್ರದಾಯ. ಅಂತೆಯೇ ಮಾಲತಿಗೂ ಅಲ್ಲಿಗೆ ತೆರಳುವಂತೆ ಬೇಕಾದ ಅನುಕೂಲತೆಗಳನ್ನು ಕಲ್ಪಿಸಲಾಗಿತ್ತು.

ಮಾಧವನು ಕಾಮಂದಕಿಯು ಹೇಳಿಕೆಯಂತೆ ಹೊತ್ತಿಗೆ ಸರಿಯಾಗಿ ಮಕರಂದನೊಂದಿಗೆ ನಗರದ ದೇವಸ್ಥಾನಕ್ಕೆ ಬಂದು ನಿಂತುಕೊಂಡನು. ಅವರಿಬ್ಬರೂ ಮರೆಯಾಗಿ ನಿಂತು, ಮಾಲತಿ ಈಕಡೆ ಬಂದಳೋ ಇಲ್ಲವೋ ಎಂದು ವಿಚಾರಿಸಿ ತಿಳಿಸಲು ಕಲಹಂಸನನ್ನು ನೇಮಿಸಿದ್ದರು.

"ಇಂದು ಒಂದೆಡೆಯಿಂದ ತನ್ನ ಭಾಗ್ಯ ಪರೀಕ್ಷೆ! ಇನ್ನೊಂದೆಡೆಯಿಂದ ಕಾಮಂದಕಿಯ ಚಾತುರ್ಯದ ಪರೀಕ್ಷೆ! ಇಂದಿಗೆ ಒಂದೋ ತನ್ನ ಬಯಕೆ ಈಡೇರಬೇಕು. ಇಲ್ಲವಾದರೆ ಎಂದೆಂದಿಗೂ ಈ ದುಃಖವಾಗದಂತೆ ಮಾಡಿಕೊಳ್ಳಬೇಕು" ಎಂದು ಮಾಧವನು ಯೋಚಿಸುತ್ತಿದ್ದನು. ಹೀಗೆ ವಿಚಾರಿಸುತ್ತಿರುವಾಗಲೇ "ಮಾಲತಿ ಬರುತ್ತಿದ್ದಾಳೆ" ಎಂಬ ಸುದ್ದಿಯನ್ನು ಕಲಹಂಸನು ತಿಳಿಸಿದನು.

ಮಾಧವನಿಗೆ ತೃಪ್ತಿಯಾಯಿತು. ಮಕರಂದನೂ ಇದರಿಂದ ಸಮಾಧಾನ ಪಟ್ಟುಕೊಂಡನು. ಇಬ್ಬರೂ ಕಿಟಕಿಯ ಎಡೆಯಲ್ಲಿ ಮರೆಯಾಗಿ ನಿಂತರು.

ಮಾಲತಿ ನಗರದೇವಸ್ಥಾನಕ್ಕೆ ರಾಜವೈಭವದಿಂದಲೇ ಹೋಗಬೇಕೆಂದು ರಾಜನು ಗೌರವದ ಸನ್ನಾಹಗಳನ್ನು ಒದಗಿಸಿದ್ದನು. ಅಲಂಕೃತವಾದ ಅಂಬಾರಿ ಹಾಕಿದ ಆನೆ, ಶ್ವೇತಚ್ಛತ್ರ, ವಾದ್ಯ ವಿಶೇಷಗಳು, ನರ್ತಕಿಯರು, ಪರಿಚಾರಿಕೆಯರು ಎಲ್ಲವನ್ನೂ ಯೋಚಿಸಿಕೊಂಡು ಹೋಗುವಂತೆ ಏರ್ಪಡಿಸಲಾಗಿತ್ತು. ಮುತ್ತು ರತ್ನ ವಜ್ರ ವೈಢೂರ್ಯಗಳ ಕಾಂತಿಯಿಂದ ದಿಗ್ದಿಗಂತಗಳೇ ಬೆಳಗುತ್ತಿದ್ದುವು. ಮಾಲತಿ ವೈಭವದಿಂದ ಸಾವಕಾಶವಾಗಿ ಬಂದಳು.

ಮೆರವಣಿಗೆಯಿನ್ನೂ ದೇವಾಲಯವನ್ನು ಸಮೀಪಿಸಿರಲಿಲ್ಲ. ಅಷ್ಟರಲ್ಲಿ ಕಾಮಂದಕಿ ಎಲ್ಲರನ್ನೂ ಅಲ್ಲಿಯೇ ನಿಲ್ಲಿಸಿ ಮಾಲತಿಯೊಂದಿಗೆ ಲವಂಗಿಕೆಯನ್ನು ಮಾತ್ರ ಕರೆದುಕೊಂಡು ದೇವಾಲಯಕ್ಕೆ ಬಂದಳು.

ಕಾಮಂದಕಿ ಒಳಗೆ ಬಂದು ತನ್ನ ಯತ್ನವು ಫಲಿಸುವಂತೆ ದೇವಿಗೆ ಕೈ ಮುಗಿದಳು. ಮಾಲತೀ–ಲವಂಗಿಕೆಯರನ್ನೊಳಗೆ ಕರೆದಳು.

ರಾಜನು ಕೊಟ್ಟ ಆಭರಣಗಳನ್ನೆಲ್ಲಾ ದೂತನು ತಂದಿಟ್ಟು ಹೋದನು. 'ಚೆನ್ನಾಯಿತು' ಎಂದುಕೊಂಡಳು ಕಾಮಂದಕಿ. ಮಾಲತೀ–ಲವಂಗಿಕೆಯರನ್ನು ಒಳಗೆ ಕಳಿಸಿ ಕಾಮಂದಕಿ ಹೊರಗೆ ಉಳಿದು 'ತಾನು ಮುತ್ತುರತ್ನಗಳ

ನ್ನೆಲ್ಲಾ ಪರಾಂಬರಿಸುವುದಾಗಿ' ಹೇಳಿದಳು.

ಮಾಧವ-ಮಕರಂದರು ಮರೆಯಾಗಿ ನಿಂತು ಚಮತ್ಕಾರವನ್ನೆಲ್ಲಾ ಲಕ್ಷ್ಯವಿಟ್ಟು ನೋಡುತ್ತಿದ್ದರು.

ಲವಂಗಿಕೆ ಆಭರಣ ಸಾಮಗ್ರಿಗಳನ್ನೆಲ್ಲಾ ತೆಗೆದು ಮಾಲತಿಗೆ ಒಂದೊಂದಾಗಿ ತೋರಿಸಿದಳು. ಪ್ರತಿಯೊಂದೂ ಆಕೆಯ ಎದೆಯನ್ನು ಮುಳ್ಳಿನಂತೆ ಚುಚ್ಚುತ್ತಿತ್ತು. ಲವಂಗಿಕೆ ಬೇಕೆಂತಲೇ ಮತ್ತೂ ಅವುಗಳನ್ನು ಬಣ್ಣಿಸಿದಳು. ಆಗ ಮಾಲತಿ ಹೇಳಿದಳು.

"ಹೀಗೇಕೆ ನನ್ನನ್ನು ಕೆಣಕುವೆ ? ನಾನಿನ್ನು ಬದುಕಲಾರೆ. ನಾನು ತೀರಿಕೊಂಡರೂ ಮಾಧವನು ಸುಖವಾಗಿರಲಿ."

ಮಾಧವನಿಗೆ ಮಾಲತಿಯ ಪ್ರೇಮಾರ್ದ್ರ ಹೃದಯದ ಪೂರ್ಣ ಪರಿಚಯವು ಈ ಮಾತಿನಿಂದ ಮತ್ತೊಮ್ಮೆ ಸ್ಫುಟಗೊಂಡಿತು. ಆತನಿಗೆ ಹಿಡಿಸಲಾರದ ಹರ್ಷವುಂಟಾಯಿತು.

ಮಾಲತಿ ಮತ್ತೊಮ್ಮೆ ಅದೇ ಮಾತನ್ನು ಹೇಳಿದಳು. "ನಾನು ತೀರಿಕೊಂಡರೆ ಪಾಪ, ಮಾಧವನಿಗೆ ಕಷ್ಟ. ಆದರೂ ನಾನು ಬದುಕಲು ಸಾಧ್ಯವಿಲ್ಲ. ಬದುಕುವ ಸಂದರ್ಭ ನನಗಿಲ್ಲ" ಎಂದು ಮೋಹಗೊಂಡು ಲವಂಗಿಕೆಯ ಕಾಲಿನಲ್ಲಿ ಮಾಲತಿ ಬಿದ್ದಳು.

ಲವಂಗಿಕೆ ಕೈಸನ್ನೆಯಿಂದ ಮಾಧವನನ್ನು ಕರೆದಳು. ಮಾಧವನು ಅವಳಿದ್ದಲ್ಲಿ ಹೋಗಿ ನಿಂತುಕೊಂಡರು. ಲವಂಗಿಕೆ ಅಲ್ಲಿಂದ ತೊಲಗಿದಳು. ಮಾಲತಿಗೆ ಇದಿನ್ನೂ ತಿಳಿದಿರಲಿಲ್ಲ. ಆಕೆಯಿನ್ನೂ ಕಣ್ತೆರೆಯದೆ, ಬಿದ್ದಲ್ಲಿಂದಲೇ ಲವಂಗಿಕೆಯೊಂದಿಗೆ ಮಾತನಾಡುತ್ತಿದ್ದಳು ಮಾಧವನು ಎದ್ದೇಳು ಎಂತೆ ಹೇಳಿದರೂ ಆಕೆಗೆ ಗೋಚರಿಸಲಿಲ್ಲ.

"ನಿನ್ನ ವಿರಹದಿಂದ ನಾನು ಕಾತರಳಾಗಿದ್ದೇನೆ. ಎದ್ದುಬಂದು ನನ್ನನ್ನು ಅಪ್ಪಿಕೊ" ಎಂದನು ಮಾಧವ. ಮಾಲತಿಯಿನ್ನೂ ಕಣ್ತೆರೆಯದೆ ಮೋಹದಲ್ಲೇ ಇದ್ದು ಲವಂಗಿಕೆಯೆಂದು ಗ್ರಹಿಸಿ ಮಾಧವನನ್ನು ಅಪ್ಪಿಕೊಂಡಳು. ಆ ಮೇಲೆ ಮೆಲ್ಲನೆ ತನ್ನ ಕೊರಳಿನಿಂದ ಆ ಬಕುಲ ಮಾಲೆಯನ್ನು ತೆಗೆದು-

"ಈ ಮಾಲೆ ಈತನಕ ನನಗೆ ಸಂಜೀವನವಾಗಿತ್ತು. ಇನ್ನು ನಾನು ಬದುಕುವುದಿಲ್ಲ. ಈ ಮಾಲೆಯನ್ನು ನಮ್ಮ ಪ್ರೇಮದ ಕುರುಹಾಗಿ ನೀನು

ಧರಿಸಿಕೊ" ಎಂದು ಲವಂಗಿಕೆಯಿಂದೇ ಗ್ರಹಿಸಿ ಮಾಧವನ ಕೊರಳಿಗೆ ಹಾಕಿದಳು!

ಮಾಧವನಿಗೆ ಪರಮಾನಂದವಾಯಿತು. ಎಲ್ಲರೂ 'ತದೇವ ಲಗ್ನಂ' ಎಂದುಕೊಂಡರು ಮನಸ್ಸಿನಲ್ಲೇ.

ಮಾಲತಿ ಕ್ಷಣಹೊತ್ತು ಮೋಹದಲ್ಲಿದ್ದು ಆಮೇಲೆ ಥಕ್ಕನೆ ಎಚ್ಚರಗೊಂಡು ಕಣ್ತೆರೆದಳು. ನೋಡುವಾಗ ಮಾಧವನು ಆಕೆಯನ್ನು ಗಟ್ಟಿಯಾಗಿ ಹಿಡಿದುಕೊಂಡಿದ್ದನು ಮಾಲತಿಗೆ ಆಶ್ಚರಿಯಾಯಿತು. 'ಛೆ, ಲವಂಗಿಕೆ ಮೋಸ ಮಾಡಿದಳೆ?' ಎಂದಳು. ಆಗ ಮಾಧವನು ಹೇಳಿದನು,

"ನಿನ್ನ ವಿರಹದಿಂದ ನಾನು ಪಡುತ್ತಿರುವ ಬವಣೆ ನಿನಗಿಂತ ಕಡಿಮೆಯದಲ್ಲ." ಮಕರಂದನೂ ಇದಕ್ಕೆ ದನಿಗೂಡಿಸಿದನು.

ಅಷ್ಟರಲ್ಲಿ ಕಾಮಂದಕಿ ಒಳಗೆ ಬಂದು ಮಾಲತಿಯ ಮೊಗವನ್ನೆತ್ತಿ "ಮಗಳೆ, ಇದೋ, ನಿನ್ನ ಪ್ರಿಯನಿಲ್ಲಿದ್ದಾನೆ. ಹೆದರಬೇಡ" ಎಂದಳು.

ಆಮೇಲೆ ಮಾಧವನನ್ನು ಕರೆದು,

"ಮಗನೆ, ಸಕಲಾಮಾತ್ಯಚಕ್ರಚೂಡಾಮಣಿಯಾದ ಭೂರಿವಸುವಿನ ಪ್ರೇಮದ ಪುತ್ರಿ ಮಾಲತಿಯನ್ನು ಅನುರೂಪ ಘಟನಾಪ್ರೇಮಿಯಾದ ವಿಧಿ, ಮನ್ಮಥ ಮತ್ತು ನಾನು ಸೇರಿಕೊಂಡು ನಿನಗೆ ಧಾರೆಯೆರೆಯುತ್ತೇವೆ" ಎಂದು ಆನಂದಬಾಷ್ಪ ಮಿಡಿದಳು.

ಮಾಲತಿಯ ಕೈಯನ್ನೆತ್ತಿ ಮಾಧವನ ಕೈಯಲ್ಲಿಟ್ಟು "ಈಕೆಯನ್ನು ಪತ್ನಿಯನ್ನಾಗಿ ಪರಿಗ್ರಹಿಸಿ ಧರ್ಮದ ಅನ್ಯೋನ್ಯ ಸುಖದ ದಾಂಪತ್ಯದಿಂದ ಚಿರಕಾಲ ಬಾಳಿರಿ" ಎಂದು ಹರಸಿದಳು.

ಮಾಧವನು ಮಾಲತಿಯನ್ನೂ, ಮಾಲತಿ ಮಾಧವನನ್ನೂ ಏಕಕಾಲಕ್ಕೆ ನೋಡಿಕೊಂಡು ತೃಪ್ತಿಪಟ್ಟರು.

ಆಮೇಲೆ ಕಾಮಂದಕಿ ಮಕರಂದನನ್ನು ಕರೆದು,

"ಮಗನೆ, ಇಲ್ಲಿಗೆ ನಮ್ಮ ಕೆಲಸ ಮುಗಿಯಲಿಲ್ಲ. ಇದಕ್ಕಿಂತ ಎಷ್ಟೋ ಪಟ್ಟು ಇನ್ನೂ ಮಾಡಬೇಕು. ಮೊದಲಾಗಿ ಈ ಸೀರೆಗಳನ್ನು ಈಗ ನೀನು ಉಡಬೇಕು. ಈ ಆಭರಣಗಳನ್ನು ತೊಡಬೇಕು. ಒಟ್ಟಿನ ಮೇಲೆ ನೀನೀಗ ಮಾಲತಿಯಾಗಬೇಕು. ತಿಳಿಯಿತಲ್ಲವೆ?"

ಎಲ್ಲರಿಗೂ ಕಾಮಂದಕಿಯ ಮಾತಿನ ಅರ್ಥ ಹೊಳೆಯಿತು. ಹೃದಯವು ಆನಂದದಿಂದ ನಲಿಯಿತು. "ತನ್ನ ಗೆಳೆಯನಿಗಾಗಿ ಇಷ್ಟು ಮಾಡುವುದೇನೂ ಮಹತ್ವದ ವಿಚಾರವಲ್ಲ" ವೆಂದು ಮಕರಂದನು ಸ್ತ್ರೀವೇಷ ಹಾಕಲು ಕುಳಿತನು. ಕಾಮಂದಕಿ ರಾಜನು ಕಳಿಸಿದ ಆಭರಣ-ಸೀರೆಗಳನ್ನೆಲ್ಲ ಆತನಿಗೆ ಕೊಟ್ಟಳು. ತುಸು ಹೊತ್ತಿನಲ್ಲೇ ಮಕರಂದನು ಮಾಲತಿಯಾದನು.

ಮಾಧವನು ಗೆಳೆಯ ಮಕರಂದನನ್ನು ಅಪ್ಪಿಕೊಂಡು,

"ನಿನ್ನನ್ನು ಲಗ್ನವಾಗುವ ನಂದನನು ನಿಜವಾಗಿಯೂ ಪುಣ್ಯಶಾಲಿ" ಎಂದನು.

ಮಕರಂದನನ್ನು ನೋಡಿದ ಮಾಲತಿಗೂ ಚಿತ್ತಭ್ರಮೆ ಹುಟ್ಟುವಷ್ಟು ಸುಂದರವಾಗಿ ಆತನು ಅವಳ ವೇಷ ಧರಿಸಿದ್ದನು.

"ನೀನು ಮಾಲತಿಯೊಂದಿಗೆ ಈ ಮರಗಳೆಡೆಯಲ್ಲಿ ಮರೆಯಾಗಿ ತೆರಳಿ, ಮಕರಂದನು ಮದಯಂತಿಕೆಯನ್ನು ಕರೆದುಕೊಂಡು ಬರುವ ತನಕ ಈ ಉದ್ಯಾನದಲ್ಲಿಯೇ ಕಾದಿರಬೇಕು." ಎಂದು ಕಾಮಂದಕಿ ಮಾಧವನಿಗೆ ತಿಳಿಸಿದಳು.

ಮಾಧವನಿಗೆ ಹರ್ಷದೊಂದಿಗೆ ವಿಸ್ಮಯವೂ ಆಯಿತು. ತನ್ನ ಇಷ್ಟಾರ್ಥದೊಂದಿಗೆ ಗೆಳೆಯನ ಬಯಕೆಯೂ ಕೈಗೂಡುವುದು ಆತನಿಗೆ ಆನಂದವನ್ನಿತ್ತರೆ ಇದು ಹೇಗೆ ಘಟಿಸಬಹುದು ಎಂಬ ವಿಸ್ಮಯಕ್ಕೂ ಆತನು ಒಳಗಾದನು. ಅಂತೂ ಹೇಗಾದರೂ ಕಾಮಂದಕಿ ಇಲ್ಲಿ ತನ್ನ ಚಾತುರ್ಯದಿಂದ ಕೆಲಸ ಸಾಧಿಸಬಹುದು ಎಂಬ ದೃಢವಿಶ್ವಾಸವಾಯಿತು ಮಾಧವನಿಗೆ.

ಕಾಮಂದಕಿ, ಲವಂಗಿಕೆ, ಮಾಲತೀವೇಷದ ಮಕರಂದ ಮೂವರೂ ದೇವಾಲಯದಿಂದ ಹೊರಬಿದ್ದರು. ಹಿಂಬಾಗಿಲಿನಿಂದ ಮಾಲತೀ–ಮಾಧವರೂ ಹೊರಬಿದ್ದರು.

ಮಾಲತಿ ನಗರದೇವಾಲಯಕ್ಕೆ ಹೋಗಿ ವಿಜೃಂಭಣೆಯಿಂದ ಹಿಂದಿರುಗಿ ಬಂದಳು ಎಂದು ಎಲ್ಲರೂ ತಿಳಿದರು. ನಂದನನ ದಿಬ್ಬಣವು ರಾಜೋಪಚಾರದಿಂದ ತೃಪ್ತಿಗೊಂಡು ಕುಳಿತಿತ್ತು. ಸ್ವಯಂ ರಾಜನು ಉಪಸ್ಥಿತನಾಗಿದ್ದುದು ಸಭೆಯ ಗೌರವವನ್ನೂ ವಿವಾಹದ ಮಹತ್ತ್ವವನ್ನೂ ಹೆಚ್ಚಿಸಿತ್ತು. ಎಲ್ಲೆಡೆಗಳಿಂದಲೂ ಓಡಾಟ ನಡೆದಿತ್ತು. ವೈದಿಕರೂ ಗೃಹಸ್ಥರೂ ವಿವಾಹಕ್ಕೆ 'ಶುಭ

ಮಸ್ತು' ಎನ್ನುತ್ತಿದ್ದರು. ನಂದನನು ಮಂಡಪಕ್ಕೆ ಬಂದು ಕುಳಿತನು. ವಾದ್ಯ ಘೋಷಗಳು ಮೊಳಗಿದುವು.

ಜೋಯಿಸರು ಮುಹೂರ್ತ ಸನ್ನಿಹಿತವಾಯಿತೆಂದರು. 'ತದೇವ ಲಗ್ನಂ' ಎಂದರು ಪುರೋಹಿತರು. " ಸುಮುಹೂರ್ತೇ ಸಾವಧಾನಾ " ಎಂದಿತು ವೈದಿಕವೃಂದ. ಸುತ್ತಣಿಂದಲೂ ಮಂತ್ರಾಕ್ಷತೆಗಳು ರಾಶಿರಾಶಿಯಾಗಿ ಬಿದ್ದುವು. ತೆರೆ ಸರಿಯಿತು. ಮಾಲತಿ ಮೊದಲಾಗಿ ನಂದನನ ಕೊರಳಿಗೆ ಮಾಲೆ ಹಾಕಬೇಕು ಎಂದರು ಪುರೋಹಿತರು. ನಂದನನು ಕತ್ತು ತಗ್ಗಿಸಿ ಮಾಲೆ ಹಾಕಿಸಿಕೊಂಡನು. ತಾನೂ ಮಾಲೆ ಹಾಕಿ ತೃಪ್ತಿಪಟ್ಟುಕೊಂಡನು. ತನ್ನ ವೇಷಭೂಷಣಗಳನ್ನು ಸರಿಯಾಗಿ ನೋಡಿಕೊಂಡು ಆಗಾಗ ಮಾಲತಿಯನ್ನು ಹದ್ದಿನ ಕಣ್ಣಿನಿಂದ ನೋಡುತ್ತಿದ್ದನು.

ಅಂತೂ ವಿವಾಹಮಂಗಲವು ವಿಧಿವತ್ತಾಗಿ ನೆರವೇರಿತು. ಮಾಲತಿಗೆ ವಿವಾಹವು ಇಷ್ಟವಿಲ್ಲವೆಂದು ಕೇಳಿದವರೆಲ್ಲರೂ ಕುತೂಹಲದಿಂದ ನಿರೀಕ್ಷಿಸಿದರು. ಮದುವೆಗೆ ಬಂದವರೆಲ್ಲಾ 'ಮೃಷ್ಟಾನ್ನಮಿತರೇ ಜನಾಃ' ಎಂದು ಚೆನ್ನಾಗಿ ತಿಂದುಂಡು ಕೈತುಂಬ ದಕ್ಷಿಣೆ ತೆಗೆದುಕೊಂಡರು. 'ಮದುವೆ ಸಮಾರಂಭ ಎಲ್ಲಾ ಚೆನ್ನಾಗಿತ್ತು. ಆದರೆ ಆ ಚಿಕ್ಕ ಹುಡುಗಿಯನ್ನು ಈ ಮುದಿಗೂಬೆಗೆ ಬಲಿ ಕೊಡಬಾರದಿತ್ತು' ಎಂದರು ಎಲ್ಲರೂ ಮನೆಗೆ ಹೋಗುತ್ತ. ಕೆಲವರು ಭೂರಿವಸುವನ್ನು ಬೈಯಲೂ ಹಿಂಜರಿಯಲಿಲ್ಲ. ಇನ್ನು ಕೆಲವರು 'ಪಾಪ, ಅವನೇನು ಮಾಡಿಯಾನು, ಬಡಪಾಯಿ' ಎಂದುಕೊಂಡರು.

ಅಂತೂ ವಿವಾಹವೇನೋ ಜರಗಿತು. ನಂದನನಿಗೆ ಬಹಳ ತೃಪ್ತಿಯಾಗಿತ್ತು. ಆತನು ಮೀಸೆ ತಿರುವುತ್ತ ಬಹಳ ಸಂತಸಪಟ್ಟನು. ಅಂತೂ ವಿಧಿವತ್ತಾಗಿ ಕನ್ಯೆಯನ್ನು ಕರೆದುಕೊಂಡು ಬಂದುದೂ ಆಯಿತು. ಮಾಲತಿಯ ಜೊತೆಗೆ ಬಂದ ಆಕೆಯ ಗೆಳತಿಯರು ಲವಂಗಿಕೆಯೊಬ್ಬಳನ್ನು ಬಿಟ್ಟು ತಾಯಿ ತಂದೆ ಬಾಂಧವರೆಲ್ಲ ಹೊರಟುಹೋದರು. ಇನ್ನೇನು? ನಂದನನದೇ ಸಾಮ್ರಾಜ್ಯ. ಮಾಲತಿಯನ್ನೆಷ್ಟು ಬಾರಿ ನೋಡಿದರೂ ಆತನಿಗೆ ತೃಪ್ತಿಯಾಗಲಿಲ್ಲ. ಆಗಾಗ ಸಿಕ್ಕಿದಲ್ಲಿ ಕೈಹಿಡಿದು ಕರೆದು ಮಾತನಾಡಿಸ ಬಯಸುತ್ತಿದ್ದ.

ಆದರೆ ಮಾಲತಿ ಬಹಳ ಖಿನ್ನಳಾಗಿದ್ದಾಳೆ ಎಂಬುದು ಆತನಿಗೆ ಆಮೇಲೆ ತಿಳಿಯಿತು. ಮೊದಮೊದಲು ನಾಚಿಕೆಯಿರಬಹುದೆಂದು ಆತನು ಬಗೆದಿದ್ದನು.

ಬರಬರುತ್ತಾ ಆತನಿಗೆ ಆಕೆಯ ಬೇಸರ ಖಚಿತವಾಗಿಬಿಟ್ಟಿತು. ಹೇಗಿದ್ದರೂ ಆಕೆಯನ್ನೊಲಿಸಿಕೊಳ್ಳಬೇಕೆಂದು ಹಂಬಲಿಸುತ್ತಿದ್ದನು.

ಮಾಲತಿಯನ್ನು ತಾನು ಹೇಗಾದರೂ ವಿವಾಹವಾದೆ, ಇನ್ನು ಗೆದ್ದೆ ಎಂದು ಆತನು ಬಲವಾಗಿ ನಂಬಿದ್ದನು. ಆದರೆ ಮಾಲತಿ ಆತನನ್ನು ಕಣ್ಣೆತ್ತಿ ಕೂಡ ನೋಡದಿರುವಾಗ ಆತನಿಗೆ ತುಸು ಖೇದವೆನಿಸಿತು.

ಮಾಲತಿ ಒಂದು ಕೋಣೆ ಹಿಡಿದು ಮಂಚ ಗಟ್ಟಿಯೋ ತಾನು ಗಟ್ಟಿಯೋ ಎಂದು ಬಿದ್ದುಕೊಂಡಿದ್ದಳು. ಒಂದು ಬಟ್ಟೆಯನ್ನು ಮುಸುಕು ಹಾಕಿಕೊಂಡಿದ್ದಳು. ನಂದನನು ನೇರವಾಗಿ ಅಲ್ಲಿಗೆ ಹೋಗಿ ಎಬ್ಬಿಸಿದರೂ ಆಕೆ ಏಳಲಿಲ್ಲ. ತನ್ನ ಅಧಿಕಾರ, ರಾಜನ ಸ್ನೇಹ, ಐಶ್ವರ್ಯಗಳನ್ನೆಲ್ಲಾ ವರ್ಣಿಸಿಕೊಂಡನು. ಅದಕ್ಕೂ ಆಕೆಯ ಉತ್ತರವಿಲ್ಲ. ಪಲ್ಲಂಗದ ಮೇಲೆ ಹೋಗಿ ಕುಳಿತು ಮೆಲ್ಲನೆ ಆಕೆಯ ತಲೆ ನೇವರಿಸಲೆಂದು ಕೈಹಾಕಿದರೆ ದೂರ ಸರಿಸಬೇಕೆ? ಅಲ್ಲಿಂದ ಆತನು ನೇರವಾಗಿ ಆಕೆಯನ್ನು ಅಪ್ಪಿಕೊಳ್ಳಲೆಂದೇ ಮುಂದುವರಿದಾಗ ಆಕೆ ಕೈಕೊಡವಿ ದೂರ ಸರಿಸಿದಳು. ಉಗುರುಗಳಿಂದ ಪರಚಿ ನಂದನನನ್ನು ಗಾಯಗೊಳಿಸಿದಳು. ಆತನ ಮುಖ ಎದೆಯ ಮೇಲೆಲ್ಲಾ ರಕ್ತ ಸೋರುವಂತಹ ಗಾಯಗಳಾದರೂ ಆತನೇನೂ ಹೆದರಲಿಲ್ಲ.

ಕೈಗೆ ಬಂದ ತುತ್ತು ಬಾಯಿಗೆ ಬಾರದೆ ಹೇಗೆ ಹೋದೀತು ಎಂದು ಆತನು ಧೈರ್ಯ ತಾಳಿದನು. ಹೇಗಾದರೂ ಆಕೆಯನ್ನೊಲಿಸಬೇಕು, ಕೂಡಲೇ ಆಕೆಯ ಸುಖವನ್ನು ಅನುಭವಿಸಬೇಕು ಎಂದು ಆತನ ಕಾಮುಕತೆ ಆತನನ್ನು ಹುರಿದುಂಬಿಸುತ್ತಿತ್ತು. ಹಾಗಿದ್ದರೆ ಇನ್ನು ಸಮಾಧಾನದಿಂದಲೇ ಆಕೆಯನ್ನು ಒಲಿಸಬೇಕೆಂದು ಓಲೈಸತೊಡಗಿದ. ಹಲವಾರು ಬಗೆಯಿಂದ ಬೇಡಿಕೊಂಡ. ಆದರೂ ಆಕೆಯಿಂದ ಉತ್ತರವಿಲ್ಲ. ಹಾಕಿದ ಮುಸುಕನ್ನು ತೆಗೆಯುವಂತೆಯೂ ಇಲ್ಲ. ಆಕೆಯ ಕಾಲುಗಳಿಗೆ ಸಾಷ್ಟಾಂಗ ಪ್ರಣಾಮ ಮಾಡಿ, ಮೆಲ್ಲನೆ ಅಲ್ಲಿಂದಲೇ ಸೀರೆಯಮೇಲೆ ಕೈಯಾಡಿಸಿದ. ಆಗ ಆತನಿಗೆ ದೊರೆತುದು ಕಾಲಿನಿಂದ ಒಂದು ಒದೆತ. ಕೈಯಿಂದ ಛಟಾರೆಂದು ಕೆನ್ನೆಗೊಂದು ಏಟು!

ನಂದನನಿಗೆ ಈಗ ತಾಳ್ಮೆಯೆಳ್ಳಷ್ಟಾದರೂ ಉಳಿಯಲಿಲ್ಲ. ಇದಕ್ಕಾಗಿ ತಾನು ಇಷ್ಟು ಕಷ್ಟಪಡಬೇಕಾಯಿತೆ? ಕೈಹಿಡಿದ ಹೆಂಡತಿಯಿಂದ ಒದೆತ

ತಿಂದು ತಾನು ಬದುಕಬೇಕೆ? ಇದು ತನ್ನ ಗಂಡಸುತನಕ್ಕೆ ಕುಂದಲ್ಲವೆ? ಪದ್ಮಾವತೀರಾಜನ ಸರ್ವಸಚಿವನಾಗಿದ್ದು ಅಬಲೆಯೊಬ್ಬಳಿಂದ ಸುಖ ಪಡೆಯದೆ ಒಸೆತ ತಿನ್ನುವುದೆಂದರೆ ಸ್ವಾಭಿಮಾನಕ್ಕೆ ಬಲವಾದ ಧಕ್ಕೆಯಲ್ಲವೆ? ಹೇಗೆ ಹೇಗೋ ಪ್ರಯತ್ನ ಮಾಡಿ ವಿವಾಹ ಮಾಡಿಕೊಂಡು ಪಡೆದ ಸುಖ ಇಷ್ಟರಲ್ಲೇ ಇದೆ. ಹೀಗಾದರೆ ಆಕೆಯೊಡನೆ ಸಂಸಾರ ಮಾಡುವುದೆಂತು?

ಇಷ್ಟು ಮಾತ್ರವಲ್ಲ. ಇಂತಹ ಹುಡುಗಿಯರನ್ನು ಎಷ್ಟೊ ಸಂಪಾದಿಸಬಹುದು. ರಾಜಾನುಗ್ರಹವಿರುವ ತನಗ ಅದಾವ ಕೊರತೆ ತನಗೆ? ಆದರೆ ಭೂರಿವಸುವಿನ ಮಗಳ ಸೊಕ್ಕನ್ನು ಇಳಿಸಿಯೇ ಬಿಡಬೇಕು. ಇಲ್ಲವಾದರೆ ಈ ಮೀಸೆ ಹೊತ್ತು ಪುರುಷಾರ್ಥವೇನು? ಎಂದೆಲ್ಲಾ ಆತನು ಸಿಟ್ಟಿನಿಂದ ಕಿಡಿಕಿಡಿಯಾಗಿ ಹೇಳಿಕೊಂಡ. ಭೂರಿವಸುವಿನ ಕುಲಗೋತ್ರಗಳನ್ನೆಲ್ಲಾ ಬಾಯಿಗೆ ಬಂದಂತೆ ಶಪಿಸಿದ. ಇನ್ನು ಏನು ಮಾಡಿದರೂ ತಾನು ಈ ಹುಡುಗಿಯನ್ನು ಕೂಡಿಕೊಳ್ಳುವುದಿಲ್ಲ ಎಂದು ಪ್ರತಿಜ್ಞೆ ಮಾಡಿ ನಂದನನು ಹೊರಟು ಸಿಟ್ಟಿನಿಂದ ನಡೆದೇಬಿಟ್ಟನು.

ಮಕರಂದನ ಸ್ತ್ರೀವೇಷವು ಸಾಕಷ್ಟು ಪರಿಣಾಮಕಾರಿಯಾಯಿತು. ನಂದನನು ಹೊರಟುಹೋದ ಮಾತ್ರಕ್ಕೆ ಆತನ ಕೆಲಸ ಮುಗಿದಿರಲಿಲ್ಲ. ಆದಕ್ಕಾಗಿ ಆತನು ಮಾಲತಿಯಾಗಿಯೇ ಇನ್ನೂ ಉಳಿದುಕೊಂಡನು. ಹಾಸಿಗೆಯಲ್ಲಿ ಬೇಸರ ಬಂದವಳಂತೆ ಬಿದ್ದುಕೊಂಡನು.

ಮದಯಂತಿಕೆಗೆ ಈಗ ಎಲ್ಲಿಲ್ಲದ ಉತ್ಸಾಹ. ಅತಿಯಾದ ಆನಂದ. ತನ್ನ ಅಣ್ಣನೊಂದಿಗೆ ಗೆಳತಿಯಾದ ಮಾಲತಿಯ ವಿವಾಹವಾದುದರಿಂದ ಆಕೆಗೆ ಬಹಳ ತೃಪ್ತಿ. ಇನ್ನು ಮಾಲತಿಯೊಡನೆ ಸುಖವಾಗಿರಬಹುದು ಎಂದೇ ಆಕೆಯ ಯೋಚನೆ. ಮಾಲತಿಯ ಒಡನಾಟದ ಪ್ರೇಮದಲ್ಲಿ ಆಕೆಯ ಹಿತಾಹಿತಗಳು ಮದಯಂತಿಕೆಯ ಲಕ್ಷ್ಯದಲ್ಲಿರಲಿಲ್ಲ.

ಆಕೆ ಬುದ್ಧರಕ್ಷಿತೆಯಿಂದ ಮಾಲತಿಯ ವಿಚಾರ ಕೇಳಿ ತಿಳಿದುಕೊಂಡಳು. ಅಣ್ಣನಾದ ನಂದನನನ್ನು ಮಾಲತಿ ತಿರಸ್ಕರಿಸಿ, ಕಾಲಿನಿಂದ ಒದೆದು ಕಳಿಸಿದುದನ್ನು, ಆತನು ಸಿಟ್ಟಾಗಿ ಹೋದುದನ್ನು ಎಲ್ಲಾ ಬುದ್ಧರಕ್ಷಿತೆ ಹೇಳಿದಾಗ ಆಕೆಗೆ ಬಹಳ ಕಳವಳವಾಯಿತು. ಹೀಗಾಗಿ ಇನ್ನೇನು ಮಾಡಲಿ ಎಂದು ಆಕೆಗೆ ಹೊಳೆಯಲಿಲ್ಲ. ಅಂತೂ ತಾನೊಮ್ಮೆ ಆಕೆಯ ಬಳಿಗೆ ಹೋಗಿ

ಸಮಾಧಾನಪಡಿಸಿ ಒಲಿಸಬೇಕೆಂದು ಆಕೆ ಬಯಸಿದಳು. ಬುದ್ಧರಕ್ಷಿತೆ ಆಕೆಯನ್ನು ಮಾಲತಿಯ ಕೋಣೆಗೆ ಕರೆತಂದಳು.

"ಮಾಲತಿ ನಿದ್ರಿಸಿದ್ದಾಳೆ" ಎಂದು ಬಳಿಯಲ್ಲಿ ಕುಳಿತ ಲವಂಗಿಕೆ ಹೇಳಿದಳು.

"ಸಖಿ, ನಮ್ಮ ಮಾಲತಿ ಹೀಗೆ ಮಾಡಬಹುದೆ? ಇದೇನು ಅವಸ್ಥೆ ?" ಎಂದು ಮದಯಂತಿಕೆ ಕೇಳಿದಳು.

"ನಿನ್ನ ಅಣ್ಣನ ಸಿಟ್ಟು ಇಷ್ಟೆಲ್ಲಾ ಅನರ್ಥ ಮಾಡಿತು. ಎಲ್ಲಾದರೂ ಲಗ್ನ ಮಾಡಿಕೊಂಡ ಹುಡುಗಿಯರು ನಾಚಿಕೆ ಮಾಡಿದರೆಂದು ಬೈದು ಭಂಗಿಸಿ ಎಂದೆಂದೂ ನಿನ್ನನ್ನು ಸೇರಿಸಿಕೊಳ್ಳಲಾರೆ ಎಂದು ಮೊದಲ ದಿನವೇ ಶಪಥ ಮಾಡಿ ಓಡುವುದಿದೆಯೆ ?"

ಲವಂಗಿಕೆಯ ಮಾತಿನಲ್ಲಿ ಸಾರ ತುಂಬಿತ್ತು. ಮದಯಂತಿಕೆಗೆ ಚೆನ್ನಾಗಿ ಹಿಡಿಸಿತು.

"ನಿಜ, ತನ್ನ ಅಣ್ಣನದೇ ತಪ್ಪು. ಹಾಗೆ ಮಾಡಬಾರದಿತ್ತು" ಎಂದೆನಿಸಿತು ಆಕೆಗೆ.

"ಅಲ್ಲವೆ ಮತ್ತೆ ?" ಎಂದು ಲವಂಗಿಕೆ ಅದನ್ನು ದೃಢಪಡಿಸಿಬಿಟ್ಟಳು.

"ಸರಿ. ಮಾಲತಿಗೆ ಬೇಸರ ನಾಚಿಕೆಗಳೆರಡೂ ಕೂಡಿರಬೇಕು ಆಕೆಗೆ ಮಾಧವನಲ್ಲಿ ಅನುರಾಗವಿತ್ತಲ್ಲವೆ? ಆ ಬೇಸರದೊಂದಿಗೆ ನಾಚಿಕೆಯೂ ಸೇರಿ ಆಕೆ ಹೀಗೆ ಮಾಡಿರಬೇಕು." ಎಂದು ಮದಯಂತಿಕೆ ಸಮಾಧಾನಪಟ್ಟುಕೊಂಡಳು.

"ಮಾಧವನ ವಿಚಾರ ನಿನಗೇನು ಗೊತ್ತು ?" ಲವಂಗಿಕೆ ಕೇಳಿದಳು.

"ನೋಡು, ಆ ದಿನ ಶಂಕರಪುರದಲ್ಲಿ ನನ್ನನ್ನು ಹುಲಿಯಿಂದ ಆ ಮಹಾಶಯನು ರಕ್ಷಿಸಿ ನನ್ನ ಹೃದಯವನ್ನು ಪೂರ್ಣವಾಗಿ ಅಪಹರಿಸಿದ ಕ್ಷಣದಲ್ಲೇ ನನಗೆ ಮಾಲತಿಯ ಹೃದಯವೂ ತಿಳಿದಿತ್ತು."

"ಯಾರು ನಿನ್ನ ಹೃದಯವನ್ನು ಅಪಹರಿಸಿದವರು ?"

"ಮತ್ತಾರು ? ನನ್ನನ್ನು ಬದುಕಿಸಿದ ಆ ಮಹಾನುಭಾವ !"

"ಯಾರು ಮಕರಂದನೆ ?"

"ನಿಜ. ಆ ಹೆಸರನ್ನೆಷ್ಟು ಕೇಳಿದರೂ ತೃಪ್ತಿಯಿಲ್ಲ."

"ಯಥಾರ್ಥವಾಗಿಯೂ ?"

"ಸುಳ್ಳಲ್ಲ. ನನಗೆ ಬೇರೇನೂ ಬೇಕಾಗಿಲ್ಲ. ಆತನನ್ನು ಪಡೆದೆನೆಂದರೆ ನನ್ನ ಇಷ್ಟಾರ್ಥ ನೆರವೇರಿತು."

"ಅಷ್ಟೂ ಆತನಿಗೆ ಸೋತಿರುವೆಯಾ ?"

"ಸೋತಿರುವುದೇನು ? ನನಗೆ ನೀನು ಅಷ್ಟು ವಿಶ್ವಾಸದ ಗೆಳತಿಯೆಂದು ಹೇಳುತ್ತೇನೆ. ನಿಜವಾಗಿಯೂ ದಿನಯಾಪನೆ ಅಸಾಧ್ಯವಾಗಿದೆ. ರಾತ್ರಿ ಯುಗದಂತೆ ಕಾಣಿಸುತ್ತಿದೆ. ಚಂದ್ರನು ತೀವ್ರವಾಗಿ ಸುಡುತ್ತಾನೆ. ಮಂದಾನಿಲದ ಬಾಧೆ ಶರೀರವನ್ನೇ ಗಾಸಿ ಮಾಡುತ್ತಿದೆ. ಕನಸು ಮನಸುಗಳಲ್ಲಿಯೂ ನನಗೆ ಆತನದೇ ನೆನಹು. ಕೆಲವೊಮ್ಮೆ ಎಲ್ಲಾದರೂ ಹೋಗಿ ಬಿಡೋಣ ಎನಿಸುತ್ತಿದೆ."

"ಈ ಜಗತ್ತಿನಲ್ಲೇ ಜಿಹಾಸೆಯಾಗಿದೆಯೆ ?"

"ಜಿಹಾಸೆ ಮಾತ್ರವಲ್ಲ. ಇನ್ನೇನು ಮಾಡಬೇಕೆಂದು ತಿಳಿಯುವುದಿಲ್ಲ. ಇದು ಕ್ಷುದ್ರ ಮರಳುಗಾಡೆಂದೇ ನನಗೆ ಭಾಸವಾಗುತ್ತಿದೆ. ಇಲ್ಲಿ ನಾನು ಬಿಸಿಲ್ಗುದುರೆಯ ಬೆನ್ನು ಹತ್ತಿದಂತಾಗಿದೆ ಎಂದೊಮ್ಮೆ ಭಾವನೆಯುಂಟಾಗುತ್ತಿದೆ."

"ಅಯ್ಯೋ ಪಾಪ, ಯಾರಿಗೂ ಹೀಗಾಗಬಾರದು !" ಎಂದಳು ಲವಂಗಿಕೆ. ಆಕೆಗೆ ಮದಯಂತಿಕೆಯ ವಿಚಾರವೆಲ್ಲಾ ಸುಲಭವಾಗಿ ತಿಳಿದುಬಿಟ್ಟಿತು. ಆಗ ಆಕೆ ಮದಯಂತಿಕೆಯ ಹೃದಯವನ್ನೇ ಕೆದಕಿ ಕೇಳಿದಳು.

"ಒಂದು ವೇಳೆ ಮಕರಂದನು ನಿನಗೆ ಇನ್ನೊಮ್ಮೆ ಕಾಣಸಿಕ್ಕಿದರೆ ನೀನೇನು ಮಾಡುವೆ?"

"ಕಣ್ತುಂಬ ನೋಡಿ ಅವುಗಳ ಸಾಫಲ್ಯ ಮಾಡಿಕೊಳ್ಳುವೆ; ಆನಂದ ಲೋಲಳಾಗಿಬಿಡುವೆ "

"ರುಕ್ಮಿಣಿಯನ್ನು ಕೃಷ್ಣನು ಒಯ್ದಂತೆ ಆತನು ನಿನ್ನನ್ನು ಗುಟ್ಟಾಗಿ ಇಲ್ಲಿಂದ ಕರೆದೊಯ್ಯುವುದಾದರೆ ನೀನೇನು ಮಾಡುವೆ ?"

"ಆಗಿನ ವಿಚಾರ ಈಗ ಏಕೆ ?"

"ಆದರೂ ಹೇಳಬಹುದಷ್ಟೆ."

"ಹೇಳಲಿಕ್ಕೆ ಏನಿದೆ ? ನನ್ನ ಹೃದಯವನ್ನು ಇನ್ನೆಂತು ತಿಳಿಸಲಿ ?"

ಲವಂಗಿಕೆ ಇದಕ್ಕಿಂತ ಹೆಚ್ಚು ತಿಳಿಯಬೇಕಾದ ಅಂಶ ಉಳಿದಿರಲಿಲ್ಲ. ಆಕೆ ಮತ್ತೇನೂ ಕೇಳಲಿಲ್ಲ. ಮದಯಂತಿಕೆಯ ಅಂತರಂಗವೆಲ್ಲ ಆಕೆಗೆ ಈಗಾಗಲೇ ವ್ಯಕ್ತವಾಗಿ ಹೋಗಿತ್ತು.

ಮಕರಂದನು ಮಲಗಿದಲ್ಲೇ ಮದಯಂತಿಕೆಯ ಮಾತುಗಳನ್ನು ಕೇಳಿ ಆನಂದದಿಂದ ಹಿಗ್ಗುತ್ತಿದ್ದನು. ಇನ್ನೊಂದೆಡೆಯಿಂದ ಆತನಿಗೆ ಆಕೆಯ ಪರಿಸ್ಥಿತಿಯ ಕುರಿತು ನಗು ಉಕ್ಕಿ ಉಕ್ಕಿ ಬರುತ್ತಿತ್ತು. ಆದರೂ ಆತನು ಅದನ್ನು ತೋರ್ಪಡಿಸದೆ ಈತನಕವೂ ಮಲಗಿಯೇ ಇದ್ದನು.

ಮದಯಂತಿಕೆಗೆ ಈಗ ಮತ್ತೊಂದು ಯೋಚನೆ ಹೊಳೆಯಿತು. ತಾನು ಹೋಗಿ ಅಣ್ಣನನ್ನು ಸಮಾಧಾನಪಡಿಸಿ ಇಲ್ಲಿಗೆ ಕರೆದು ತರುವುದಾಗಿ ಹೇಳಿ ಆಕೆ ಹೊರಡಲನುವಾದಳು. ಆಕೆ ಎದ್ದು ನಿಂತುಕೊಳ್ಳುವಷ್ಟರಲ್ಲಿ ಹಿಂದಿನಿಂದ ಆಕೆಯ ಕೈಯನ್ನಾರೋ ಹಿಡಿದಂತಾಯಿತು. ತಿರುಗಿ ನೋಡುತ್ತಾಳೆ ! ಮಕರಂದನ ಪೂರ್ಣಚಂದ್ರದಂಥ ಮುಖ! ಆಕೆಗೆ ಈಗ ತಾನೇನು ಮಾಡಬೇಕೆಂದು ತಿಳಿಯಲಿಲ್ಲ. ಮಕರಂದನನ್ನು ನೋಡಿ ಆಕೆಯಲ್ಲಿ ಆನಂದ, ಸಾಧ್ವಸಗಳೆರಡೂ ಒಮ್ಮೆಲೆ ತೋರಿಬಂದುವು.

ಮದಯಂತಿಕೆಗೆ ಅಚ್ಚರಿಯೂ ಆಯಿತು. ಛೆ, ಇದೆಲ್ಲ ಏನು ? ಎಂದು ಆಕೆಗೆ ಕ್ಷಣಕಾಲ ಹೊಳೆಯಲಿಲ್ಲ. ಅಂತೂ ಏನೋ ತಂತ್ರ ನಡೆದಿದೆಯೆಂದು ಆಕೆ ತಿಳಿದಳು. ಆಕೆಗೆ ಅಣ್ಣನ ಹಿತಾಹಿತಕ್ಕಿಂತ ಪ್ರಕೃತ ತನ್ನ ಹಿತಾಹಿತವೇ ಮೇಲಾಗಿತ್ತು. ಆಕೆ ಗೊಂಬೆಯಂತೆ ಕ್ಷಣ ಹೊತ್ತು ನಿಂತುಬಿಟ್ಟಳು.

ಮಕರಂದನು ಆಕೆಯನ್ನು ಬಳಿಗೆ ಕರೆದುಕೊಂಡು, “ ಪ್ರಿಯೆ, ಹೆದರಬೇಡ, ನಿನಗೆ ನನ್ನಲ್ಲಿರುವ ಪ್ರೇಮವನ್ನು ತಿಳಿದು ಸಂತುಷ್ಟನಾಗಿರುವೆ. ನಿನ್ನಲ್ಲಿ ನಾನೂ ಅಷ್ಟೇ ಅನುರಕ್ತನಾಗಿರುವೆ” ಎಂದನು.

ಮದಯಂತಿಕೆಗೆ ಒಳಗಿಂದೊಳಗೆ ನಿತಾಂತವಾದ ತೃಪ್ತಿಯಾಯಿತು. ಆಗ ಬುದ್ಧರಕ್ಷಿತೆ ಹೇಳಿದಳು. ‘ಸರಿ, ಇನ್ನು ನೀವಿಲ್ಲಿರಬಾರದು. ಕೂಡಲೇ ಹೊರಟು ಹೋಗಬೇಕು.”

“ಎಲ್ಲಿಗೆ?” ಮದಯಂತಿಕೆ ಅಚ್ಚರಿಯಿಂದ ಕೇಳಿದಳು.

"ಮಾಲತಿ ಹೋದಲ್ಲಿಗೆ!"

"ಹಾಗಿದ್ದರೆ ಆಕೆಯೂ ಸಾಹಸ ಮಾಡಿದಳೆ?"

"ಇನ್ನೇನು?"

ಮದಯಂತಿಕೆಯ ಕಣ್ಣಿನಲ್ಲಿ ಬಿಂದುಗಳು ತೊಟ್ಟಿಕ್ಕಿದುವು. ಮಕರಂದನು ಆಕೆಯ ಕೈಹಿಡಿದುಕೊಂಡು "ಇಂದು ನನ್ನ ಜನ್ಮ ಸಫಲವಾಯಿತು. ಇಂದು ನನಗೆ ನಿಜವಾದ ಆನಂದ" ಎನ್ನುತ್ತ ಹೊರಟುಹೋದನು.

ಮಾಲತಿಯೆಲ್ಲಿ?

ಮಾಲತೀ–ಮಾಧವರು ನಗರದ ಹೊರಗಿನ ಕೆರೆಯಲ್ಲಿ ಸ್ನಾನಮಾಡಿ ಶರೀರದ ಬೇಗೆಯನ್ನು ಕಳೆದುಕೊಂಡರು. ಬಹಳ ಹೊತ್ತಿನ ತನಕ ವಿಧವಿಧ ವಾದ ಪ್ರೇಮಾಲಾಪಗಳಿಂದ ಹೃದಯದ ಬೇನೆಯನ್ನು ಕಡಿಮೆ ಮಾಡಿ ಕೊಂಡರು. ಪ್ರಶಾಂತ ವಾತಾವರಣದಲ್ಲಿ ಮಂದಾನಿಲನ ತಂಪಾದ ತೀಡುವಿ ಕೆಗೆ ಮೈಯೊಡ್ಡಿ, ತಂಗದಿರನ ಸುಂದರವಾದ ಸುಧಾವರ್ಷದಿಂದ ಮನಸ್ಸನ್ನು ತಣಿಸಿಕೊಂಡು, ಕನಸಿನ ಬಯಕೆಗಳನ್ನು ನೆನಸಾಗಿ ಮಾಡಿಕೊಂಡು ಆನಂದ ದಿಂದ ವಿಹರಿಸಿದರು. ಬಹಳ ಹೊತ್ತಿನ ತನಕ ಹೀಗೆಯೇ ಬಗೆಬಗೆಯ ಬಯಕೆಗಳನ್ನು ಈಡೇರಿಸಿಕೊಂಡರು. ಬಹು ದಿನಗಳ ಕನಸು, ಬೇರೆ ಬೇರೆ ಘಟನೆಗಳು ಎಲ್ಲವನ್ನೂ ಬಣ್ಣಿಸುತ್ತಾ ಆನಂದದಿಂದ ತನ್ಮಯರಾಗಿ ಕುಳಿತು ಕೊಂಡು ಇಹವನ್ನು ಮರೆತರು.

ಸಮಯ ಕಳೆದುದೇ ಅವರಿಗೆ ತಿಳಿಯಲಿಲ್ಲ. ರಾತ್ರಿ ಹೆಚ್ಚುತ್ತ ಬರುತ್ತ ಲಿತ್ತು. ಒಮ್ಮೆ ಯಾವುದೋ ಸಂದರ್ಭದಲ್ಲಿ ಮಾಲತಿಗೆ ಪ್ರಣಯಕೋಪ ಬಂದಿತು. ಮಾಧವನು ಬೇಕುಬೇಕಾದಂತೆ ರಮಿಸಿ ಆಕೆಯನ್ನು ಸಮಾ ಧಾನಪಡಿಸಿದನು.

ಬಹಳ ಸಮಯವು ಹೀಗೆಯೇ ಕಳೆದರೂ ಮಕರಂದನ ಸುದ್ದಿ ತಿಳಿಯ ಲಿಲ್ಲವೆಂದು ಮಾಧವನಿಗೆ ವಿಹ್ವಲವಾಗತೊಡಗಿತು. ಅಷ್ಟರಲ್ಲಿ ಅವಲೋಕಿತೆ ಬಂದಳು.

ಮಾಧವನು ನಂದನನ ಮನೆಯ ಸುದ್ದಿ ತಿಳಿದು ಬರಲು ಕಲಹಂಸ ನನ್ನು ಕಳಿಸಿದ್ದನು. ಮಕರಂದನ ಕಥೆ ಎಲ್ಲಿವರೆಗೆ ಮುಟ್ಟಿತು ಎಂಬ ಚಿಂತೆ ಆತನನ್ನು ಬಲವಾಗಿ ಕಾಡತೊಡಗಿತ್ತು. ಇತ್ತ ಮಾಲತಿಗೆ 'ಲವಂಗಿಕೆಯೇನು ಬಂದಿಲ್ಲ? ಏನಾಗಿರಬಹುದು?' ಎಂಬ ಚಿಂತೆ. ಅವಲೋಕಿತೆ ಬಂದೊಡ ನೆಯೇ 'ಏನಾಯಿತು?' ಎಂದು ಇಬ್ಬರೂ ಕೇಳಿದರು.

091987

ಅಷ್ಟರಲ್ಲಿ ಕಲಹಂಸನು ಓಡಿಬರುತ್ತಿರುವುದು ಕಾಣಿಸಿತು. ಏನೋ ಅನಾಹುತವಾಗಿರಬೇಕು ಎಂದು ಮಾಧವನಿಗೆ ಕೂಡಲೇ ತಿಳಿಯಿತು. ಕಲಹಂಸನ ಅಂಗಭಂಗಿಯೇ ಅದನ್ನು ಸಾರಿಹೇಳುತ್ತಿತ್ತು. ಎಲ್ಲರೂ ಉತ್ಸುಕರಾಗಿ "ಏನಾಯಿತು? ಏನಾಯಿತು?" ಎಂದು ಕೇಳಿದರು.

"ಎಲ್ಲಾ ಘಾತವಾಯಿತು. ಮಕರಂದನು ಮದಯಂತಿಕೆಯನ್ನು ಕರೆದುಕೊಂಡು ಬರುವಾಗ ಕಾವಲಿನ ಭಟರು ತಡೆದುನಿಲ್ಲಿಸಲು ಪರಸ್ಪರ ಹೊಡೆದಾಟ ನಡೆಯಿತು. ಮಕರಂದನು ಕೆಲವರನ್ನು ಥಳಿಸಿ ಕಳಿಸಿದ. ಈಗ ಮತ್ತೆ ಕೆಲವರು ಬಂದಿದ್ದಾರೆ" ಎಂದು ಏದುತ್ತಾ ಗಾಬರಿಯಿಂದಲೂ ಪರಿತಾಪದಿಂದಲೂ ಕಲಹಂಸ ನುಡಿದ.

ಮಾಧವನು ನೀವೆಲ್ಲಾ ಜೊತೆಯಾಗಿದ್ದುಕೊಳ್ಳಿರಿ ಎಂದು ಹೇಳಿ ಕೂಡಲೇ ಮಕರಂದನ ಸಹಕಾರಕ್ಕಾಗಿ ಓಡಿದನು.

ಲವಂಗಿಕೆ ಮದಯಂತಿಕೆಯನ್ನು ಮಾಲತಿಯ ಬಳಿಯಲ್ಲಿ ತಂದು ಬಿಟ್ಟಳು. ಮಾಲತೀ–ಮದಯಂತಿಕೆಯರನ್ನು ಒಂದೆಡೆ ಬಿಟ್ಟು ಇತರರೆಲ್ಲಾ ಹೊಡೆದಾಟದ ವಿಚಾರ ಗಮನಿಸಲು ತೆರಳಿದರು.

ಮಾಲತೀ-ಮದಯಂತಿಕೆಯರಿಬ್ಬರೂ ಒಂದೆಡೆ ಪ್ರಿಯಲಾಭದ ಆನಂದವನ್ನು ಅನುಭವಿಸುವುದರೊಳಗಾಗಿ, ಬಂದೊದಗಿದ ಅನರ್ಥದ ಬಗ್ಗೆ ತಮ್ಮ ಭಾಗ್ಯವನ್ನು ಹಳಿದುಕೊಂಡರು. ಏನಾಯಿತು? ಬಂದರೇ? ಎಂದು ಕತ್ತೆತ್ತಿ ಆಸೆಯಿಂದ ನಿರೀಕ್ಷಿಸುತ್ತಿದ್ದರು.

ಅಘೋರಘಂಟನನ್ನು ಸಂಹಾರ ಮಾಡಿದ ಸಿಟ್ಟಿನಿಂದ ಕಪಾಲಕುಂಡಲೆ ಮಾಧವನಿಗೆ ಪ್ರತೀಕಾರ ಮಾಡಲು ಸಮಯ ಕಾಯುತ್ತಿದ್ದಳು. ಅಲ್ಲಲ್ಲಿ ಹೊಂಚು ಹಾಕುತ್ತಿದ್ದಳು. ಈಗ ಇಲ್ಲಿ ಇಬ್ಬರು ಅಬಲೆಯರೇ ಇರುವಷ್ಟು ಸುಸಂಧಿ ಇನ್ನೆಂದೂ ಸಿಕ್ಕಲಾರದು ಎಂದು ಬಗೆದು ಕಪಾಲಕುಂಡಲೆ ಅಲ್ಲಿಗೆ ಹಲ್ಲು ಕಡಿಯುತ್ತಾ ಬಂದಳು. ಇವರಿಬ್ಬರೂ ಮಾಧವ–ಮಕರಂದರ ದಾರಿ ನೋಡುತ್ತಿದ್ದುದರಿಂದ, ಮದಯಂತಿಕೆಗೂ ತಿಳಿಯದಷ್ಟು ಜಾಣತನದಿಂದ ಮಾಲತಿಯನ್ನೆತ್ತಿಕೊಂಡು ಹೋದಳು.

ಮದಯಂತಿಕೆ ಇತ್ತ ನೋಡುವಷ್ಟರಲ್ಲಿ ಮಾಲತಿಯಿಲ್ಲ. ಇಲ್ಲೇ, ಇಷ್ಟು ಬೇಗನೆ ಎಲ್ಲಿ ಹೋಗಿರಬೇಕು? ಎಷ್ಟು ವಿಚಾರಿಸಿದರೂ ಆಕೆಗೆ ಹೊಳೆಯ

ಲಿಲ್ಲ. ಅತ್ತಿತ್ತ ಹುಡುಕಿದರೂ ಕಾಣಲಾರಳು. ಮದಯಂತಿಕೆ ಕಕ್ಕಾಬಿಕ್ಕಿಯಾದಳು.

ತುಸು ವೇಳೆಯಲ್ಲಿ ಲವಂಗಿಕೆ ಬಂದು ಕೇಳಿದಳು, ‘ಮಾಲತಿಯೆಲ್ಲಿ ?’ ಮದಯಂತಿಕೆಯದೂ ಅದೇ ಪ್ರಶ್ನೆ– ‘ಮಾಲತಿಯೆಲ್ಲಿ ?’ ಎಲ್ಲಿ ಹುಡುಕಿದರೂ ಮಾಲತಿಯಿಲ್ಲ !

ಇತ್ತ ಮಕರಂದನು ಮದಯಂತಿಕೆಯನ್ನು ಕರೆದುಕೊಂಡೊಯ್ಯುವ ಸುದ್ದಿ ರಾಜನಿಗೆ ತಿಳಿದುಬಿಟ್ಟಿತು. ಕೂಡಲೇ ಆತನು ಮಕರಂದನನ್ನು ಬಂಧಿಸುವಂತೆ ಆಜ್ಞೆ ಮಾಡಿದನು. ರಾಜದೂತರಿಗೂ ಇವನಿಗೂ ಖಾಡಾಖಾಡಿಯಾಯಿತು. ಮಾಧವನೂ ಮಕರಂದನ ಸಹಕಾರಕ್ಕಿದ್ದುದರಿಂದ ಕಾಳಗಕ್ಕೆ ಬಹಳ ಬಲ ಬಂದಿತ್ತು. ರಾಜನ ಕಡೆಯವರಿಗೂ ಇವರಿಗೂ ತಿಕ್ಕಾಟವು ಬಲವಾಗಿ ಹೋಯಿತು. ಇವರು ಸಾಹಸದಿಂದ ಕಾದಾಡಿದರು.

ರಾಜನು ಅರಮನೆಯ ಸೌಧವನ್ನೇರಿ ಕಾಳಗವನ್ನು ನೋಡುತ್ತಿದ್ದನು. ಭೂರಿವಸು, ನಂದನರು ಪೆಚ್ಚುಮೋರೆ ಹಾಕಿಕೊಂಡಿದ್ದರು. ತರುಣರ ಸಾಹಸ ಹೋರಾಟಗಳನ್ನು ಕಂಡು ರಾಜನಿಗೆ ಹರ್ಷವಾಯಿತು. ಅಂತೂ ಇವರು ಸಾಮಾನ್ಯ ವೀರರಲ್ಲವೆಂದು ಅವನಿಗೆ ಹೊಳೆಯಿತು. ಇವರ ರೂಪ, ಪರಾಕ್ರಮಗಳನ್ನು ಆತನು ಮೆಚ್ಚಿಕೊಂಡುದಲ್ಲದೆ, ತನ್ನ ಇಬ್ಬರು ಮಂತ್ರಿಗಳ ಹುಡುಗಿಯರ ಪ್ರೀತಿಗೆ ಇವರು ಪಾತ್ರರೆಂದು ತಿಳಿದು ಆತನು ಕೂಡಲೇ ಯುದ್ಧ ನಿಲ್ಲಿಸುವಂತೆ ಹೇಳಿಕಳಿಸಿದನು. ರಾಜನಲ್ಲಿ ಗುಣಗ್ರಾಹಿತ್ವವೂ ಪ್ರಸಂಗಾವಧಾನತೆಯೂ ಜಾಗೃತವಾಗಿದ್ದುವು.

ಭೂರಿವಸುವನ್ನು ಕರೆದು “ಮಾಲತಿಯನ್ನು ಮಾಧವನಿಗೆ ವಿವಾಹ ಮಾಡಿ ಕೊಟ್ಟುಬಿಡು” ಎಂದು ರಾಜನು ಹೇಳಿಬಿಟ್ಟನು. ಈ ತನಕ ನಡೆದ ಘಟನೆಗಳನ್ನೆಲ್ಲಾ ಮನಸ್ಸಿಗೆ ಹಚ್ಚಿಕೊಳ್ಳದೆ “ನಿನ್ನ ತಂಗಿ ಮದಯಂತಿಕೆಯನ್ನು ಮಕರಂದನಿಗೆ ಧಾರೆಯೆರೆದು ಬಿಡು” ಎಂದು ನಂದನನಿಗೆ ಆಜ್ಞಾಪಿಸಿದನು. ತರುಣರಿಬ್ಬರನ್ನೂ ರಾಜನು ಕೊಂಡಾಡಿದನೆಂದು ತಿಳಿದು ಎಲ್ಲರೂ ಹರ್ಷದಿಂದ ನಲಿದರು.

ಮಾಧವ–ಮಕರಂದರು ಅಲ್ಲಿ ಮತ್ತೆ ನಿಲ್ಲಲಿಲ್ಲ. ಮಾಲತೀ–ಮದಯಂತಿಕೆಯರಿದ್ದಲ್ಲಿಗೆ ಬರುವಾಗ ಲವಂಗಿಕೆ ಮಾಲತಿಯನ್ನು ಹುಡುಕು

ತ್ತಿರುವುದನ್ನು ತಿಳಿದು ಇಬ್ಬರಿಗೂ ಆಶ್ಚರ್ಯವಾಯಿತು. ಎಲ್ಲರೂ ಹುಡುಕಿದರು. ಎಲ್ಲಿಗೆ ಹೋಗಿರಬಹುದು ? ಮದಯಂತಿಕೆಗೆ ತಿಳಿಸದೆ ಆಕೆ ಎಲ್ಲಿಗೂ ಹೋಗಲಾರಳು. ಆದರೂ ನೋಡೋಣ ಎಂದು ಹುಡುಕಿದರು.

ಎಲ್ಲಿ ನೋಡಿದರೂ ಮಾಲತಿಯಿಲ್ಲ. ಹೂದೋಟದ ತರುಲತೆಗಳ ಮರೆಯಲ್ಲಿರುವಳೆ ? ತೊರೆಯ ಬಳಿಗೆ ಸರಿದಿರುವಳೆ ? ಗಿರಿಗೆ ಹೋಗಿರಬಹುದೆ? ಎಂದು ಅಲ್ಲಿ ಇಲ್ಲಿ ಸಿಕ್ಕಿದಲ್ಲೆಲ್ಲಾ ಹುಡುಕಿದರು.

ಮಾಲತಿ ಕಾಣೆಯಾದ ಸುದ್ದಿ ಎಲ್ಲೆಲ್ಲೂ ಹಬ್ಬಿತು. ಕೇಳಿದವರಿಗೆಲ್ಲ ಬಹಳ ವಿಷಾದವಾಯಿತು. ಎಲ್ಲೆಡೆಗಳಿಂದಲೂ ಜನರು ಹುಡುಕತೊಡಗಿದರು. ಕಾಮಂದಕಿ, ಮದಯಂತಿಕೆ, ಅವಲೋಕಿತೆ, ಲವಂಗಿಕೆ, ಭೂರಿವಸು, ಮಾಲತಿಯ ತಾಯಿ ಎಲ್ಲರಿಗೂ ಖೇದವು ತುಂಬಿತ್ತು.

ಮಾಧವ ಮಕರಂದರು ಅನ್ನ ನೀರುಗಳಿಲ್ಲದೆ ಅಲೆದರು. ಅಲ್ಲಿರಬಹುದೆ, ಇಲ್ಲಿರಬಹುದೆ ಎಂದು ಸಿಕ್ಕಸಿಕ್ಕಲ್ಲಿಗೆ ಹೊಕ್ಕರು.

ಮಾಧವನಿಗೆ ಈ ವೇದನೆಯನ್ನು ಸಹಿಸಲು ಸಾಧ್ಯವಾಗಲಿಲ್ಲ. ಆತನು ವಿಧಿಯ ಈ ಬಗೆಯ ವ್ಯಾಪಾರವನ್ನು ಕಂಡು ಬಹಳ ಹಂಬಲಿಸಿದನು. ಮಾಲತಿಯ ರೂಪ-ಸೌಂದರ್ಯ-ಸದ್ಗುಣಗಳು ಆತನ ಹೃದಯದಲ್ಲಿ ಸ್ಥಿರವಾಗಿದ್ದುವು. ಆತನಿಗೆ ಮಾಲತಿಯನ್ನು ನೋಡಿದಂದಿನಿಂದ ಪ್ರತಿಯೊಂದು ಘಟನೆಯೂ ಗೋಚರಿಸಿತು ಏನು ಮಾಡಿದರೂ ಪರಿಸ್ಥಿತಿಯನ್ನು ಹೇಗೆ ನಿವಾರಿಸಿಕೊಳ್ಳಬೇಕೆಂದು ಆತನಿಗೆ ತಿಳಿಯಲಿಲ್ಲ.

ಆತನ ಅಂಗಾಂಗವು ತುಂಡುತುಂಡಾಗುವಂತೆ ಕಂಡಿತು. ಹೃದಯವೇ ಬಿರಿದುಹೋಗುವಂತೆ ಭಾಸವಾಯಿತು. ಪ್ರಕೃತಿಯ ಸೌಂದರ್ಯದಲ್ಲಿ ಆತನಿಗೆ ಆನಂದವುಂಟಾಗುವಂತಿರಲಿಲ್ಲ. ಎಲ್ಲವೂ ಆತನಲ್ಲಿ ವೇದನೆಯನ್ನು ಹೆಚ್ಚಿಸುತ್ತಿದ್ದುವು. ಚಂದ್ರ, ಮಂದಮಾರುತ, ಪ್ರಕೃತಿ ಎಲ್ಲಾ ಆತನಿಗೆ ಬಹಳ ಶತ್ರುಗಳಾಗಿ ಎದೆಯನ್ನೇ ಇರಿಯುತ್ತಿದ್ದುವು. ಆತನು ಹುಚ್ಚನಂತೆ ಕಾಡುಮೇಡುಗಳಲ್ಲಿ ಗುಡ್ಡಕಾಡುಗಳಲ್ಲಿ 'ಮಾಲತಿಯನ್ನು ಕಂಡಿರಾ ?' ಎಂದು ಕೇಳಿಕೊಂಡು ಅಲೆದಲೆದು ಬೇಸತ್ತು ಇನ್ನು ತಾನು ಬದುಕಿ ಪ್ರಯೋಜನವಿಲ್ಲವೆಂದು ನಿಶ್ಚಯಿಸಿದನು. ಆತನಿಗೆ ಬದುಕಬೇಕೆಂದು ಕಾಣುವಂತಹ ಆಶಾಲೇಶವಾದರೂ ಈಗ ಉಳಿದಿರಲಿಲ್ಲ.

ಆತನು ಮಾಲತಿಯನ್ನೇ ನೆನೆಸಿಕೊಂಡು ಒಂದೆಡೆ ಕುಳಿತಿದ್ದನು. ಆತನಿಗೆ ಮೋಹವು ಕವಿದು ಚೈತನ್ಯವು ತುಸುವಾದರೂ ಉಳಿದಿರಲಿಲ್ಲ. ಇನ್ನು ಮರಣವೇ ಗತಿಯೆಂದು ಗೆಳೆಯನೊಡನೆ ತನ್ನ ನಿರ್ಧಾರವನ್ನು ತಿಳಿಸಿ ಮುಗ್ಗರಿಸಿಕೊಂಡನು.

ಮಕರಂದನು ಗೆಳೆಯನ ಪರಿಸ್ಥಿತಿಯನ್ನು ಪೂರ್ಣವಾಗಿ ಮನಗಂಡನು. ಮಾಧವನ ಈ ಬಗೆಯ ಸಂಕಟ, ಮಾಲತಿಯ ಅದರ್ಶನಗಳಿಂದಾಗಿ ತೀವ್ರವಾದ ಯಾತನೆಯಾಗಿತ್ತು. ಮಿತ್ರನ ಶೋಚನೀಯ ಸ್ಥಿತಿಯಲ್ಲಿ ಯಾವ ಬಗೆಯ ಸಹಕಾರವನ್ನೂ ಇನ್ನು ನೀಡಲು ಸಾಧ್ಯವಿಲ್ಲವೆಂದು ಆತನಿಗೆ ಖಚಿತವಾಯಿತು. ಇಷ್ಟು ಹುಡುಕಾಡಿ ಕೊನೆಗೆ ನಿರಾಶೆಯೇ ಪ್ರತಿಫಲವಾಗಬೇಕೆ, ಎಂದು ಮಕರಂದನು ಹೇಳಿಕೊಂಡನು. ಅಂತೂ ಮಾಧವನಿನ್ನು ಬದುಕುವಂತಿಲ್ಲವೆಂಬುದೂ ಆತನಿಗೆ ತಿಳಿದು, ತಾನಾದರೂ ಏಕೆ, ಹೇಗೆ ಬದುಕಲಿ ಎಂದು ವಿಚಾರಿಸಿಕೊಂಡು ಆತನು ಅಲ್ಲಿಂದ ಮುಂದುವರಿದನು.

ಅಷ್ಟರಲ್ಲಿ ಆತನನ್ನು ಯಾರೋ ತಡೆದಂತಾಯಿತು. ನೋಡುವಾಗ ಒಬ್ಬಳು ಹೆಂಗುಸು! ಮಕರಂದನು ಆಚ್ಚರಿಯಿಂದ ಕೇಳಿದ—

"ಯಾರಮ್ಮಾ, ನೀನು ?"

"ನೀನು ಮಕರಂದನೆ ?"

"ಹೌದು, ಅವನೇ ಭಾಗ್ಯಹೀನ."

"ನಾನು ಯೋಗಿನಿ. ಮಾಲತಿಯ ಗುರುತು ತಂದಿದ್ದೇನೆ."

ಎಂದು ರೆಂಜೆ ಹೂವಿನ ಮಾಲೆ ತೋರಿಸಿದಳು.

"ಮಾಲತಿಯಂತೂ ಬದುಕಿರುವಳಷ್ಟೆ ?" ಎಂದು ಸಮಾಧಾನದ ನಿಟ್ಟುಸಿರೆಳೆದನು ಮಕರಂದ.

"ಮಾಧವನು ಸುಖವಾಗಿರುವನಲ್ಲವೆ ?" ಆಕೆ ಕೇಳಿಕೊಂಡಳು.

"ಇಲ್ಲೇ ಸನಿಯದಲ್ಲಿದ್ದಾನೆ. ಬಾ ಹೋಗೋಣ" ಎಂದು ಆಕೆಯನ್ನು ಕರೆದುಕೊಂಡು ಹೋದನು. ಆಗಂತುಕಳು ಇಬ್ಬರನ್ನೂ ಚೆನ್ನಾಗಿ ಪರಿಶೀಲಿಸಿ ನೋಡಿಕೊಂಡಳು. ಅಹುದು, ಮಾಲತಿ ಹೇಳಿದಂತೆಯೇ ಇದ್ದಾರೆ ಎಂಬ ಸಮಾಧಾನವಾಯಿತು ಆಕೆಗೆ.

ಚೈತನ್ಯವಿಲ್ಲದೆ ಬಿದ್ದುಕೊಂಡಿದ್ದ ಮಾಧವನಿಗೆ ತಂಗಾಳಿಯ ತೀಡುವಿಕೆಗೆ ಪ್ರಜ್ಞೆ ಬಂದಂತಾಗಿತ್ತು. ಆತನು ಏನೇನೋ ಬಡಬಡಿಸತೊಡಗಿದ್ದನು. ಅಷ್ಟರಲ್ಲಿ ಆಕೆ ಬಕುಲಮಾಲೆಯನ್ನು ಕೊಂಡು ಹೋಗಿ ಮಾಧವನ ಕೈಯಲ್ಲಿತ್ತಳು.

ಮಾಧವನಿಗೆ ಇದನ್ನು ನೋಡಿ ವಿಸ್ಮಯವೂ ಹರ್ಷವೂ ಉಂಟಾಯಿತು. ಆತನಿಗೆ ಈ ಮಾಲೆ ಮಾಡಿಕೊಟ್ಟ ಸ್ನೇಹಸಂಬಂಧದ ನೆನಪುಂಟಾಗಿ ಅದನ್ನು ಎದೆಗೊತ್ತಿಕೊಂಡನು. ತನ್ನ ಪ್ರಿಯತಮೆಯ ಎದೆಯನ್ನಪ್ಪಿಕೊಂಡಿದ್ದ ಈ ಮಾಲೆಯನ್ನಾದರೂ ಅಪ್ಪಿಕೊಂಡು ಸಂತಸಪಡಬಾರದೇಕೆ? ಎಂದೆನಿಸಿತು ಮಾಧವನಿಗೆ. ಮಾಲೆ ಸಿಕ್ಕಿದಾಗ ಮಾಲತಿ ಸಿಕ್ಕಿದಷ್ಟೇ ಆನಂದವಾಗಿತ್ತು ಆತನಿಗೆ.

ಆದರೆ ಆತನು ಮಾಲತಿಯೆಲ್ಲಿ? ಎಂದು ಕಣ್ಣು ಹೊರಳಿಸಿದರೆ ಆಕೆಯ ಸುಳಿವಿಲ್ಲ. ಆತನಿಗೆ ಪುನಃ ಖೇದವಾಯಿತು. ಯೋಗಿನಿ ಬಂದುದೊಂದೂ ಆತನಿಗೆ ತಿಳಿದಿರಲಿಲ್ಲ. ಮಾಲೆ ಸಿಕ್ಕಿದುದರಲ್ಲೇ ಅವನು ತೃಪ್ತಿಪಟ್ಟಿದ್ದನು. ಆದರೆ ಈ ಮಾಲೆಯೆಲ್ಲಿಂದ ಬಂದಿತೆಂದು ಮಾಧವನು ಕೇಳಿದನು. "ಈ ಮಹಾನುಭಾವೆ ತಂದಿತ್ತಳು" ಎಂದು ಮಕರಂದನು ಯೋಗಿನಿಯನ್ನು ತೋರಿಸಿದನು. ಮಾಧವನು ಆಕೆಗೆ ನಮಸ್ಕರಿಸಿ,

"ಪೂಜ್ಯೆಯೆ, ಮಾಲತಿ ಬದುಕಿರುವಳೆ?" ಎಂದು ಕೇಳಿದನು.

"ಮಗನೆ, ಗಾಬರಿಯಾಗಬೇಡ. ಆಕೆ ಸುರಕ್ಷಿತವಾಗಿರುವಳು."

ಯೋಗಿನಿಯ ಮಾತು ಕೇಳಿ ಇಬ್ಬರಿಗೂ ಉತ್ಸಾಹ ಸ್ಫೂರ್ತಿಗಳು ಉಕ್ಕಿ ಬಂದುವು.

"ಹಾಗಿದ್ದರೆ ಏನು ನಡೆಯಿತು? ಎಲ್ಲಿದ್ದಾಳೆ?" ಇಬ್ಬರೂ ಕೇಳಿದರು.

"ನೀನು ಹಿಂದೆ ಅಘೋರಘಂಟನನ್ನು ಸಂಹರಿಸಿರುವೆಯಲ್ಲವೆ?"

"ಸರಿ. ತಿಳಿಯಿತು" ಎಂದನು ಮಾಧವ.

ಮಕರಂದನಿಗೆ ಅರ್ಥವಾಗಲಿಲ್ಲ.

"ಏನು?" ಎಂದು ಕೇಳಿದನು.

"ಮತ್ತೇನು? ಕಪಾಲಕುಂಡಲೆ ತನ್ನ ಬಯಕೆಯನ್ನೀಡೇರಿಸಿರಬೇಕು" ಎಂದು ಮಾಧವನು ಪಶ್ಚಾತ್ತಾಪದ ದನಿಯಲ್ಲಿ ಹೇಳಿದನು. ಮಾಧವನಿಗೆ

ಮಾಲತಿಯ ಸುಮಕೋಮಲ ದೇಹದ ಹಾಗೂ ಕಪಾಲಕುಂಡಲೆಯ ಕ್ರೂರ ರೂಪದ ದರ್ಶನವಾಗಿ ಎದೆ ಭಾರವಾಯಿತು. ತಲೆಯಲ್ಲಿರಿಸಿ ಆನಂದಿಸ ಬೇಕಾದ ಹೂವನ್ನು ಕಲ್ಲಿನಿಂದ ಜಜ್ಜಿದರೆ ಏನಾದೀತು ಎಂದುಕೊಂಡನು ಮಾಧವ !

"ಮಗನೆ, ಕಪಾಲಕುಂಡಲೆ ಮಾಲತಿಯನ್ನು ನಿಷ್ಕರುಣೆಯಿಂದ ಏನು ಮಾಡಲೂ ಸಿದ್ಧಳಾಗಿದ್ದಳು. ಆಕೆ ಕೈಮಾಡುವ ಮೊದಲೇ ನಾನು ತಡೆದೆ. ಅಂತೂ ಮಾಲತಿಯೀಗ ನನ್ನ ಅಧೀನದಲ್ಲಿ ಸುರಕ್ಷಿತವಾಗಿದ್ದಾಳೆ. ಆದರೂ ನೀನೀಗ ಒಂದು ಕೆಲಸ ಮಾಡಬೇಕು."

ಯೋಗಿನಿ ಹೇಳಿದುದನ್ನು ಕೇಳಿ ಮಾಧವನು,

"ಪೂಜ್ಯೆಯೆ, ನಿನ್ನ ಈ ಉಪಕಾರವು ಮರೆಯತಕ್ಕದ್ದಲ್ಲ. ನೀನು ಹೇಳಿ ದಂತೆ ಮಾಡಲು ಸಿದ್ಧನಿದ್ದೇನೆ." ಎಂದನು.

ಆಕೆ ಮಂತ್ರದ ಆಕರ್ಷಿಣೀ ಸಿದ್ಧಿಯನ್ನಿತ್ತು ಮಾಧವನೊಂದಿಗೆ ತೆರಳಿ ದಳು ವಿದ್ಯುದ್ವೇಗದಲ್ಲಿ ಇಬ್ಬರೂ ಅಲ್ಲಿಂದ ಸಾಗಿದರು. ಬಂದವಳು ಮಾಧವ ಮಕರಂದರಿಗೆ ತನ್ನ ಪೂರ್ಣ ಪರಿಚಯ ತಿಳಿಸಿರಲಿಲ್ಲ. ಆದರೂ ಆಕೆಯ ವರ್ತನೆಯಿಂದ ಅವರಿಗೆ ಧೈರ್ಯ ಬಂದಿತ್ತು. ಬಕುಲಮಾಲೆಯೂ ಇದಕ್ಕೆ ಸಹಾಯಕವಾಗಿತ್ತು.

ಮಾಲತಿ ಕಾಣೆಯಾದುದರಿಂದ ಯಾರಲ್ಲಿಯೂ ಉತ್ಸಾಹವಿರಲಿಲ್ಲ. ಕಾಮಂದಕಿಯ ವಿಷಾದ ಹೇಳತೀರದು. ತಾನೆಷ್ಟು ಸಾಹಸ ಮಾಡಿದರೂ ಕಾರ್ಯವು ಪೂರ್ತಿಯಾಗುವ ಮೊದಲೇ ಹೀಗಾಗಿ ಹೋಯಿತಲ್ಲ ಎಂದು ಆಕೆಗೆ ದುಃಖ. ಮಾಲತೀ–ಮಾಧವರು ಆನಂದದಲ್ಲಿ ಹಾಯಾಗಿ ಸಂಸಾರ ಮಾಡಿ ಮುದ್ದುಮಗುವಿನೊಂದಿಗೆ ಲಲ್ಲೆಯಾಡುವುದನ್ನು ನೋಡಿ ನಲಿಯುವ ಭಾಗ್ಯವು ತನ್ನ ಪಾಲಿಗೆ ಇಲ್ಲವಾಯಿತಲ್ಲವೆಂದು ಹೇಳಿಕೊಂಡಳು. ನಿಜವಾ ಗಿಯೂ ಇದು ವಿಧಿಯ ಪ್ರಕೋಪವೆಂದೇ ಎನಿಸಿತಾಕೆಗೆ.

ಲವಂಗಿಕೆಗೆ ತನ್ನ ಪ್ರಿಯಸಖಿಯ ದರ್ಶನವಾಗದೆ ಹೃದಯವು ಬರಿದಾ ಗಿತ್ತು. ಕಣ್ಣು ಕುರುಡಾಗಿತ್ತು. ಕಾಲುಗಳಲ್ಲಿ ಸತ್ತ್ವವಿರಲಿಲ್ಲ.

ಮದಯಂತಿಕೆ ಲವಂಗಿಕೆಯನ್ನು ಸಮಾಧಾನಪಡಿಸುತ್ತಿದ್ದರೂ ಆಕೆಗೂ ಧೈರ್ಯೋತ್ಸಾಹ ಆನಂದಗಳಿಲ್ಲ !

ಕಲಹಂಸ ಮುಂತಾರಿಕೆ ಎಲ್ಲರಲ್ಲೂ ಚೈತನ್ಯವೇ ಶೂನ್ಯವಾಗಿತ್ತು. ಅವಲೋಕಿತೆಯಂತೂ ಕಂಗೆಟ್ಟು ಹೋಗಿದ್ದಳು.

ಕಾಮಂದಕಿ ಮದಯಂತಿಕೆ ಲವಂಗಿಕೆ ಎಲ್ಲರೂ ಜೀವನದಲ್ಲಿ ನೈರಾಶ್ಯ ತಳೆದು ಮಾಲತಿಯಿಲ್ಲದ ಹಾಳು ಬಾಳು ತಮಗೇಕೆಂದು ಪ್ರಾಣತ್ಯಾಗದ ಯೋಚನೆಗೂ ಸನ್ನದ್ಧರಾಗಿದ್ದರು. ಅಷ್ಟರಲ್ಲಿ ಕಾಮಂದಕಿಗೆ ಏನೋ ಕೇಳಿಸಿದಂತಾಯಿತು.

"ಏನಿದು ? ಮಕರಂದನ ಧ್ವನಿ ! ಏನೋ ನಡೆದಿದೆ ಅದ್ಭುತ !" ಎಂದು ಎಲ್ಲರಿಗೂ ತತ್‌ಕ್ಷಣ ಹೊಳೆಯಿತು. ಅಂತೂ ದುಡುಕಬಾರದೆಂದು ನಿರ್ಣಯಿಸಿದರು.

ಅಷ್ಟರಲ್ಲಿ ಮಕರಂದನು ಪ್ರವೇಶಿಸಿದನು. ಕಾಮಂದಕಿ,

"ಮಗನೆ, ಏನು ಸಮಾಚಾರ ?" ಎಂದು ಕೇಳಿದಳು.

"ಪೂಜ್ಯರೆ, ಯೋಗೀಶ್ವರಿಯ ಮಹಿಮೆಯಿಂದ ಎಲ್ಲಾ ಸುಗಮವಾಗುತ್ತದೆ" ಎಂದನು. ಎಲ್ಲರ ಮುಖಗಳಲ್ಲೂ ಆನಂದೋರ್ಮಿ ಪ್ರವಹಿಸಿದಂತಾಯಿತು.

ಸಂಕಲ್ಪದ ಸಿದ್ಧಿ

ಇತ್ತ ಭೂರಿವಸು ತನ್ನ ಮಗಳು ಕಾಣೆಯಾದ ವಾರ್ತೆ ತಿಳಿದು ಖಿನ್ನನಾಗಿದ್ದನು. ಎಲ್ಲೆಲ್ಲಿ ಹುಡುಕಿಸಿದರೂ ಆಕೆ ಸಿಗದೆ ಇದ್ದುದನ್ನು ನೋಡಿ ಆತನಿಗೆ ಬದುಕುವ ಆಸೆಯೇ ಉಳಿಯಲಿಲ್ಲ. ಅಮಾತ್ಯ ಭೂರಿವಸುವೆಂದು ಜನರಿಂದ ಕೊಂಡಾಡಲ್ಪಟ್ಟು, ಸ್ಥಾನಮಾನ ಗಳಿಸಿಕೊಂಡು, ತನ್ನ ಗೌರವಕ್ಕೆ ಉಚಿತವಾಗಿ ಮಗಳಿಗೆ ಆನಂದದಿಂದ ವಿವಾಹ ಮಾಡಲಾರದೆ, ರಾಜನ ಹಂಗಿನಿಂದಾಗಿ ಈ ರೀತಿಯ ವಿವಾಹವೆಸಗಿದ್ದುದು ಆತನ ಅಂತರಂಗವನ್ನು ಕೊರೆಯುತ್ತಿತ್ತು. ಹೆತ್ತ ಕರುಳಲ್ಲವೇ ಅದು? ಅಷ್ಟುಮಾತ್ರವಲ್ಲದೆ ಒಬ್ಬಳೇ ಮಗಳು. ಉಭಯಕುಲ ನಂದಾದೀಪವಾಗಿ ಬೆಳಗಿ ಬಾಳಬೇಕಾಗಿದ್ದ ಸುಪುತ್ರಿಯಿಲ್ಲದೆ ತಾನಿನ್ನು ಬದುಕಿದರೇನು? ಸತ್ತರೇನು? ಎಂದೂ ಆತನಿಗೆ ಕಂಡಿರಬೇಕು. ಜನರ ದೃಷ್ಟಿಯಿಂದ ಆತನು ತೀರಾ ಅಪರಾಧಿಯೇ ಆಗಿದ್ದನು. ಆದುದರಿಂದ ತಾನಿನ್ನು ಬೆಂಕಿಗೆ ಹಾರಿ ಪ್ರಾಣ ಬಿಡುವುದಾಗಿ ಸಂಕಲ್ಪಿಸಿದ್ದನು. ಮಗಳನ್ನು ತಾನೇ ಕೈಯಾರೆ ಕೊಂದಂತಾಗಿದೆ ಎಂದು, ಅದರ ಪ್ರಾಯಶ್ಚಿತ್ತಕ್ಕಾಗಿ ತಾನು ಪ್ರಾಣ ಕಳೆದುಕೊಳ್ಳುವುದೆಂದು ಆತನು ಬೆಂಕಿಗೆ ಹಾರುವ ತಯಾರಿ ನಡೆಸಿದ ಸುದ್ದಿ ಹಬ್ಬಿ ಎಲ್ಲರೂ ಬಂದು ತಡೆಯತೊಡಗಿದ್ದರು. ಆದರೆ ಆತನು ಯಾರ ಮಾತನ್ನೂ ಕೇಳುವಂತಿರಲಿಲ್ಲ. ರಾಜನೂ ನಂದನನೂ ಭೂರಿವಸುವನ್ನು ಸಾಯಬಾರದೆಂದು ಕೇಳಿಕೊಂಡರೂ ಆತನು ಒಡಂಬಡದೆ ತನ್ನ ದೃಢನಿರ್ಧಾರಕ್ಕೆ ಅಂಟಿಕೊಂಡಿದ್ದನು. ಆಗ ನಂದನನು ಭೂರಿವಸುವಿನ ಕಾಲನ್ನೇ ಹಿಡಿದುಕೊಂಡನು.

ಮಾಧವನು ಯೋಗಿನಿಯ ಮಂತ್ರಸಿದ್ಧಿಯ ಬಲದಿಂದ ಮಾಲತಿಯಿದ್ದಲ್ಲಿಗೆ ತೆರಳಿದನು. ಶ್ರೀಪರ್ವತದಲ್ಲಿ ಯೋಗಿನಿಯ ಬಳಿಯಲ್ಲಿ ಮಾಲತಿಯನ್ನು ಕಂಡು ಆತನಿಗೆ ಆನಂದವಾಯಿತು. ಇಲ್ಲಿಗೆ ಮಾಲತಿಯನ್ನು ತಂದು ಕೊಲ್ಲ ಬಯಸಿದ ಕಪಾಲಕುಂಡಲೆಗೆ ತಕ್ಕ ಶಾಸ್ತಿ ಮಾಡಿ ಮಾಲತಿಯನ್ನು ಕರೆದು ಕೊಂಡು ಮಾಧವನು ಹೊರಟನು. ಮಾಲತಿಗೆ ಪುನರ್ಜನ್ಮ ಬಂದಂತಾ

ಗಿತ್ತು. ಆಕೆ ಮಾಧವನನ್ನು ಗಾಢವಾಗಿ ಅಪ್ಪಿ ಜಗವನ್ನು ಮರೆತಳು.

ಮಾಧವನು ಮಾಲತಿಯನ್ನು ಧರಿಸಿಕೊಂಡೇ ಯೋಗಿನಿಯ ಶಕ್ತಿಯಿಂದ ಕೆಳಗೆ ಬಂದನು. ಕಾಮಂದಕಿ ಮಕರಂದರಿರುವಲ್ಲಿಗೆ ಆತನು ಓಡಿಕೊಂಡು ಬಂದನು.

ಯೋಗಿನಿ ನೇರವಾಗಿ ಭೂರಿವಸುವಿನ ಬಳಿಗೆ ಸಾಗಿದಳು. ಇನ್ನು ಅರೆ ಕ್ಷಣದಲ್ಲಿ ಆತನು ಯಾರ ಮಾತನ್ನೂ ಲೆಕ್ಕಿಸದೆ ಬೆಂಕಿಗೆ ಹಾರಿ ಪ್ರಾಣ ಕಳೆದುಕೊಳ್ಳುತ್ತಿದ್ದನು. ಅಷ್ಟರೊಳಗಾಗಿ ಯೋಗಿನಿ ಬಂದು "ಮಾಲತಿ ಬದುಕಿದ್ದಾಳೆ. ಈಗ ಮಾಧವನು ಕರೆದು ತರುತ್ತಾನೆ. ಸಾಯಬೇಡ" ಎಂದು ತಿಳಿಸಿದಾಗ ಆತನು ಮರಣದ ನಿರ್ಧಾರವನ್ನು ಸಡಿಲಿಸಿ ಆನಂದದಿಂದ ನಲಿದನು.

ಕಾಮಂದಕಿ ಲವಂಗಿಕೆ ಮದಯಂತಿಕೆ ಮಕರಂದರಿಗೆಲ್ಲ ದೇವರೆ ಸಿಕ್ಕಿದಂತಾಯಿತು. ಹೋದ ಜೀವ ಮರಳಿ ಬಂದಂತೆ ಕೂಡಿತು. ಕಾಮಂದಕಿಯ ಕಾಲುಗಳಿಗೆ ಮಾಲತೀ-ಮಾಧವರು ಸಾಷ್ಟಾಂಗ ನಮಸ್ಕರಿಸಿದರು. ಎಲ್ಲರೂ ಅಪ್ಪಿಕೊಂಡರು.

ಅಷ್ಟರಲ್ಲಿ ಯೋಗಿನಿ ಪ್ರವೇಶಿಸಿ ಕಾಮಂದಕಿಗೆ ವಂದಿಸಿದಳು. ಕಾಮಂದಕಿಗೆ ಸಂತೋಷವು ಹಿಡಿಸಲೊಲ್ಲದಾಯಿತು. ಆಕೆ ಮತ್ತಾರೂ ಆಗಿರದೆ ಕಾಮಂದಕಿಯ ಪ್ರಿಯಶಿಷ್ಯೆ ಸೌದಾಮಿನಿ! ಎಲ್ಲರಿಗೂ ಇದನ್ನು ತಿಳಿದು ಅಚ್ಚರಿಯಾಯಿತು. ಕಾಮಂದಕಿಯ ಶಿಷ್ಯೆಯಾದುದರಿಂದಲೇ ಆಕೆಗೂ ಮಾಲತೀ-ಮಾಧವರ ಬಗ್ಗೆ ಅಷ್ಟು ಪ್ರೇಮವಿದ್ದಿರಬೇಕು. ಹಲವಾರು ವರ್ಷಗಳ ತರುವಾಯ ತನ್ನ ಶಿಷ್ಯೆಯನ್ನು ಕಂಡು ಕಾಮಂದಕಿಗೆ ವಿಸ್ಮಯವಾಯಿತು. ಆನಂದವೂ ಆಯಿತು. ಭೂರಿವಸು, ಮಾಲತಿ, ಮಾಧವ, ಮಕರಂದ ಮೊದಲಾದವರ ಪ್ರಾಣಗಳನ್ನುಳಿಸಿದುದು ಆಕೆಯ ಪುಣ್ಯಕಾರ್ಯವೆಂದೇ ಹೇಳಬೇಕು. ಆಕೆ ಹಿಂದೆ ತನ್ನ ಶಿಷ್ಯೆಯಾಗಿದ್ದರೂ ಇಂದು ಸಿದ್ಧಿಪಡೆದ ಯೋಗಿನಿ ಎಂದ ಮೇಲೆ ಕಾಮಂದಕಿಗೆ ಆಕೆಯ ಕುರಿತು ಎಷ್ಟು ಅಭಿಮಾನವೆನಿಸದು ?

"ಈ ಮಹಾನುಭಾವೆಯೇ ಕಪಾಲಕುಂಡಲೆಯನ್ನು ಹೆದರಿಸಿ ನನ್ನನ್ನು ಬದುಕಿಸಿದರು, ಹಾಗೂ ತಮ್ಮಲ್ಲಿಗೆ ಕರೆದೊಯ್ದು ನನ್ನನ್ನು ತಮ್ಮೆಲ್ಲರ

ದರ್ಶನ ಮಾಡಿಸಿದರು." ಎಂದು ಮಾಲತಿ ಸೌದಾಮಿನಿಯ ಪಾತ್ರವನ್ನೂ ನಡೆದ ಘಟನೆಯನ್ನೂ ತಿಳಿಸಿದಳು.

"ನಿಜವಾಗಿಯೂ ಆಕೆಯ ಉಪಕಾರ ಮರೆಯುವಂತಹದಲ್ಲ. ಚಿಂತಾಮಣಿ ಎಂಬುದು ತನಗೆ ಇದು ಬೇಕು ಎಂದು ಚಿಂತೆ ಮಾಡಿದರೆ ಅರ್ಥಾತ್ ಬಯಸಿದರೆ ಮಾತ್ರ ಇಷ್ಟಾರ್ಥವನ್ನೀಯುತ್ತದೆ. ಈಕೆಯಾದರೋ ಚಿಂತಿಸದೆ ತಾನಾಗಿ ಬಂದು ಉಪಕರಿಸಿದುದು, ಪ್ರಾಣದಾನ ಮಾಡಿದುದು ಅಸಾಮಾನ್ಯವಲ್ಲದೆ ಮತ್ತೇನು ?" ಎಂದು ಮಾಧವ ಮಕರಂದರಿಬ್ಬರೂ ಸೌದಾಮಿನಿಯ ಉಪಕಾರವನ್ನು ಸ್ಮರಿಸಿ ಗುಣಕಥನ ಮಾಡಿದರು.

"ಇದೆಲ್ಲಾ ಇವರ ಸೌಜನ್ಯದ ಮಾತು. ಇದರಲ್ಲೇನಿದೆ?" ಎಂದುಕೊಂಡಳು ಸೌದಾಮಿನಿ.

ಮಾಲತಿ ಬದುಕ್ಕಿದ ಸುದ್ದಿಯನ್ನು ತಿಳಿಸಿ ಭೂರಿವಸುವನ್ನು ಬದುಕಿಸಲು ಹೋದ ಸೌದಾಮಿನಿಯನ್ನು ಕಂಡು ಪದ್ಮಾವತೀರಾಜನು ಸಮಾಚಾರವನ್ನು ತಿಳಿದುಕೊಂಡನು. ಅಂತೂ ತನ್ನಿಂದಾಗಿ ಆ ಬಡಹುಡುಗಿ ಸಾಯಲಿಲ್ಲವಲ್ಲ ಹಾಗೂ ತನ್ನ ಅಮಾತ್ಯನೂ ಆನಂದಿಸಿದನಲ್ಲ ಎಂದು ರಾಜನು ತೃಪ್ತಿಗೊಂಡನು. ಆತನು ನಂದನನೊಡನೆ ಕುಳಿತು ಒಂದು ಪತ್ರವನ್ನು ಮಾಧವನಿಗೆ ಬರೆಸಿ ಸೌದಾಮಿನಿಯ ಕೈಯಲ್ಲಿ ಕೊಟ್ಟಿದ್ದನು. ಅದನ್ನು ಆಕೆ ಮಾಧವನ ಕೈಯಲ್ಲಿತ್ತಳು. ಕಾಮಂದಕಿ ಅದನ್ನು ತೆಗೆದು ಓದಿದಳು.

"ನಿಮಗೆ ಮಂಗಳವಾಗಲಿ. ರಾಜನು ಆಜ್ಞಾಪಿಸುವುದೇನಂದರೆ, ಉತ್ತಮ ವಂಶಜನೂ ಶ್ರೇಷ್ಠನೂ ಸದ್ಗುಣಿಯೂ ಆದ ನಿನ್ನಲ್ಲಿ ನಮಗೇನೂ ಮನಸ್ತಾಪವಿಲ್ಲ. ನಿನ್ನ ಶೌರ್ಯ ಧೈರ್ಯ ಸೌಶೀಲ್ಯ ಸದ್ಗುಣಗಳನ್ನೆಲ್ಲಾ ನಾವು ಮೆಚ್ಚಿದ್ದೇವೆ. ಭೂರಿವಸುವಿನ ಅಳಿಯನೆಂದರೆ ನೀನು ನಮ್ಮ ಅಳಿಯನಾದಂತೆಯೇ. ಮಾತ್ರವಲ್ಲದೆ ನಂದನನ ತಂಗಿ ನಿನ್ನ ಮಿತ್ರ ಮಕರಂದನಿಗೆ ಘಟಿಸಿದ ಬಗ್ಗೆ ಕೂಡಾ ನಮ್ಮ ಒಪ್ಪಿಗೆಯಿದೆ."

ಅರಸನ ಪತ್ರವನ್ನು ನೋಡಿ ಎಲ್ಲರೂ ಆನಂದಸಾಗರದಲ್ಲಿ ಓಲಾಡಿದರು. ಅಬ್ಬ ! ಎಲ್ಲಾ ತೊಂದರೆಗಳಿಂದಲೂ ಪಾರಾದಂತಾಯಿತೆಂದು ಸಕಲರೂ ಸಮಾಧಾನದ ನಿಟ್ಟುಸಿರು ಬಿಟ್ಟರು.

ಕಾಮಂದಕಿ ವಿಶೇಷ ತೃಪ್ತಿಪಟ್ಟಳು. ಅನಿರೀಕ್ಷಿತವಾದ ತೊಡಕು ಬಂದುದು ದೈವಿಕವಾದರೂ, ತನ್ನ ಸೂತ್ರಧಾರತ್ವದಲ್ಲಿ ನಡೆದ ಈ ನಾಟಕವು ಯಶಸ್ವಿಯಾಗಿ ಕೊನೆಗೊಂಡ ಬಗ್ಗೆ ಆಕೆ ಬಹಳ ಹೃಷ್ಟಳಾದಳು. ಮುದುಕನ ವಿವಾಹವನ್ನು ತಪ್ಪಿಸಿ ಅನುರೂಪ ವಿವಾಹವನ್ನು ಘಟಿಸುವಂತೆ ಮಾಡಿದುದಲ್ಲದೆ ಅಮಾತ್ಯ ಭೂರಿವಸು-ದೇವರಾತರು ಮಾಡಿದ ಕೊಳ್ಕೊಡುಗೆಯ ಪ್ರತಿಜ್ಞೆಯನ್ನು ಸಫಲಗೊಳಿಸಿದಂತಾಯಿತು ಎಂದು ಆಕೆಗೆ ತೃಪ್ತಿ ಮೂಡಿಬಿಟ್ಟಿತ್ತು.

ಎಷ್ಟೇ ಕಷ್ಟವಾದರೂ ಕೊನೆಗೆ ಇಷ್ಟಾರ್ಥವು ನೆರವೇರಿದ ಬಗ್ಗೆ ಹಾಗೂ ಎಲ್ಲರೂ ಒಂದೆಡೆ ಸೇರಿ ಆನಂದಿಸುವಂತಾದ ಬಗ್ಗೆ ಎಲ್ಲರಿಗೂ ಹರ್ಷವಾಯಿತು. ರಾಜ-ನಂದನರಿಗೂ ಆನಂದವಾದುದು ಇದರಲ್ಲಿ ಮತ್ತಷ್ಟು ವಿಶೇಷ. ಮಾಧವನಿಗೆ ತನ್ನ ಬಯಕೆಯೊಂದಿಗೆ ಗೆಳೆಯ ಮಕರಂದನ ಇಚ್ಛಾಪೂರ್ತಿಯಾದ ಬಗ್ಗೆ ಆನಂದವು ಇಮ್ಮಡಿಸಿತು.

ಕವಿ-ಕಾವ್ಯ ಪರಿಚಯ

ಯೇ ನಾಮ ಕೇಚಿದಿಹ ನಃ ಪ್ರಥಯಂತ್ಯವಜ್ಞಾಂ,
ಜಾನಂತಿ ತೇ ಕಿಮಪಿ ತಾನ್ ಪ್ರತಿ ನೈಷ ಯತ್ನಃ ।
ಉತ್ಪತ್ಸ್ಯತೇ ಮಮ ತು ಕೋಽಪಿ ಸಮಾನಧರ್ಮಾ,
ಕಾಲೋ ಹ್ಯಯಂ ನಿರವಧಿರ್ವಿಪುಲಾ ಚ ಪೃಥ್ವೀ ॥

"ಪ್ರತ್ಯಗಾತ್ಮ ವಸ್ತುವನ್ನೇ ಕೇಂದ್ರೀಕರಿಸಿಕೊಂಡು ಇದೆಂತಹ ಅಲ್ಪ ಕೃತಿಯೆಂದು ನನ್ನ ಕೃತಿಯನ್ನು ತಿರಸ್ಕರಿಸುವವರಿಗಾಗಿ ನಾನು ಈ ಕೃತಿ ರಚಿಸಿಲ್ಲ. ನನಗೆ ಸಮಾನನಾದವನು ಹುಟ್ಟಬಹುದು. ಕಾಲವು ನಿರವಧಿಯಾದುದು. ಪೃಥ್ವಿಯೂ ವಿಶಾಲವಾದುದು."

ಮಹಾಕವಿ ಭವಭೂತಿಯು ಆತ್ಮವಿಶ್ವಾಸದಿಂದ ನುಡಿದ ಮಾತುಗಳಿವು. ಅಂದರೆ ಅಸಹೃದಯ ಹಾಗೂ ಮಾತ್ಸರ್ಯಗ್ರಸ್ತ ಟೀಕೆ ಅಥವಾ ಕಾವ್ಯ ನಾಟಕಗಳ ಕುರಿತಾದ ವೇದಾಂತಿಗಳ ಅವಹೇಳನೆ ಇವುಗಳನ್ನು ಖಂಡಿಸುವುದರೊಂದಿಗೆ ತನ್ನ ಕಥಾವಸ್ತು, ಉದ್ದೇಶ, ಪ್ರಯೋಗ–ನಾವೀನ್ಯಗಳ ಕುರಿತು ಭವಭೂತಿ ಮೇಲಿನಂತೆ ಆತ್ಮಸಮಾಧಾನ ತಾಳಿಕೊಂಡಿದ್ದಾನೆ.

ಮಾಲತೀ–ಮಾಧವವು ಭವಭೂತಿಯ ಉತ್ಕೃಷ್ಟ ಕೃತಿಗಳಲ್ಲೊಂದು. "ಉತ್ತರೇ ರಾಮಚರಿತೇ ಭವಭೂತಿರ್ವಿಶಿಷ್ಯತೇ" ಉತ್ತರರಾಮಚರಿತದಲ್ಲಿ ಆತನ ವೈಶಿಷ್ಟ್ಯವೆಂದು ಹೇಳಿದರೂ, ಮಾಲತೀ–ಮಾಧವದಲ್ಲೂ ಆತನ ಉತ್ತಮ ಕವಿತ್ವವು ಅಭಿವ್ಯಕ್ತವಾಗಿದೆ. ಮಾಲತೀ–ಮಾಧವದ ವೈಶಿಷ್ಟ್ಯವೆಂದರೆ, ಕಥಾವಸ್ತು, ರಸ, ನಿರೂಪಣೆಗಳ ನಾವೀನ್ಯ. ಮಹಾವೀರಚರಿತ್ರೆ, ಉತ್ತರರಾಮಚರಿತ್ರೆಗಳಂತೆ ಆತನು ಪ್ರಸಿದ್ಧ ಇತಿವೃತ್ತಗಳನ್ನು ಬಳಸದೆ ಮಾಲತೀ–ಮಾಧವದಲ್ಲಿ ತನ್ನ ಕಾಲದ ಸಾಮಾಜಿಕ ವಸ್ತುವನ್ನೇ ಬಳಸಿಕೊಂಡಿದ್ದಾನೆ.

ಧನಬಲ ಅಧಿಕಾರ ಬಲಗಳಿಂದ ಬಾಲಿಕೆಯರನ್ನು ವಿನಾಶ ಮಾಡಿ

ಕೊಳ್ಳಬಯಸುವವರ ವಿರುದ್ಧ ಭವಭೂತಿಯು ಕ್ರಾಂತಿಯನ್ನೆಬ್ಬಿಸಿದ್ದಾನೆ. ಮುದುಕನಾದ ನಂದನನಿಗೆ ಮಾಲತಿಯನ್ನು ತಪ್ಪಿಸಿ ಮಾಧವನಿಗೆ ವಿವಾಹ ಮಾಡುವ ಯತ್ನ ನಡೆಸುವುದು ಒಂದು ಸಾಮಾಜಿಕ ಹಿತದ ಕಾರ್ಯ. ಇಂಥ ಚಿತ್ರಣವನ್ನು ನಿರ್ಮಿಸಿ ಭವಭೂತಿ ಜನತೆಗೊಂದು ಪಾಠ ಕಲಿಸಿದ್ದಾನೆ

ಕಥಾವಸ್ತುವಿನ ನಿರೂಪಣೆ, ಮಾತಿನ ಚಮತ್ಕಾರಗಳು, ಎಲ್ಲಾ ಈ ಕೃತಿಯಲ್ಲಿ ಚೆನ್ನಾಗಿವೆ.

ಭೂಮ್ನಾ ರಸಾನಾಂ ಗಹನಾಃ ಪ್ರಯೋಗಾಃ;
ಸೌಹಾರ್ದಹೃದ್ಯಾನಿ ವಿಚೇಷ್ಟಿತಾನಿ ।
ಔದ್ಧತ್ಯಮಾಯೋಜಿತಕಾಮಸೂತ್ರಂ,
ಚಿತ್ರಾಃ ಕಥಾ ವಾಚಿ ವಿದಗ್ಧತಾ ಚ ॥

ನಾನಾ ರಸಗಳ ಗಹನವಾದ ಪ್ರಯೋಗ, ಮನೋಹರವಾದ ನಡವಳಿಕೆಗಳು, ನಾಯಿಕಾ–ನಾಯಕರ ಸಮಾಗಮಕ್ಕೆ ಬೇಕಾದ ಔದ್ಧತ್ಯಾವಲಂಬನೆ, ನಾನಾವಿಧ ಕತೆಗಳು, ಮಾತಿನ ಚಮತ್ಕೃತಿ ಇವುಗಳು ಈ ಕೃತಿಯ ವೈಶಿಷ್ಟ್ಯ. ಭೂರಿವಸುವಿನ ಮಾತಿನ ಚಮತ್ಕಾರ, ಕಾಮಂದಕಿಯ ನೀತಿಪ್ರಯೋಗ, ಅಲ್ಲಲ್ಲಿ ವೀರ, ರೌದ್ರ, ಬೀಭತ್ಸ ಮೊದಲಾದ ರಸಗಳ ಚಿತ್ರಣ, ಶೃಂಗಾರದ ಅಪ್ರತಿಮ ವಿಲಾಸಗಳೆಲ್ಲ ಮಾಲತೀ-ಮಾಧವದಲ್ಲಿ ಚೆನ್ನಾಗಿ ಬಂದಿವೆ.

ನಾಟ್ಯಶಾಸ್ತ್ರ ಅಥವಾ ಲಕ್ಷಣ ಗ್ರಂಥದ ದೃಷ್ಟಿಯಲ್ಲಿ ಮಾಲತೀ–ಮಾಧವವು 'ಪ್ರಕರಣ'ದ ಜಾತಿಗೆ ಸೇರುತ್ತದೆ. ಪ್ರಕರಣದಲ್ಲಿ ಕಥಾವಸ್ತು ಉತ್ಪಾದ್ಯವಾಗಿರಬೇಕು. ಇಲ್ಲಿ ಕಥಾವಸ್ತು ಐತಿಹಾಸಿಕ ಅಥವಾ ಪೌರಾಣಿಕವಾಗಿರದೆ ಕವಿಯ ಕಾಲದ ಸಾಮಾಜಿಕ ವಿಚಾರವೇ ಆಗಿದೆ. ಧೀರಲಲಿತನಾದ ಮಾಧವನೇ ಕಥಾನಾಯಕನು. ನಿಶ್ಚಿಂತನೂ, ಕಲಾಸಕ್ತನೂ, ಸುಖಿಯೂ, ಮೃದುವೂ ಆದವನೇ ಧೀರಲಲಿತನೆಂದು ಲಕ್ಷಣಕಾರರ ಆಶಯ. ಮಾಧವನು ಅಂಥ ವ್ಯಕ್ತಿ. ಮಾಲತೀಮಾಧವದಲ್ಲಿ ಪ್ರಧಾನರಸವೆಂದರೆ ಶೃಂಗಾರ. ಇತರ ರಸಗಳೆಲ್ಲ ಇದನ್ನು ಪರಿಪೋಷಿಸುತ್ತಿವೆ. ಶ್ಮಶಾನವರ್ಣನೆಯ ಕಾಲದಲ್ಲಿ ಬೀಭತ್ಸ, ಮಾಲತೀಸಂಹಾರಕ್ಕಾಗಿ ಅಘೋರಘಂಟನು ಕತ್ತಿಯೆತ್ತುವಲ್ಲಿ ಭಯಾನಕ, ಉದ್ಯಾನದಲ್ಲಿ ಮದಯಂತಿಕೆಯ ಮೇಲೆ ಹುಲಿಯೆರಗುವಲ್ಲಿ

ರೌದ್ರ, ಭಯಾನಕ, ತತ್ಕ್ಷಣ ಮಕರಂದನ ವೀರಾವೇಶ, ಆಮೇಲೆ ತುಸು ಕರುಣ, ಮಾಲತಿಯ ಅಪಹಾರ ಕಾಲದಲ್ಲಿ ಇತರ ವ್ಯಕ್ತಿಗಳಿಗೆಲ್ಲ ಕರುಣವಾದರೆ, ಮಾಧವನಿಗೆ ವಿಪ್ರಲಂಭ ಶೃಂಗಾರದ ಪರಮಾವಧಿ. ಮಾಧವನು ಅಘೋರಘಂಟನನ್ನು ಸಂಹರಿಸುವಲ್ಲಿ ರಾಜನ ಸೈನಿಕರೊಂದಿಗೆ ಕಾದಾಡುವಲ್ಲಿ ವೀರರಸವಿದೆ. ಹೀಗೆ ರಸಗಳೆಲ್ಲ ಪ್ರಧಾನವಾದ ಶೃಂಗಾರವನ್ನು ಪರಿಪೋಷಿಸುತ್ತ ಸುಂದರವಾಗಿ ಬಂದಿವೆ. ಕಥಾಸಂದರ್ಭವನ್ನೂ ಸುಂದರವಾಗಿ ಹೆಣೆಯಲಾಗಿದೆ. ಮಕರಂದನು ನಂದನನನ್ನು ಮೋಸಗೊಳಿಸಲು ಮಾಲತಿಯ ವೇಷ ಹಾಕಿಕೊಂಡು ಹೋಗಿ ಮದಯಂತಿಕೆಯನ್ನೂ ಒಲಿಸಿಕೊಂಡು ಬರುವುದು ಒಂದು ಹೊಸ ಪ್ರಯೋಗ, ಚಮತ್ಕಾರಜನಕ ಘಟನೆ. ಕಾಮಂದಕಿಯ ಚತುರತೆಯಿದು. ಕಾಮಂದಕಿಗೆ ಈ ಶ್ರೇಯಸ್ಸು ಸಂಪೂರ್ಣವಾಗಿ ಸಲ್ಲುತ್ತದೆ. ಸಂನ್ಯಾಸಿನಿಯಾದರೂ ಆಕೆ ಸಾಮಾಜಿಕವಾಗಿ ಸಲ್ಲಿಸಿದ ಈ ಮಹೋಪಕಾರದ ಚಿತ್ರಣದಿಂದ ಭವಭೂತಿ ಒಂದು ಆದರ್ಶವನ್ನು ಪ್ರದರ್ಶಿಸಿದ್ದಾನೆ.

ರಾಜನು ಮಾಲತಿಯನ್ನು ನಂದನನಿಗೆ ಕೇಳಿದಾಗ ಭೂರಿವಸುವು ಕೊಟ್ಟ ಚಮತ್ಕಾರಪೂರ್ಣ ಉತ್ತರ, ಲವಂಗಿಕೆ ಮಾಲತಿಗೆ ಮಾಧವನಲ್ಲಿರುವ ಪ್ರೇಮವನ್ನು ವ್ಯಕ್ತಪಡಿಸಿದ ಭಂಗಿ ಇವುಗಳಲ್ಲೆಲ್ಲ ಮಾತಿನ ವೈದಗ್ಧ್ಯವು ವ್ಯಕ್ತವಾಗಿದೆ.

ಇನ್ನು ಅಲ್ಲಲ್ಲಿ ಪ್ರೇಮದ ಬಗ್ಗೆ ಕವಿ ಹೇಳಿದುದು ಮನೋಹರವಾಗಿದೆ. ಅದರಲ್ಲಿ ಉಲ್ಲೇಖನೀಯವಾದ ಅಂಶವೊಂದು ಹೀಗಿದೆ:

> ವ್ಯತಿಷಜತಿ ಪದಾರ್ಥಾನಾಂತರಃ ಕೋಽಪಿ ಹೇತುಃ,
> ನ ಖಲು ಬಹಿರುಪಾಧೀನ್ ಪ್ರೀತಯಃ ಸಂಶ್ರಯಂತೇ ।
> ವಿಕಸತಿ ಹಿ ಪತಂಗಸ್ಯೋದಯೇ ಪುಂಡರೀಕಂ,
> ದ್ರವತಿ ಚ ಹಿಮರಶ್ಮಾವುದ್ಗತೇ ಚಂದ್ರಕಾಂತಃ ॥

ಆಂತರವಾದ ಯಾವುದೋ ಒಂದು ಕಾರಣವು ಪ್ರೇಮಾಭಿವ್ಯಕ್ತಿಗೆ ಅಥವಾ ಚೇತನಾಚೇತನ ಭಾವ ಸಂಘಟನೆಗೆ ಕಾರಣವಲ್ಲದೆ, ಪ್ರೀತಿಯೆಂಬೂ ಬಾಹ್ಯೋಪಾಧಿಗಳನ್ನವಲಂಬಿಸಿಲ್ಲ. ಸೂರ್ಯೋದಯವಾದಾಗ ಕಮಲ

ಅರಳುವುದು, ಚಂದ್ರೋದಯವಾದಾಗ ಚಂದ್ರಕಾಂತ ದ್ರವಿಸುವುದು ಕಂಡು ಬರುತ್ತದೆ. ಇದಕ್ಕೆ ಬಾಹ್ಯವಾದ ಕಾರಣವೇನು? ಎಷ್ಟೋ ದೂರದ, ಬಾಹ್ಯಸಂಬಂಧವೇನೂ ಇಲ್ಲದ ಈ ವಸ್ತುಗಳ ಸಂಪರ್ಕಕ್ಕೆ ಗೂಢವಾದ ಪ್ರಾಕೃತಿಕವಾದ ಸ್ನೇಹವೇ ನಿಮಿತ್ತ; ಬೇರೇನೂ ಅಲ್ಲ. ಇದು ಭವಭೂತಿಯ ಸುಂದರವಾದ ಪ್ರೇಮದ ವ್ಯಾಖ್ಯೆಗೊಂದು ನಿದರ್ಶನ.

ಇನ್ನು ತಟಸ್ಥನಾಗಿದ್ದುಕೊಂಡು ತನ್ನ ಕೆಲಸವನ್ನು ಸಾಧಿಸುವವನ ವ್ಯವಹಾರ ಚಾಕಚಕ್ಯವನ್ನೂ ಭವಭೂತಿ ಕೊಂಡಾಡಿದ್ದಾನೆ. ಹೊರಗಿನಿಂದ ಎಲ್ಲರಿಗೂ ಇಷ್ಟವಾಗುವಂತೆ ವ್ಯವಹರಿಸುತ್ತ, ಇತರರಿಗೆ ಸಂಶಯ ಬಾರದಂತೆ ಸೂಕ್ಷ್ಮವಾಗಿ ನಡೆದುಕೊಂಡು, ಎಲ್ಲವನ್ನೂ ಕಪಟದಿಂದ ಮುಚ್ಚಿ ತಟಸ್ಥನಾಗಿದ್ದು ತನ್ನ ಕೆಲಸಗಳನ್ನೂ ಸಾಧಿಸುತ್ತಾನೆ. ಮೌನವಾಗಿಯೂ ಇರುತ್ತಾನೆ. ಇದು ಚತುರ ತಾಟಸ್ಥ್ಯದ ಲಕ್ಷಣ. ಇದನ್ನೇ ಕೃತಿಯಲ್ಲಿ ಚಿತ್ರಿಸಿ ಭವಭೂತಿ ತನ್ನ ಜಾಣ್ಮೆಯನ್ನೂ ಮೆರೆಸಿದ್ದಾನೆ.

ಹೀಗೆ ಮಾಲತೀಮಾಧವದಿಂದ ಭವಭೂತಿ ಸಾಮಾಜಿಕವಾದ ಮಹತ್ತರವಾದ ಹಿತದ ಕಾರ್ಯವನ್ನು ಸಾಧಿಸಿದ್ದಾನೆ; ಸರಸ ಚಿತ್ರವನ್ನಿತ್ತಿದ್ದಾನೆ.

ಭವಭೂತಿ ಕಾಳಿದಾಸಾದ್ಯರಂತೆ ಉನ್ನತ ಸ್ಥಾನದಲ್ಲಿ ನಿಲ್ಲತಕ್ಕ ಒಬ್ಬ ಶ್ರೇಷ್ಠ ಸಂಸ್ಕೃತ ಕವಿ. ಇವನ ಮಹಾವೀರ ಚರಿತ್ರೆ, ಉತ್ತರರಾಮ ಚರಿತೆ, ಮಾಲತೀಮಾಧವ ಈ ಮೂರೂ ಕೃತಿಗಳಿಂದಲೂ ಈತನ ಮಹಾ ಕವಿತ್ವವೂ ರಸಜ್ಞತೆಯ ಪರಿಪಕ್ವತೆಯೂ ಚೆನ್ನಾಗಿ ಅಭಿವ್ಯಕ್ತವಾಗಿದೆ.

ಈತನ ಕಾಲ ಏಳನೆಯ ಶತಮಾನವೆಂದು ನಿರ್ಣಯಿಸಲಾಗಿದೆ. ಮಾಲತೀಮಾಧವದ ಪ್ರಸ್ತಾವನೆಯಿಂದ ತಿಳಿಯುವಂತೆ, ಈತನ ಊರು ಪದ್ಮಪುರ, ಭಟ್ಟ ಗೋಪಾಲನ ಮೊಮ್ಮಗ, ನೀಲಕಂಠನ ಮಗ, ಶ್ರೀಕಂಠ ಎಂದು ಇವನ ಹೆಸರಿರಬೇಕು. "ಶ್ರೀಕಂಠಪದಲಾಂಛನಃ". ಎಂದಿದೆ. ಭವಭೂತಿ ಎಂಬ ಆತನ ಹೆಸರು ವ್ಯಾವಹಾರಿಕವಾದುದೆನ್ನುತ್ತಾರೆ. ವಿಚಾರ ಮಾಡಿದಾಗ ಶ್ರೀಕಂಠ ಎಂಬುದು ಆತನ ನಿಜವಾದ ಹೆಸರಾಗಿರಬೇಕು, ಭವಭೂತಿ ಎಂಬುದು ಕವಿನಾಮವಾಗಿರಬೇಕು ಎಂದೆನಿಸುತ್ತಿದೆ. ಇದಕ್ಕೊಂದು ಕರ್ಣಾಕರ್ಣಿಕೆಯಾದ ಆಧಾರವೂ ಇದೆ.

"ತಪಸ್ವೀ ಕಾಂ ಗತೋಽವಸ್ಥಾಮಿತಿ ಸ್ಮೇರಾನನಾವಿವ ।
ಗಿರಿಜಾಯಾಃ ಸ್ತನೌ ವಂದೇ ಭವಭೂತಿಸಿತಾನನೌ ॥"

ಈತನ ಅವಸ್ಥೆ ಏನಾಗಿ ಬಿಟ್ಟಿತೋ ಎಂದು ನಗುತ್ತವೊ ಎಂಬಂತಿರ ಪರಮೇಶ್ವರನು ಬಳಿದುಕೊಂಡ ಬೂದಿಯಿಂದ ಬೆಳ್ಳಗಾದ ಮುಖಗಳ ಗಿರಿಜೆಯ ಸ್ತನಗಳಿಗೆ ನಮಸ್ಕರಿಸುತ್ತೇನೆ ಎಂಬ ಕವಿತೆ ರಚಿಸಿದ್ದನ್ನು ಕೆ ಈತನನ್ನು ಭವಭೂತಿ ಎಂದು ಸಂಬೋಧಿಸಿ ಈತನ ರಸಿಕತೆ, ವೈಶಿಷ್ಟ್ಯ ಗಾಗಿ ಹಾಗೆ ಕರೆದಿರಬೇಕು. ಇದನ್ನೇ ಆತನು 'ಕವಿನಾಮ' ವಾಗಿ ಬಳ ಬೇಕು ಎನಿಸುತ್ತಿದೆ.

ಅಂತೂ ಭವಭೂತಿಯು ಸಂಸ್ಕೃತ ಸಾಹಿತ್ಯದಲ್ಲಿ ಶ್ರೇಷ್ಠ ಕವಿಯೆ ವುದು ನಿರ್ವಿವಾದ. ಆತನ ಮಾಲತೀಮಾಧವವೂ ತನ್ನದೇ ಆದ ವಿಶಿಷ್ಟ ಯಿಂದ ತುಂಬಿದ ಒಂದು ಕೃತಿಯೆನ್ನುವುದರಲ್ಲಿ ಸಂಶಯವಿಲ್ಲ.